ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜನವರಿ 21 ಬುಧವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 273 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಧಿಕಾರವೂ ಶಾಶ್ವತ ಅಲ್ಲ...! ತಾಳ್ಮೆಯೂ ಶಾಶ್ವತ ಅಲ್ಲ...!!

ಮಾಜಿ ಸಂಸದ ಡಿ.ಕೆ. ಸುರೇಶ್ ಪರೋಕ್ಷ ಎಚ್ಚರಿಕೆ

■ ಕೆಲವರು ಜಾತಿ ಹೆಸರಲ್ಲಿ ಅಧಿಕಾರಕ್ಕೆ ಅಂಟಿಕೊಳ್ಳುತ್ತಾರೆ ■ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮತ ಪತ್ರ ಬಳಕೆಗೂ ಅಸಮಾಧಾನ

ಬೆಂಗಳೂರು, ಜ.20(ಕೆಎಂಶಿ)– ಜಾತಿ ಮೇಲೆ ರಾಜಕಾರಣ ಮಾಡಿದರೆ ಅಭಿವೃದ್ಧಿ ಕುಂಠಿತ ಗೊಳ್ಳುತ್ತದೆ. ಕೆಲವರು ಇದೇ ಹೆಸರಿನಲ್ಲಿ ಅಧಿ ಕಾರಕ್ಕೆ ಅಂಟಿಕೊಂಡು ಇರುತ್ತಾರೆ ಎಂದು ಮಾಜಿ ಸಂಸದ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್ ಸಹೋದರ ಡಿ.ಕೆ. ಸುರೇಶ್ ಇಂದಿಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ವಿರುದ್ಧ ಪರೋಕ್ಷ ವಾಗ್ದಾಳಿ ಮಾಡಿದ್ದಾರೆ.


ಡಿ.ಕೆ.ಸುರೇಶ್

ಮತಪತ್ರಕ್ಕೆ ಅಸಮಾಧಾನ: ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮತಪತ್ರ ಬಳಸುವ ಸರ್ಕಾರದ ನಿರ್ಧಾರದ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿ, ನಾವು ಬಹಳ ಮುಂದೆ ಹೋಗಿದ್ದೇವೆ. ಹಿಂದೆ ಸರಿಯುವುದು ಸರಿಯಲ್ಲ ಎನ್ನುವ ಮೂಲಕ ರಾಜ್ಯ ಸರ್ಕಾರದ ನಿಲುವನ್ನು ಸುರೇಶ್ ಟೀಕಿಸಿದ್ದಾರೆ.

ನಗರದ ತಮ್ಮ ನಿವಾಸದಲ್ಲಿ ತುರ್ತು ಸುದ್ದಿಗೋಷ್ಠಿ ಉದ್ದಕ್ಕೂ ಸಿದ್ದರಾಮಯ್ಯ ಆಡಳಿತ ಮತ್ತು ರಾಜಕೀಯ ವೈಖರಿಯನ್ನು ವ್ಯಂಗ್ಯ ಮಾಡಿದರು.

ಮುಖ್ಯಮಂತ್ರಿ ಅಧಿಕಾರವನ್ನು ಪಂಚಾಯತ್ ಅಧ್ಯಕ್ಷಗಾದಿಗೆ ಹೋಲಿಕೆ ಮಾಡಿ ಮಾತನಾಡಿದ ಅವರು, ಚುನಾವಣೆಗೆ ನಿಲ್ಲಲು ಸಿದ್ಧರಿರುವುದಿಲ್ಲ. ಅಧ್ಯಕ್ಷ ಸ್ಥಾನ ದಕ್ಕಲಿದೆ ಎಂದಾಗ ಅಧಿಕಾರ ಬೇಕು ಎನ್ನುತ್ತಾರೆ. ಬೇರೆಯವರಿಗೆ ಹಸ್ತಾಂತರ ಸಮಯ ಬಂದಾಗ, 15 ದಿನ ಸಮಯ ಕೊಡು ಕಾರ್ಡ್‌ಲ್ಲಿ ಹೆಸರು ಹಾಕಿಸಿದ್ದೇನೆ ಎನ್ನುತ್ತಾರೆ. ನಂತರ ಮಾರ್ಚ್ ಮುಗಿಯಲಿ ಎನ್ನುತ್ತಾರೆ, ಮತ್ತೆ ಇನ್ನು ಮೂರು ದಿನ ಅವಕಾಶ ನೀಡಿ ಆಮೇಲೆ ಮಾಜಿ ಅನ್ನಿಸಿಕೊಳ್ಳುತ್ತೇನೆ ಎಂಬ ರಾಗ ತೆಗೆಯುತ್ತಾರೆ ಎಂದರು.

ಸಿದ್ದರಾಮಯ್ಯ ಅಧಿಕಾರ ಹಸ್ತಾಂತರ ವಿಷಯದಲ್ಲಿ ನಡೆದುಕೊಳ್ಳುತ್ತಿರುವುದನ್ನು ಈ ರೀತಿ ಹೋಲಿಕೆ ಮಾಡಿ ವ್ಯಂಗ್ಯವಾಡಿದ ಸುರೇಶ್, ರಾಜಕಾರಣಿಗೆ ಅಧಿಕಾರವೂ ಶಾಶ್ವತ ಅಲ್ಲ. ತಾಳ್ಮೆಯೂ ಶಾಶ್ವತ ಅಲ್ಲ ಎಂದು ಎಚ್ಚರಿಸಿದರು.

ಬಜೆಟ್ ಸಿದ್ಧತೆ ಬಗ್ಗೆ ಮಾತನಾಡಿದ ಅವರು, ಈಗಾಗಲೇ ಬಜೆಟ್‌ಗಳನ್ನು ಮಂಡಿಸಿ ದಾಖಲೆ ಮಾಡಿದ್ದಾರೆ, ಅದಕ್ಕೆ ಇನ್ನೊಂದು ಗರಿ ಸಿಕ್ಕಿಸಿ ಕೊಳ್ಳಲಿ ಎಂದರು. ಜಾತಿ ರಾಜಕಾರಣ ಬಹಳ ದಿನ ನಡೆಯುವುದಿಲ್ಲ. ಒಂದು ಪಕ್ಷಕ್ಕೆ ಒಕ್ಕಲಿಗ, ಲಿಂಗಾಯಿತ, ಎಸ್‌ಸಿ, ಎಸ್‌ಟಿ ಎಲ್ಲರ ಮತಗಳೂ ಬೇಕು. ಯಾವುದೇ ಒಂದು ವರ್ಗ ಬಿಟ್ಟು ರಾಜ ಕಾರಣ ಮಾಡಲಾಗದು. ಜಾತಿ ಹೆಸರಿನಲ್ಲಿ ಸರ್ಕಾರ ಮಾಡಿದರೆ ಅಭಿವೃದ್ಧಿ ಕುಂಠಿತ ಗೊಳ್ಳುತ್ತದೆ ಎಂದು ಸದಾ ಅಹಿಂದ ಎನ್ನುವ ಮುಖ್ಯಮಂತ್ರಿ ಆಡಳಿತ ವೈಖರಿಯನ್ನು ಪರೋಕ್ಷ ವಾಗಿ ಜರಿದರು.

■ 6ನೇ ಪುಟಕ್ಕೆ

ಅಧಿಕಾರ ಹಸ್ತಾಂತರದ ಗೊಂದಲದ ನಡುವೆ ಸಿಎಂ ಸಿದ್ದರಾಮಯ್ಯ ಬಜೆಟ್ ತಯಾರಿ

ಬೆಂಗಳೂರು, ಜ.20(ಕೆಎಂಶಿ)–ಅಧಿಕಾರ ಹಸ್ತಾಂತರ ಗೊಂದಲದ ನಡುವೆಯೇ ಮುಖ್ಯ ಮಂತ್ರಿ ಸಿದ್ದರಾಮಯ್ಯ 2026–27ನೇ ಸಾಲಿನ ಬಜೆಟ್ ಮಂಡನೆಗೆ ಸಿದ್ಧತೆ ಆರಂಭಿಸಿದ್ದಾರೆ.



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬೆಂಬ ಲಿತ ಬಣದ ಶಾಸಕರು ನಾಳೆ ಸಭೆ ಸೇರಿ ಬಂಡಾಯ ಬಾವುಟ ಹಾರಿಸಲಿದ್ದಾರೆ ಎಂಬ ವರದಿ ಬೆನ್ನಲ್ಲೇ ಮುಖ್ಯಮಂತ್ರಿ ಇಂದು ಬಜೆಟ್ ಪೂರ್ವಭಾವಿ ಸಭೆಯನ್ನೇ ಆರಂಭಿಸಿದರು.

ಮುಂಬರುವ ಸಾಲಿನ ಮುಂಗಡಪತ್ರವನ್ನೂ ನಾನೇ ಮಂಡಿಸುತ್ತೇನೆ ಎಂಬ ಸಂದೇಶವನ್ನು ಪಕ್ಷದ ಶಾಸಕರು ಮತ್ತು ವಿರೋಧಿಗಳಿಗೆ, ಮಿಗಿ ಲಾಗಿ ಅಧಿಕಾರಿಗಳಿಗೆ ನೀಡಲು ಸಭೆ ಮಾಡಿದರು ಎನ್ನಲಾಗಿದೆ. ಮುಖ್ಯಮಂತ್ರಿ ಸಭೆ ನಡೆಸುವು ದಕ್ಕೂ ಮುನ್ನ ಶಿವಕುಮಾರ್ ಸಹೋದರ ಡಿ.ಕೆ. ಸುರೇಶ್, ಪರೋಕ್ಷವಾಗಿ ನಾಯಕತ್ವವನ್ನೇ ಪ್ರಶ್ನಿಸುವಂತೆ ಮಾತನಾಡಿದರು. ಜ.26ರ ಗಣರಾಜ್ಯೋತ್ಸವ ನಂತರ ಬಜೆಟ್ ಸಿದ್ಧತೆ ಆರಂಭಿಸುವುದಾಗಿ ಹೇಳಿದ್ದ ಮುಖ್ಯಮಂತ್ರಿ, ಇಂದು ತಮ್ಮ ಸರ್ಕಾರಿ ನಿವಾಸದಲ್ಲೇ ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚಿಸಿ, ಮುಂಗಡಪತ್ರ ಸಿದ್ಧತೆ ನಡೆಸಿ ಎಂದು ಸೂಚಿಸಿದರು.

ಯುವಕನ ಕೊಚ್ಚಿ ಬರ್ಬರ ಕೊಲೆ

ಆಟೋ ನಿಲುಗಡೆ ಬಾಡಿಗೆ ವಿಷಯದಲ್ಲಿ ಕಿರಿಕ್; ಉದಯಗಿರಿ ಠಾಣಾ ವ್ಯಾಪ್ತಿಯಲ್ಲಿ ಘಟನೆ

- ಮೈಸೂರಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆಯಾ!?; ನಿವಾಸಿಗಳ ಆತಂಕದ ಪ್ರಶ್ನೆ
- 2025ರ ಅಕ್ಟೋಬರ್‌ನಲ್ಲಿ ಸಕ್ರಿಯಗೊಂಡಿದ್ದ ರೌಡಿ ನಿಗ್ರಹ ದಳಕ್ಕೆ ಮತ್ತೇನಾಯಿತು?

ಮೈಸೂರು, ಜ.20(ಆರ್‌ಕೆ)– ಭಾನುವಾರ ಮೈಸೂರಿನ ರಾಜೀವ್‌ನಗರದ 2ನೇ ಹಂತದಲ್ಲಿ ಹಾಡಹಗಲೇ ಗುಂಪೊಂದು ಲಾಂಗು–ಮಚ್ಚುಗಳ ಹಿಡಿದು ಅಟ್ಟಹಾಸ ಮೆರೆದಿತ್ತು. ಈ ವೇಳೆ ಮೂವರು ತೀವ್ರವಾಗಿ ಗಾಯಗೊಂಡಿದ್ದರು. ಇದರ ಬೆನ್ನಲ್ಲೇ ಇಂದು ಮುಂಜಾನೆ ಯುವಕ ನನ್ನು ಐವರ ಗುಂಪು ಮಚ್ಚಿನಿಂದ ಕೊಚ್ಚಿ ಬರ್ಬರವಾಗಿ ಹತ್ಯೆ ಮಾಡಿದೆ. ಈ ಘಟನೆ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಗೌಸಿಯಾನಗರದಲ್ಲಿ ಸಂಭವಿಸಿದ್ದು, ಜನ ಅಕ್ಷರಶಃ ಭಯಭೀತರಾಗಿದ್ದಾರೆ.

ಗೌಸಿಯಾ ನಗರ ನಿವಾಸಿ ಶಹಬಾಜ್(26) ಕೊಲೆಯಾದ ಯುವಕ. ಅದೇ ಬಡಾವಣೆಯ ಜುಬೇರ್ ಹಾಗೂ ಇತರ ನಾಲ್ವರು ಈತನ ಹತ್ಯೆಗೈದು ಪರಾರಿಯಾಗಿದ್ದಾರೆ ಎಂದು ಹೇಳ ಲಾಗಿದೆ. ಗೌಸಿಯಾನಗರದಲ್ಲಿರುವ ಪಾರ್ಕಿಂಗ್ ಶೆಡ್‌ನಲ್ಲಿ ಆಟೋರಿಕ್ಷಾ ನಿಲ್ಲಿಸುವ ಬಾಡಿಗೆ ವಿಚಾರಕ್ಕೆ ಸಂಬಂಧಿಸಿದಂತೆ ಆರಂಭವಾದ ಗಲಾಟೆಯು ಯುವಕನ ಕೊಲೆಯಲ್ಲಿ ಅಂತ್ಯವಾಗಿದೆ.

ಫ್ಯಾಬ್ರಿಕೇಟರ್ ಆಗಿ ಕೆಲಸ ಮಾಡುತ್ತಿದ್ದ ಶಹಬಾಜ್ ಗೌಸಿಯಾ ನಗರದಲ್ಲಿ ರಾತ್ರಿ ವೇಳೆ ಆಟೋ ಪಾರ್ಕಿಂಗ್ ಜಾಗದ ನಿರ್ವಹಣೆ ಮಾಡು ತ್ತಿದ್ದ ಎನ್ನಲಾಗಿದ್ದು, ಇಂದು ಮುಂಜಾನೆ ಸುಮಾರು 1 ಗಂಟೆ ವೇಳೆಗೆ ಅಲ್ಲಿಗೆ ನಾಲ್ವರೊಂದಿಗೆ ಆಟೋ ನಿಲ್ಲಿಸಲು ಬಂದ ಜುಬೇರ್, ಬಾಡಿಗೆ ವಿಚಾರದಲ್ಲಿ ಕ್ಯಾತೆ ತೆಗೆದು ಜಗಳ ಆರಂಭಿಸಿದ್ದಾನೆ. ಆ ಸಂದರ್ಭ, ಅವರ ನಡುವೆ ಮಾತಿಗೆ ಮಾತು ಬೆಳೆದು ಜುಬೇರ್ ಹಾಗೂ ಇತರ ನಾಲ್ವರು ಮಚ್ಚಿನಿಂದ ಮನಸ್ಸೋ ಇಚ್ಛೆ ಹಲ್ಲೆ ನಡೆಸಿ, ಬರ್ಬರವಾಗಿ ಹತ್ಯೆಗೈದು ಪರಾರಿಯಾಗಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ದೇವರಾಜ ಉಪ–ವಿಭಾಗದ ಎಸಿಪಿ ಕೆ. ರಾಜೇಂದ್ರ ಉದಯ ಗಿರಿ ಠಾಣೆ ಇನ್ಸ್‌ಪೆಕ್ಟರ್ ಸುಧಾಕರ್ ಮತ್ತು ಸಿಬ್ಬಂದಿ ಘಟನಾ ಸ್ಥಳಕ್ಕೆ ಧಾವಿಸಿ ಮಹಜರು ನಡೆಸಿದ ಬಳಿಕ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಶವಾಗಾರಕ್ಕೆ ಸಾಗಿಸಿದರು. ಮರಣೋ ತ್ತರ ಪರೀಕ್ಷೆ ನಡೆಸಿದ ಬಳಿಕ ಇಂದು ಸಂಜೆ ವಾರಸುದಾರರಿಗೆ ದೇಹವನ್ನು ಒಪ್ಪಿಸಲಾಯಿತು.

ಪ್ರಕರಣ ದಾಖಲಿಸಿಕೊಂಡಿರುವ ಉದಯ ಗಿರಿ ಠಾಣೆ ಪೊಲೀಸರು ಹತ್ಯೆಗೈದು ಪರಾರಿ ಯಾಗಿರುವ ಆರೋಪಿಗಳ ಪತ್ತೆಗೆ 2 ತಂಡ ಗಳನ್ನು ರಚಿಸಿ, ವ್ಯಾಪಕ ಶೋಧ ಕಾರ್ಯ ನಡೆಸುತ್ತಿದ್ದಾರೆ. ನಗರ ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್, ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆಎಸ್. ಸುಂದರರಾಜ್, ಶ್ವಾನದಳ ಮತ್ತು ಬೆರಳಚ್ಚು ಮುದ್ರೆ ಘಟಕದ ಸಿಬ್ಬಂದಿ ಸಹ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿದ್ದಾರೆ.

ಕಾನೂನು ಸುವ್ಯವಸ್ಥೆ ಕುಸಿದಿದೆ..?: ಮೈಸೂರಲ್ಲಿ ಇತ್ತೀಚೆಗೆ ದರೋಡೆ, ಮಾರಾಮಾರಿ, ಹಲ್ಲೆ, ಕೊಲೆಯಂತಹ ಪ್ರಕರಣಗಳು ನಿರಂತರವಾಗಿ ನಡೆಯುತ್ತಿವೆ. ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಂತೂ ಸಮಾಜ ಘಾತುಕ ಶಕ್ತಿಗಳು ಹಾಗೂ ಪುಡಿ ರೌಡಿಗಳ ಅಟ್ಟಹಾಸ ಹೆಚ್ಚಾಗಿದೆ. ಇದರಿಂದ ಹಲವು ಅಪರಾಧ ಪ್ರಕರಣಗಳು ಒಂದಾದ ಮೇಲೊಂದು ಸಂಭವಿಸಲು ಕಾರಣವಾಗಿದೆ ಎಂದು ಭಯ ಭೀತರಾಗಿರುವ ನಿವಾಸಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ನಾಗರಿಕರ ಪ್ರಾಣ, ಆಸ್ತಿ–ಪಾಸ್ತಿ ರಕ್ಷಿಸಬೇಕಾದ ಪೊಲೀಸರನ್ನು ಕಂಡರೆ, ರೌಡಿ ಗಳಿಗೆ ಕಿಂಚಿತ್ತು ಭಯವಿಲ್ಲದ ಕಾರಣ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಕಾನೂನು ಸುವ್ಯವಸ್ಥೆ ಹದಗೆಡುತ್ತಿದೆ ಎಂಬ ಆತಂಕ ಜನಸಾಮಾನ್ಯರಲ್ಲಿದೆ.

■ 6ನೇ ಪುಟಕ್ಕೆ


ಕೊಲೆಯಾದ ಶಹಬಾಜ್

ರೌಡಿ ನಿಗ್ರಹ ದಳ ನಿಷ್ಕ್ರಿಯವಾಗಿದೆಯೇ?

2025ರ ಅಕ್ಟೋಬರ್‌ನಲ್ಲಿ ರೌಡಿ ನಿಗ್ರಹ ದಳವನ್ನು ಪುನಃ ಆರಂಭಿಸಲಾಗಿತ್ತು. 26 ಸದಸ್ಯರನ್ನೊಳಗೊಂಡ ಈ ದಳದ ನೇತೃತ್ವ ವನ್ನು ಸಿಸಿಬಿ ಎಸಿಪಿ ಮೊಹಮ್ಮದ್ ಶರೀಫ್ ರಾವುತರ್ ವಹಿಸಿದ್ದರು. ಆದರೆ ಕೇವಲ ಮೂರು ತಿಂಗಳ ಅವಧಿಯಲ್ಲಿ ಇದು ನಿಷ್ಕ್ರಿಯಗೊಂಡಿದೆ ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಹಾಗಾಗಿ ಸಾರ್ವಜನಿಕರು ನಗರದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು ರೌಡಿ ನಿಗ್ರಹ ದಳವನ್ನು ಪುನರುಜ್ಜೀವನಗೊಳಿಸಿ, ವಿಶೇಷವಾಗಿ ರಾತ್ರಿ ಸಮಯದಲ್ಲಿ ನಿಯಮಿತ ಗಸ್ತು ವ್ಯವಸ್ಥೆಯನ್ನು ಜಾರಿಗೆ ತರುವಂತೆ ಒತ್ತಾಯಿಸಿದ್ದಾರೆ.

ಚಾಮುಂಡಿಬೆಟ್ಟ ಬಳಿಯ ಭೂಪರಿವರ್ತನೆ
ಕಾನೂನು ಬಾಹಿರವಲ್ಲ
ಪುಟ 3ರಲ್ಲಿ

ಬಿಜೆಪಿ ನೂತನ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅಧಿಕಾರ ಸ್ವೀಕಾರ

ನವದೆಹಲಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಯಾದ ನಿತಿನ್ ನಬಿನ್, ಪಕ್ಷದ ಕೇಂದ್ರ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ನಿರ್ಗ ಮಿತ ಅಧ್ಯಕ್ಷ ಜೆ.ಪಿ.ನಡ್ಡಾ ಕೂರಿಸಿ, ಶುಭ ಕೋರಿದರು. ಈ ವೇಳೆ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥಸಿಂಗ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಜೀ ಇತರರು ಉಪಸ್ಥಿತರಿದ್ದರು.

ಈ ವೇಳೆ ಪ್ರಧಾನಿ ಮೋದಿ ಅವರು, ತಮ್ಮ 40 ನಿಮಿಷಗಳ ಭಾಷಣದು ದ್ದಕ್ಕೂ ನಿತಿನ್ ಅವರನ್ನು ಮಾನ್ಯರೇ ಎಂದೇ ಸಂಭೋದಿಸಿದರು.

ನಿತಿನ್ ಅವರು ಈಗ ನಮ್ಮೆಲ್ಲರಿಗೂ ಅಧ್ಯಕ್ಷರು. ಅವರ ಜವಾಬ್ದಾರಿಗಳು ಪಕ್ಷ ವನ್ನು ನಿರ್ವಹಿಸುವುದು ಮಾತ್ರವಲ್ಲ, ಎನ್‌ಡಿಎ ಮೈತ್ರಿಕೂಟದ ನಮ್ಮೆಲ್ಲಾ ಮೈತ್ರಿ ಪಕ್ಷಗಳನ್ನೂ ನಿಭಾಯಿಸಬೇಕು, ಸಹಕಾರ ಮುಂದುವರಿಯುವಂತೆ ನೋಡಿಕೊಳ್ಳಬೇಕು ಎಂದರು.

ನಿತಿನ್ ಅವರೇ ನನ್ನ ಬಾಸ್: ಪ್ರಧಾನಿ ಮೋದಿ


ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಮಂಗಳವಾರ ಅಧಿಕಾರ ಸ್ವೀಕರಿಸಿದರು.

ನಿತಿನ್ ಅವರು ನವಯುಗದವರು. ಅವರಲ್ಲಿ ಯೌವನದ ಹುರುಪೂ ಇದೆ ಮತ್ತು ಸಂಘ ಟನೆಯ ಕುರಿತು ವಿಶಾಲ ಅನುಭವವೂ ಇದೆ. ಇದು ಪಕ್ಷಕ್ಕೆ ಸಹಕಾರಿಯಾಗಲಿದೆ. ಅವರ ಪ್ರತೀ ಮಾತುಗಳೂ ನಮಗೆ ಹೊಸ ದಿಕ್ಕು ತೋರಿಸಲಿದೆ ಅವರ ಮಾರ್ಗದರ್ಶನವು ನಮ್ಮ ಭವಿಷ್ಯವನ್ನು ರೂಪಿಸುವ ಬೆಲೆ ಕಟ್ಟಲಾಗದ ಆಸ್ತಿಯಾಗಲಿದೆ ಎಂದರು.

ಕಾಂಗ್ರೆಸ್‌ನ ತಪ್ಪುಗಳಿಂದ ಪಾಠ ಕಲಿಯಿರಿ: 1984ರಲ್ಲಿ ಶೇ 50ರಷ್ಟು ಮತಗಳನ್ನು ಪಡೆದು ಕಾಂಗ್ರೆಸ್ 400 ಸ್ಥಾನಗಳನ್ನು ಗೆದ್ದುಕೊಂಡಿತ್ತು. ಆದರೆ ಈಗ 100 ಸ್ಥಾನ ಗಳನ್ನು ದಾಟಲೂ ಅದು ಹೆಣಗಾಡುತ್ತಿದೆ. ಇಂಥ ದುಃಸ್ಥಿತಿಗೆ

■ 6ನೇ ಪುಟಕ್ಕೆ

ಪ್ರಮುಖ ಹುದ್ದೆಗೆ ನಿರ್ದಿಷ್ಟ ಕುಟುಂಬಕ್ಕೆ ಸೇರಬೇಕಾಗಿಲ್ಲದ ಏಕೈಕ ಪಕ್ಷ ಬಿಜೆಪಿ


ನವದೆಹಲಿ: ಬಿಜೆಪಿ ಕೇವಲ ರಾಜ ಕೀಯ ಸಂಘಟನೆಯಲ್ಲ, ಬದ ಲಾಗಿ ಒಂದು ಆಂದೋಲನ ಎಂದು ಬಣ್ಣಿಸಿರುವ ಕೇಸರಿ ಪಕ್ಷದ ನೂತನ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು, 'ಸಂಘಟನೆ ಕೇವಲ ಒಂದು ವ್ಯವಸ್ಥೆಯಲ್ಲ, ಪವಿತ್ರ ಸಂಪ್ರದಾಯ' ಎಂದು ಮಂಗಳವಾರ ಹೇಳಿದ್ದಾರೆ.

ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ರಾಗಿ ಅಧಿಕಾರ ವಹಿಸಿಕೊಂಡ ಸ್ವಲ್ಪ ಸಮಯದ ನಂತರ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ ರುವ ನಿತಿನ್, ಪ್ರಧಾನಿ ನರೇಂದ್ರ ಮೋದಿ, ನಿರ್ಗಮಿತ ಅಧ್ಯಕ್ಷ ಜೆ.ಪಿ. ನಡ್ಡಾ, ಹಿರಿಯ ನಾಯಕರು ಮತ್ತು ಪಕ್ಷದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.

■ 6ನೇ ಪುಟಕ್ಕೆ

ಕಚೇರಿಯಲ್ಲೇ ಸಮವಸ್ತ್ರದಲ್ಲಿ ಸರಸ: ಡಿಜಿಪಿ ರಾಮಚಂದ್ರರಾವ್ ಅಮಾನತು

ಪ್ರಕರಣದ ತನಿಖೆಗೆ ಸರ್ಕಾರ ಆದೇಶ

ಬೆಂಗಳೂರು, ಜ.20(ಕೆಎಂಶಿ)– ಕಚೇರಿಯಲ್ಲೇ ಅದೂ ಸಮವಸ್ತ್ರದಲ್ಲೇ ಮಹಿಳೆಯೊಂದಿಗೆ ಸರಸ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಡಿಜಿಪಿ ಕೆ.ರಾಮಚಂದ್ರರಾವ್ ಅವರನ್ನು ಅಮಾನತುಗೊಳಿಸಿ, ಘಟನೆ ಸಂಬಂಧ ತನಿಖೆಗೆ ಸರ್ಕಾರ ಆದೇಶಿಸಿದೆ.

ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಇಂತಹ ಘಟನೆಗಳು ಯಾರಿಗೂ ಗೌರವ ತರುವುದಿಲ್ಲ. ಎಷ್ಟೇ ದೊಡ್ಡವರಿದ್ದರೂ ಮುಲಾಜಿಲ್ಲದೆ ಕ್ರಮ ಕೈಗೊಳ್ಳುತ್ತೇವೆ ಎಂದರು. ನನಗೆ ವಿಷಯ ತಿಳಿಯುತ್ತಿದ್ದಂತೆ ಮುಖ್ಯಮಂತ್ರಿ ಜೊತೆ ದೂರವಾಣಿ ಮೂಲಕ ಚರ್ಚಿಸಿ ಪೂರ್ಣ ಮಾಹಿತಿ ನೀಡಿದೆ. ಅವರೂ ಈ ಘಟನೆಗೆ ಬೇಸರ ವ್ಯಕ್ತಪಡಿಸಿದರು.

ಮೊದಲು ಅಧಿಕಾರಿಯನ್ನು ಅಮಾನತು ಮಾಡಿ ತನಿಖೆ ನಡೆಸಲು ಸೂಚಿಸಿದ್ದು, ಅದರಂತೆ ಕ್ರಮ ಕೈಗೊಳ್ಳಲಾಗಿದೆ. ಇಂತಹ ಸನ್ನಿವೇಶದಲ್ಲಿ ಕಠಿಣ ಧೋರಣೆ ಅನು ಸರಿಸಬೇಕಾಗುತ್ತದೆ. ರಾವ್ ಇದನ್ನು ಸುಳ್ಳು ಎಂದಿದ್ದಾರೆ, ತನಿಖೆಯಿಂದ ಸತ್ಯ ಬಹಿರಂಗವಾಗಲಿದೆ. ವರದಿ ಬಂದ ನಂತರ ಕ್ರಮ ಜರುಗಿಸಲಾಗುವುದು. ಅಧಿಕಾರಿ ಸೇವೆ ಯಿಂದಲೂ ವಜಾಗೊಳ್ಳಬಹುದು ಎಂದರು.

ಕ್ರಮಕ್ಕೆ ಮಹಿಳಾ ಆಯೋಗ ಆಗ್ರಹ: ತಮ್ಮ ಅಧಿಕೃತ ಕಚೇರಿಯೊಳಗೆ ಸಮ ವಸ್ತ್ರದಲ್ಲಿದ್ದಾಗ ಅಶ್ಲೀಲ ಕೃತ್ಯಗಳಲ್ಲಿ ತೊಡಗಿ ರುವ ಆಡಿಯೋ ಮತ್ತು ವೀಡಿಯೊ ತುಣುಕುಗಳು ವೈರಲ್ ಆದ ನಂತರ, ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಪೊಲೀಸ್ ಮಹಾನಿರ್ದೇಶಕ(ನಾಗರಿಕ ಹಕ್ಕುಗಳ ಜಾರಿ) ಕೆ. ರಾಮಚಂದ್ರ ರಾವ್ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದೆ.

ಪಾರದರ್ಶಕ ತನಿಖೆ ನಡೆಸಬೇಕು, ಸೇವೆಯಿಂದ ಅಮಾನತುಗೊಳಿಸಬೇಕು ಮತ್ತು ಶೂನ್ಯ ಸಹಿಷ್ಣುತೆ

■ 6ನೇ ಪುಟಕ್ಕೆ

ಲಕ್ಷ ಲಕ್ಷ ಜನರ ಸೆಳೆದ ಸುತ್ತೂರು ಜಾತ್ರಾ ಮಹೋತ್ಸವ ಸಂಪನ್ನ

ಜಾತ್ರೆಯಲ್ಲಿನ ರಥೋತ್ಸವ, ಸಾಮೂಹಿಕ ವಿವಾಹ, ದನಗಳ ಜಾತ್ರೆ, ಕುಸ್ತಿ ಪಂದ್ಯಾವಳಿ ಇನ್ನಿತರೆ ಕಾರ್ಯಕ್ರಮ ಜನಾಕರ್ಷಕ

ನಂಜನಗೂಡು, ಜ.20– ಕಳೆದ 6 ದಿನಗಳ ಕಾಲ ಅದ್ದೂರಿಯಾಗಿ ನಡೆದ ಶ್ರೀಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವ ಅರ್ಥಾತ್ ಸುತ್ತೂರು ಜಾತ್ರ ಮಹೋತ್ಸವ ಲಕ್ಷಾಂತರ ಭಕ್ತರ ಸಹ ಕಾರದೊಂದಿಗೆ ಸಂಪನ್ನಗೊಂಡಿತು.

ಪ್ರತಿ ವರ್ಷ ವಿಭಿನ್ನತೆಗೆ ಹೆಸರಾಗಿರುವ ಈ ಜಾತ್ರಾ ಮಹೋತ್ಸವದಲ್ಲಿ, ವಸ್ತು ಪ್ರದ ರ್ಶನ, ಕೃಷಿ ಮೇಳದ ಮೂಲಕ ರೈತರಿಗೆ ಕೃಷಿ ಬಗ್ಗೆ ಮಾರ್ಗದರ್ಶನ ನೀಡ ಲಾಯಿತು. ಈ ವರ್ಷ ಅಂತರರಾಷ್ಟ್ರೀಯ ರೈತ ಮಹಿಳಾಪರ ವರ್ಷ ಎಂದು ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ 'ಮುಂದಿನ ಪೀಳಿಗೆಯ ಕೃಷಿಯಲ್ಲಿ ಮಹಿಳೆಯ ಪಾತ್ರ' ಶೀರ್ಷಿಕೆಯಡಿ ಕೃಷಿ ಮೇಳ ಆಯೋಜಿಸ ಲಾಗಿತ್ತು. ಮುಖ್ಯವಾಗಿ ಕಾಡು ಬದನೆಗೆ ಟೊಮೋಟೊ ಗಿಡ ಕಸಿ ಮಾಡಿ ರೋಗ ಮುಕ್ತವಾಗಿಸಿ ವರ್ಷಗಳವರೆಗೆ ಬೆಳೆಯುವ ಟೊಮೆಟೊ ಬೆಳೆ ಕೃಷಿ ಮೇಳದ ಪ್ರಮುಖ ಆಕರ್ಷಣೆಯಾಗಿತ್ತು. ಒಂದು ಎಕರೆ ಕೃಷಿ ಬ್ರಹ್ಮಾಂಡದ ಮೂಲಕ ಕಡಿಮೆ ಭೂಮಿ ಹೊಂದಿರುವ ಬಡ ರೈತರು ಹೇಗೆ ಸ್ವಾಭಿ ಮಾನದ ಬದುಕನ್ನು ಬದುಕಬಹುದು ಎಂಬುದನ್ನು ತೋರಿಸಿ ಕೊಡಲಾಯಿತು.

ಕಲಾಸಿರಿ: ಅಲ್ಲದೇ ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ದೋಣಿ ವಿಹಾರ ಕಾರ್ಯಕ್ರಮಗಳನ್ನು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಂಸದ ಯದುವೀರ್ ಉದ್ಘಾಟಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನಾಟಕ, ಭಜನೆ, ಭರತನಾಟ್ಯ, ಸುಗಮ ಸಂಗೀತ, ಜಾನಪದ ಕಲೆ ಸೇರಿದಂತೆ ಅನೇಕ ಕಾರ್ಯ ಕ್ರಮಗಳು ಜನರಿಗೆ ಮುದ ನೀಡಿದವು.

ಸಾಮೂಹಿಕ ವಿವಾಹ ಭಾಗ್ಯ: ಈ ವರ್ಷ ಸರಳ ಸಾಮೂಹಿಕ ವಿವಾಹದಲ್ಲಿ 135 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಟ್ಟರು. ರಥೋತ್ಸವದಲ್ಲಿ ರಾಜ್ಯದ ವಿವಿಧ ಕಲಾ ತಂಡಗಳು ವರ್ಣರಂಜಿತ ಕಲಾ ಪ್ರದ ರ್ಶನ ನಡೆಸಿಕೊಡುವ ಮೂಲಕ ಜಾತ್ರೆಗೆ ಮೆರಗು ತಂದವು.


ರಾಜ್ಯ ಮಟ್ಟದ ಭಜನಾ ಮೇಳದಲ್ಲಿ ರಾಜ್ಯ ಹಾಗೂ ಹೊರ ರಾಜ್ಯದ ಪುರುಷ ಮತ್ತು ಮಹಿಳಾ ಕಲಾವಿದರು ಭಾಗ ವಹಿಸಿ ಪ್ರದರ್ಶನ ನೀಡಿದರು. ಉತ್ತಮ ಭಜನೆಗೆ ಪ್ರಶಸ್ತಿ ಹಾಗೂ ನಗದು ಬಹುಮಾನ ನೀಡಿ ಪುರಸ್ಕರಿಸಲಾಯಿತು.

ಆಟೋಟಗಳ ಸಂಭ್ರಮ: ದೇಸಿಯ ಆಟಗಳನ್ನು ಸಂರಕ್ಷಿಸುವ ಸಲುವಾಗಿ ಜಾತ್ರಾ ಮಹೋತ್ಸವದ ಭಾಗವಾಗಿದ್ದ, ಗಾಳಿಪಟ ಸ್ಪರ್ಧೆ, ಗುಂಡು ಎತ್ತುವ ಸ್ಪರ್ಧೆ, ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಕುಂಟೆ ಬಿಲ್ಲೆ, ಅಳಿಗುಳಿ ಮನೆ, ಆನೆಕಲ್ಲು, ಚದುರಂಗ, ಚೌಕಾಬಾರ, ನವಂಕರಿ, ಹುಲಿ ಕುರಿ ಆಟಗಳಲ್ಲಿ ಶಾಲಾ ವಿದ್ಯಾರ್ಥಿಗಳು ಮತ್ತು ಗ್ರಾಮೀಣ ಮಹಿಳೆಯರು ಮತ್ತು ಪುರುಷರು ಭಾಗಿಯಾಗಿ ಸಂಭ್ರಮಿಸಿದರು. ಅಲ್ಲದೇ ದೇಶಿಯ ಆಟಗಳನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸುವ ಕೆಲಸ ಮಾಡಲಾಯಿತು.

ಜಾನುವಾರು ಜಾತ್ರೆ: ಗ್ರಾಮೀಣ ಶ್ರಮ, ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ನಿಟ್ಟಿ ನಲ್ಲಿ ಪ್ರಥಮ ಬಾರಿಗೆ ಆಯೋಜಿಸಿದ್ದ ರಾಗಿ ಬೀಸುವ ಸ್ಪರ್ಧೆ ಪ್ರಮುಖ ಆಕರ್ಷಣೆ ಯಾಗಿತ್ತು. ಅಲ್ಲದೇ ಸ್ಪರ್ಧೆಯಲ್ಲಿ ಗೆದ್ದ ಮಹಿಳೆಯರಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ ವಿತರಿಸಲಾಯಿತು. ನಾಡ ಕುಸ್ತಿ ಪಂದ್ಯಾವಳಿ ವಿಜೃಂಭಣೆಯಿಂದ ನಡೆದು ಪ್ರೇಕ್ಷಕರಿಗೆ ಮುದ ನೀಡಿದವು. 55ನೇ ದನಗಳ ಜಾತ್ರೆಯಲ್ಲಿ 257 ರಾಸು ಗಳು ಭಾಗವಹಿಸಿದ್ದವು. ಸ್ವರ್ಣ ಕಪಿಲ, ಪುಂಗನೂರು, ಸಹಿ ವಾಲ್ ಸೇರಿದಂತೆ ದೇಸಿಯ ಹಸು ಮತ್ತು ಕುರಿ, ಮೇಕೆ ತಳಿಗಳು ಜಾತ್ರೆಯಲ್ಲಿ ಭಾಗವಹಿಸಿದ್ದವು. 18 ಲಕ್ಷದವರೆಗಿನ ಹಳ್ಳಿಕಾರ್ ಎತ್ತುಗಳು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದ್ದು, 7 ವಿಭಾಗಗಳಲ್ಲಿ ಉತ್ತಮ ರಾಸುಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಭಾನುವಾರ ನಡೆದ ಮಹದೇಶ್ವರ ಕೊಂಡೋತ್ಸವ, ಲಕ್ಷ ದೀಪೋತ್ಸವ, ಸೋಮ ವಾರ ಜರುಗಿದ ಕಪಿಲಾ ಆರತಿ, ತೆಪ್ಪೋ ತ್ಸವ ಮತ್ತು ಧಾರ್ಮಿಕ ಕಾರ್ಯಕ್ರಮ ಗಳಲ್ಲಿ ಲಕ್ಷಾಂತರ ಜನರು ಶ್ರದ್ಧಾ ಭಕ್ತಿಯಿಂದ ಭಾಗವಹಿಸಿ ಜಾತ್ರೆಯನ್ನು ಕಣ್ತುಂಬಿಕೊಂಡರು.

■ 6ನೇ ಪುಟಕ್ಕೆ


ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಉತ್ಸವ ಮೂರ್ತಿಯನ್ನು ಶ್ರೀಮಠದ ಗದ್ದುಗೆಯಿಂದ ಮೂಲ ಮಠಕ್ಕೆ ಬಿಜಂಗೈಯುವ ಮೂಲಕ ಜಾತ್ರಾ ಮಹೋತ್ಸವಕ್ಕೆ ತೆರೆ ಎಳೆಯಲಾಯಿತು.

ಮೈಸೂರು ಮಿತ್ರ ಬುಧವಾರ 21 ಜನವರಿ 2026

ಎಂ.ರಾಜೇಂದ್ರ ಅವರಿಗೆ ಅಭಿನಂದನೆ...



ಕರ್ನಾಟಕ ರಾಜ್ಯ ಹೋಟೆಲ್‌ಗಳ ಸಂಘದ ಗೌರವ ಅಧ್ಯಕ್ಷರಾಗಿ ಮರು ಆಯ್ಕೆಯಾದ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷ ರಮೇಶ್, ಸಹ ವಕ್ತಾರ ಕೆ.ದೇವರಾಜ್, ಮುಖಂಡರಾದ ಶ್ರೀನಿವಾಸ್, ಲಕ್ಷ್ಮಣ್ ಹಾಗೂ ಜಗದೀಶ್ ಉಪಸ್ಥಿತರಿದ್ದರು.

ಜ.24, 'ಮೈಸೂರಿನ ಅಸಾಮಾನ್ಯರು' ಕೃತಿ ಬಿಡುಗಡೆ

ಮೈಸೂರು,ಜ.20–'ಮೈಸೂರು ಮಿತ್ರ'ದಲ್ಲಿ ಅಂಕಣ ರೂಪದಲ್ಲಿ ಪ್ರಕಟವಾಗಿದ್ದ ಗೌರಿ ಸತ್ಯ ಅವರ 'ನಮ್ಮ ಮೈಸೂರಿನ ಅಸಾಮಾನ್ಯರು' ಈಗ ಪುಸ್ತಕವಾಗಿ ಹೊರ ಬರಲಿದೆ. 'ಮೈಸೂರಿನ ಅಸಾಮಾನ್ಯರು' ಹೆಸರಿನಲ್ಲಿ ಪ್ರಕಟವಾಗಿರುವ ಈ ಕೃತಿ ಜನವರಿ 24ರಂದು ಬೆಳಿಗ್ಗೆ 11 ಗಂಟೆಗೆ ಮೈಸೂರಿನ ಝಾನ್ಸಿ ಲಕ್ಷ್ಮೀಬಾಯಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಲೋಕಾರ್ಪಣೆಗೊಳ್ಳಲಿದೆ.

ಒಡೆಯರ ಅವಧಿಯಲ್ಲಿ ಅನೇಕ ಗಣ್ಯರು ಹಲವಾರು ಕ್ಷೇತ್ರಗಳಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ್ದಾರೆ. ಆದರೆ ಅವರ ನೆನಪು ಇಂದು ಮರೆಯಾಗಿ ಹೋಗಿದೆ. ಹಾಗೆ ನೆನಪಿನಲ್ಲಿ ಅಳಿಸಿಹೋಗಿರುವ 50 ಮಹನೀಯರನ್ನು ಕುರಿತ ಈ ಕೃತಿ ಹೆಚ್ಚಿನ ವಿಷಯ ಹಾಗೂ ಛಾಯಾಚಿತ್ರಗಳೊಂದಿಗೆ ಪ್ರಕಟವಾಗಿದೆ. ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಸಂಸ್ಥೆಯ ಕನ್ನಡ ಓದುಗರ ಒಕ್ಕೂಟ ಆಶ್ರಯದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ ಬಿಡುಗಡೆ ಮಾಡಲಿದ್ದಾರೆ. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕಿ ಹಾಗೂ ಖ್ಯಾತ ಗಮಕಿ ಡಾ. ಜ್ಯೋತಿ ಶಂಕರ್ ಕೃತಿಯ ಪರಿಚಯ ಮಾಡಿಕೊಡಲಿದ್ದಾರೆ. ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಭಾಗವಹಿಸಲಿದ್ದಾರೆ. ಪುಸ್ತಕವನ್ನು ಮೈಸೂರಿನ ಮಹಿಮಾ ಪ್ರಕಾಶನದ ಶ್ರೀನಿವಾಸ್ ಪ್ರಕಟಿಸಿದ್ದಾರೆ.

ವಿವಿಧ ವೃಂದದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ


ಮೈಸೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಜನವರಿ 27ರವರೆಗೆ ಮೈಸೂರು ಜಿಲ್ಲೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಅರವಳಿಕೆ ತಜ್ಞರು 2, ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು 1, ಮಕ್ಕಳ ತಜ್ಞರು 2, ಒ.ಟಿ ಟೆಕ್ನಿಷಿಯನ್ 1, ತಾಲ್ಲೂಕು ಆಶಾ ಮೆಂಟರ್ 1, ಪ್ರಯೋಗಶಾಲ ತಂತ್ರಜ್ಞರು 2, ಶುಶ್ರೂಷಕ ಅಧಿಕಾರಿಗಳು 12, ಶುಶ್ರೂಷಕ ಅಧಿಕಾರಿಗಳು 4, ದಂತ ಶಸ್ತ್ರಚಿಕಿತ್ಸಕರು 6, ಫಿಜಿಷಿಯನ್ 1, ವೈದ್ಯಾಧಿಕಾರಿಗಳು 2, ಆಪ್ತ ಸಮಾಲೋಚಕರು 1, ಶುಶ್ರೂಷಕ ಅಧಿಕಾರಿ 1, ಶುಶ್ರೂಷಕ ಅಧಿಕಾರಿ 1, ಬ್ಲಾಕ್ ಎಪಿಡಮಲಾಜಿಸ್ಟ್ 2, ವೈದ್ಯಾಧಿಕಾರಿಗಳು 2, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳು 4, ಆರೋಗ್ಯ ನಿರೀಕ್ಷಣಾಧಿಕಾರಿಗಳು 2, ಶುಶ್ರೂಷಕ ಅಧಿಕಾರಿಗಳು 4, ವೈದ್ಯಾಧಿಕಾರಿಗಳು 4, ಆರೋಗ್ಯ ನೀರಿಕ್ಷಣಾಧಿಕಾರಿಗಳು 4, ಶುಶ್ರೂಷಕ ಅಧಿಕಾರಿಗಳು 5, ಹಿರಿಯ ವೈದ್ಯಾಧಿಕಾರಿಗಳು (ಡಿ.ಆರ್.ಟಿ.ಬಿ ಕೇಂದ್ರ) 1, ವೈದ್ಯಾಧಿಕಾರಿಗಳು 1, ಕ್ಷಯ ರೋಗ ಆರೋಗ್ಯ ಸಂದರ್ಶಕ (ಟಿ.ಬಿ. ಹೆಚ್.ವಿ) 1 ಸೇರಿದಂತೆ ಒಟ್ಟು 67 ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗುತ್ತದೆ.

ಅರ್ಜಿ ಸಲ್ಲಿಸಲು ಯಾವುದೇ ಶುಲ್ಕವಿರುವುದಿಲ್ಲ. ಅರ್ಜಿಗಳನ್ನು ಆನ್‌ಲೈನ್ ಮೂಲಕ ಜನವರಿ 27ರೊಳಗೆ ಸಲ್ಲಿಸುವುದು. ಸದರಿ ನೇಮಕಾತಿ ಪ್ರಕಟಣೆಯ ವಿವರಗಳನ್ನು Nttps://mysore.inc.in ವೀಕ್ಷಿಸಬಹುದಾಗಿದೆ.

ಎಲ್ಲಾ ಹುದ್ದೆಗಳು ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿದ್ದು, ಕಾಲ ಕಾಲಕ್ಕೆ ಸರ್ಕಾರದಿಂದ / ರಾಜ್ಯ ನಿರ್ದೇಶನಾಲಯದಿಂದ ಹೊರಡಿಸುವ ಆದೇಶದ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತವೆ. ಸ್ಥಳೀಯ ಭಾಷೆ ಕನ್ನಡ ಆಗಿರುವುದರಿಂದ ಅಭ್ಯರ್ಥಿಗಳು ಕಡ್ಡಾಯವಾಗಿ ಕನ್ನಡ ಭಾಷೆ ಓದಲು ಮತ್ತು ಬರೆಯಲು ತಿಳಿದಿರಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ-ಕುಟುಂಬ ಕಲ್ಯಾಣ ಇಲಾಖೆ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಕ್ಯಾಲೆಂಡರ್ ಬಿಡುಗಡೆ...



ಮೈಸೂರಿನ ಕನ್ನಡ ವೃತ್ತಿಪರ ಬಳಗ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಶಾಸಕ ಟಿ.ಎಸ್.ಶ್ರೀವತ್ಸ ಬಿಡುಗಡೆ ಮಾಡಿದರು. ಈ ವೇಳೆ ಬಳಗದ ಖಜಾಂಚಿ ಬಿ.ಶಿವಕುಮಾರ, ನಾರಾಯಣಾಚಾರಿ, ಉಸ್ತುವಾರಿ ಕಾರ್ಯದರ್ಶಿ ರಂಗಸ್ವಾಮಿ, ಉಪಾಧ್ಯಕ್ಷ ಎಂ.ಎಸ್.ನಾಗೇಶ್ (ನಾಗಪ್ಪ), ಲಾವಣ್ಯ ನಾಗರಾಜು, ಮಂಗಳ ಪ್ರಕಾಶ್, ಅಧ್ಯಕ್ಷ ಕೆ.ಆನಂದ್ ಮತ್ತಿತರರಿದ್ದರು.

ಸಾಧನೆಗೈದ ಕರ್ನಾಟಕದ ಕ್ರೀಡಾಪಟುಗಳು



ಡೆಹ್ರಾಡೂನ್‌ನಲ್ಲಿ ನಡೆದ 8ನೇ ಅಂತರ ರಾಷ್ಟ್ರೀಯ ಚಾಂಪಿಯನ್ ಶಿಪ್‌ನಲ್ಲಿ ರಾಜ್ಯದ ಕ್ರೀಡಾ ಪಟುಗಳ ಸಾಧನೆ

ಮೈಸೂರು: ಜನವರಿ 16ರಿಂದ 18ರವರೆಗೆ ಡೆಹ್ರಾಡೂನ್‌ನಲ್ಲಿ ನಡೆದ 8ನೇ ಅಂತರ ರಾಷ್ಟ್ರೀಯ ಟೇಕ್ವಾಂಡೋ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದ ಏಳು ಕ್ರೀಡಾಪಟುಗಳು ಭಾರತವನ್ನು ಪ್ರತಿನಿಧಿಸಿ ಪದಕಗಳನ್ನು ಗೆದ್ದರು. 11 ವರ್ಷದೊಳಗಿನ ವಿಭಾಗ: ದಿಶಿತಾ ಮತ್ತು ಕೌಶಿಕಾ ಚಿನ್ನದ ಪದಕ, ಅದ್ವಿಕಾ ಇ ಅರುಣ್ ಬೆಳ್ಳಿ ಪದಕ; 14 ವರ್ಷದೊಳಗಿನವರ ವಿಭಾಗ: ತರುಣ್ ಚಂದ್ರ ಎಂ ಕಂಚಿನ ಪದಕ, 17 ವರ್ಷದೊಳಗಿನ ವಿಭಾಗ: ಸಮೀಕ್ಷಾ ಎಂ ಮತ್ತು ದಿವ್ಯಾಂಶಿ ಚಿನ್ನದ ಪದಕ. ಈ ಎಲ್ಲಾ ಮಕ್ಕಳು ಮೈಸೂರಿನ ಪಿಎಂ ಶ್ರೀ ಕೇಂದ್ರೀಯ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ನಾಳೆ ಹಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ರಾಜೀವ್‌ನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ ಹಳೆ ಕೆಸರೆ ವ್ಯಾಪ್ತಿಯಲ್ಲಿನ ವಿದ್ಯುತ್ ತಂತಿ ಬದಲಾಯಿಸುವ ಕಾಮಗಾರಿ ಕೆಲಸದ ನಿಮಿತ್ತ ಜ.22.ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆವರೆಗೆ ಹಳೆ ಕೆಸರೆ, ಐಶ್ವರ್ಯ ಬಡಾವಣೆ, ನಿಸರ್ಗ ಡಾಬಾ, ವಿ.ಬಿ ಬೇಕರಿ ರಸ್ತೆ, ವಿಠಲ ಬಡಾವಣೆ, ರಾಘವೇಂದ್ರ ಮಠ, ವರುಣ ಕಾಲುವೆ ಹತ್ತಿರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಎನ್.ಆರ್.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಸಿನಿಮಾ, ಅಪರಾಧ ಬಿಟ್ಟರೆ ಬೇರೆ ವಿಚಾರಗಳ ಪ್ರಸ್ತಾಪವೇ ಇಲ್ಲದಾಗಿದೆ

'ಪ್ರಚಾರೋಪನ್ಯಾಸ'ದಲ್ಲಿ ರಕ್ಷಣಾ ಮತ್ತು ಬಾಹ್ಯಾಕಾಶ ವಿಶ್ಲೇಷಕರಾದ ಗಿರೀಶ್ ಲಿಂಗಣ್ಣ ವಿಷಾದ

ಮೈಸೂರು,ಜ.20(ಜಿಎ)–ದೇಶದಲ್ಲಿ ಈಗ ಸಾಮಾಜಿಕ ಜಾಲತಾಣಗಳಲ್ಲಿ ಕೇವಲ ಸಿನಿಮಾ, ಅಪರಾಧಗಳಂತಹ ವಿಚಾರಗಳು, ಕ್ರಿಕೆಟ್ ಬಗ್ಗೆ ಮಾತ್ರ ಹೆಚ್ಚಾಗಿ ಚರ್ಚೆಗಳು ನಡೆಯುತ್ತಿವೆ. ಇದರ ಹೊರತು ಉಪಯುಕ್ತವಾದ ಯಾವುದೇ ವಿಚಾರಗಳು ಸಮಾಜದ ಮುನ್ನಲೆಗೆ ಬಂದಿಲ್ಲ. ಯುವ ಸಮೂಹ ಕ್ಷಿಪಣಿಗಳ ಬಗ್ಗೆ ತಿಳಿದುಕೊಳ್ಳುವ ಅವಶ್ಯಕತೆಯಿದೆ ಎಂದು ರಕ್ಷಣಾ ಮತ್ತು ಬಾಹ್ಯಾಕಾಶ ವಿಶ್ಲೇಷಕರಾದ ಗಿರೀಶ್ ಲಿಂಗಣ್ಣ ತಿಳಿಸಿದರು.

ಮೈಸೂರಿನ ಸಿದ್ಧಾರ್ಥನಗರದ ಟೆರೇಸಿಯನ್ ಕಾಲೇಜಿನಲ್ಲಿ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ 'ಪ್ರಚಾರೋಪನ್ಯಾಸ'ದಲ್ಲಿ 'ಕ್ಷಿಪಣಿಗಳ ಇತಿಹಾಸ ಮತ್ತು ಸಾಮರ್ಥ್ಯ' ಕುರಿತು ಅವರು ಮಾತನಾಡಿದರು.

ಇಂದು ಭಾರತ ಕ್ಷಿಪಣಿಗಳ ಬಳಕೆಯಲ್ಲಿ ಮುಂದುವರೆದಿದೆ. ಅದರ ಭಾಗವಾಗಿ ಆಪರೇಷನ್ ಸಿಂಧೂರದ ಮೂಲಕ ಭಾರತದಲ್ಲೇ ಕುಳಿತು ಪಾಕಿಸ್ತಾನದ ಮೇಲೆ ದಾಳಿ ಮಾಡಲು ಸಾಧ್ಯವಾಗಿದ್ದು, ಇದೆಲ್ಲಾ ಕ್ಷಿಪಣಿಗಳಿಂದ ಸಾಧ್ಯವಾಗಿದೆ. ಪ್ರತಿಯೊಬ್ಬರು ಕ್ಷಿಪಣಿಗಳ ಬಗ್ಗೆ ತಿಳಿದುಕೊಳ್ಳಬೇಕಿದೆ. ದೇಶದ ಶಕ್ತಿ ಸಾಮರ್ಥ್ಯದ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು ಮುಖ್ಯ. ದೇಶದ ಶಕ್ತಿ ಬಗ್ಗೆ ನಮಗೆ ತಿಳುವಳಿಕೆ ಇದ್ದರೆ ಮಾತ್ರ, ಬೇರೆಡೆ ನಮಗೆ ಗೌರವ ದೊರೆಯಲು ಸಾಧ್ಯ. ಇವತ್ತು ವಿದೇಶಗಳಲ್ಲಿ ಭಾರತೀಯರನ್ನು ಗುರುತಿಸುವ ವೈಶಿಷ್ಟ್ಯತೆಯೇ ಬದಲಾಗಿದೆ ಎಂದು ಹೇಳಿದರು.



ಮೈಸೂರಿನ ಸಿದ್ಧಾರ್ಥನಗರದ ಟೆರೇಸಿಯನ್ ಕಾಲೇಜಿನಲ್ಲಿ ಕನ್ನಡ ವಿಭಾಗ ಮತ್ತು ಐಕ್ಯೂಎಸಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ ಸಂಯುಕ್ತಾಶ್ರಯದಲ್ಲಿ ಸೋಮವಾರ 'ಕ್ಷಿಪಣಿಗಳ ಇತಿಹಾಸ ಮತ್ತು ಸಾಮರ್ಥ್ಯ' ಕುರಿತು ಉಪನ್ಯಾಸ ಉದ್ಘಾಟಿಸಲಾಯಿತು.

ಭಾರತದಲ್ಲಿ ಇಂದು ಸಾಮಾಜಿಕ ಜಾಲತಾಣದಲ್ಲಿ ಕೇವಲ ಸಿನಿಮಾ, ಅಪರಾಧಗಳಂತಹ ವಿಚಾರಗಳು ಹಾಗೂ ಕ್ರಿಕೆಟ್‌ಗಳ ಬಗ್ಗೆ ಮಾತ್ರವೇ ಚರ್ಚೆ ನಡೆಯುತ್ತಿವೆಯೇ ಹೊರತು ಹೊರಗಿನ ಯಾವುದೇ ವಿಚಾರಗಳು ಸಮಾಜದ ಮುನ್ನಲೆಗೆ ಬಂದಿಲ್ಲ. ಭಾರತದ ಪ್ರಗತಿ, ಆರ್ಥಿಕತೆ, ತಂತ್ರಜ್ಞಾನ, ಸೈನ್ಯ ಪ್ರಬಲತೆಯ ಕುರಿತಾದ ಆಸಕ್ತಿದಾಯಕ ವಿಚಾರಗಳನ್ನು ಯಾರು ಗ್ರಹಿಸುತ್ತಿಲ್ಲ ಎಂದು ವಿಷಾದಿಸಿದರು.

ಪ್ರಸ್ತುತ ಪ್ರಪಂಚದಲ್ಲಿ ಯಾವ ದೇಶಗಳದ್ದು ಸರಿ, ತಪ್ಪು ಎಂಬ ವಿಚಾರವಂತಿಕೆ ನಾಶವಾಗಿ, ಯಾವ ದೇಶ ಬಲಿಷ್ಠವಾದದ್ದು, ಬಲಹೀನ ವಾದದ್ದು ಎಂಬ ವಾದಗಳು ಚರ್ಚಿತವಾಗಿವೆ. ಒಂದು ದೇಶದಲ್ಲಿ ಆರ್ಥಿಕತೆ ಹಾಗೂ ಸೈನ್ಯ ಬಲಿಷ್ಠ ವಾಗಿದ್ದರೆ ಅದೇ ಸದೃಢ ದೇಶ. ಇಲ್ಲವಾದಲ್ಲಿ ಯಾವ ದೇಶಗಳು ಹೆದರದ ಪರಿಸ್ಥಿತಿಗೆ ಬಂದು ತಲುಪುತ್ತವೆ. ಇವೆರಡರ ಕೊರತೆಯಿಂದಾಗಿ ವೆನಿಜುವೆಲಾ ದೇಶದ ಮುಖ್ಯಸ್ಥರನ್ನೇ ಬಂಧಿಸಲಾಯಿತು. ಇರಾನ್ ಮೇಲೆ ದಾಳಿಗಳು ನಡೆಯುತ್ತಿವೆ. ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳಲು ಅಮೆರಿಕ ಸಂಚು ನಡೆಸುತ್ತಿದೆ. ಇದಕ್ಕೆಲ್ಲಾ ಉತ್ತಮ ಸೈನ್ಯದ ಕೊರತೆ ಕಾರಣ ಎಂದು ತಿಳಿಸಿದರು.

ಒಂದು ದೇಶ ಸದೃಢವಾಗಲು ದೇಶದ ಆರ್ಥಿಕತೆ ಹಾಗೂ ಸೈನ್ಯಬಲ ಬಹಳ ಮುಖ್ಯ. ಅಮೆರಿಕಾ ಪ್ರಪಂಚದ ಬಲಿಷ್ಠರಾಷ್ಟ್ರವಾಗಿದೆ. ಅದರ ಅಧ್ಯಕ್ಷ ಟ್ರಂಪ್ ತನ್ನ ಅಧಿಕಾರದಿಂದ ಬೇರೆಲ್ಲ ದೇಶಗಳ ಮೇಲೆ ವಿಪರೀತ ಸುಂಕ ವಿಧಿಸುವ ಸರ್ವಾಧಿಕಾರಿ ಆಡಳಿತ ನಡೆಸುತಿದ್ದಾರೆ. ಎಲ್ಲಾ ದೇಶಗಳು ತನ್ನ ತೆಕ್ಕೆಗೆ ಸಿಗಬೇಕೆಂಬ ಅಧಿಕಾರ ಲಾಲಸೆ ಎಂದು ಗಿರೀಶ್ ಲಿಂಗಣ್ಣ ಟೀಕಿಸಿದರು.

ಒಂದು ದೇಶದ ಸೈನ್ಯ ಬಲವಾಗಬೇಕಿದ್ದರೆ ಅದಕ್ಕೆ ಗುಣಮಟ್ಟದ ಶಸ್ತ್ರಾಸ್ತ್ರಗಳು, ಪರಿಕರಗಳು, ಸ್ಯಾಟಲೈಟ್ ತಂತ್ರಜ್ಞಾನದ ಅವಶ್ಯಕತೆ ಹೆಚ್ಚಿದೆ. ಇವತ್ತಿನ ಅತ್ಯಾಧುನಿಕ ತಂತ್ರಜ್ಞಾನದಿಂದ ಗನ್ ಹಿಡಿದು ಯುದ್ಧ ಮಾಡುವ ಪ್ರಮೇಯವೇ ಇಲ್ಲವಾಗಿದೆ. ಕುಳಿತಲ್ಲೇ ಸ್ಯಾಟಲೈಟ್ ಮೂಲಕ ದಾಳಿ, ಸೈಬರ್ ದಾಳಿಗಳನ್ನು ನಡೆಸಿದರೆ ಸಾಕು ಒಂದು ದೇಶ ಶಕ್ತಿ ಅರ್ಧದಷ್ಟು ಕುಂಠಿತವಾಗಲಿದೆ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು, ಟೆರೇಸಿಯನ್ ಕಾಲೇಜು ಪ್ರಾಂಶುಪಾಲೆ ಡಾ.ಸಿಸ್ಟರ್ ರೋಹಿಣಿ, ಐಕ್ಯೂಎಸಿ ಸಂಯೋಜಕ ವಿವೇಕ್ ಚಾರ್ಲ್ಸ್, ಕನ್ನಡ ವಿಭಾಗ ಮುಖ್ಯಸ್ಥ ಡಾ.ಸಿ.ಸಿ. ವೆಂಕಟೇಶ್ ಇನ್ನಿತರರು ಉಪಸ್ಥಿತರಿದ್ದರು.

ಶ್ರೀಲಂಕಾ ಗಲಭೆ ಸಂತ್ರಸ್ತರ ಜೀವನಾಧಾರಿತ ರಂಗ ಚಟುವಟಿಕೆ ಅನಾವರಣ



ಜಾನಪದ ಗಾಯಕ ಮೈಸೂರು ಗುರುರಾಜ್ ತಂಡ ಹಾಗೂ ಟಿಎಜಿ (ಜಾಫ್ನಾ) ತಂಡದ ಕಲಾವಿದರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜ.20(ಎಸ್‌ಪಿಎನ್)–ಶ್ರೀಲಂಕಾದಲ್ಲಿನ ಅಂತಃಕಲಹದಲ್ಲಿ ಉಂಟಾದ ಜೀವಹಾನಿ ಕಥೆಗಳನ್ನು ರಂಗಭೂಮಿ ಮೂಲಕ ಭಾರತದಲ್ಲಿ ಅನಾವರಣಗೊಳಿಸಲಾಗುತ್ತಿದೆ ಎಂದು ಥಿಯೇಟರ್ ಆಕ್ಷನ್ ಗ್ರೂಪ್‌ನ ಹಿರಿಯ ರಂಗಕರ್ಮಿ ಶಶಿಧರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಹಾರ್ಡ್ವಿಕ್ ವಿದ್ಯಾಸಂಸ್ಥೆ ಆವರಣದಲ್ಲಿ ಭಾರತೀಯ ರಂಗ ಶಿಕ್ಷಣ ಸಂಸ್ಥೆ ವತಿಯಿಂದ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದಡಿ ಏರ್ಪಡಿಸಿದ್ದ ಜಾನಪದ ಗಾಯಕ ಗುರುರಾಜ್ ಮತ್ತು ತಂಡದಿಂದ ಮಂಟೇಸ್ವಾಮಿ ಕಾವ್ಯ ಹಾಗೂ ಟಿಎಜಿ (ಜಾಫ್ನಾ) ತಂಡದ ನಾಟಕ ಪ್ರದರ್ಶನದಲ್ಲಿ ಭಾಗವಹಿಸಿ ಮಾತನಾಡಿದರು.

ಶ್ರೀಲಂಕಾದಲ್ಲಿ ಸಂಭವಿಸಿದ ಘರ್ಷಣೆಯಿಂದಾಗಿ ತಮ್ಮ ಆತ್ಮೀಯರನ್ನು ಕಳೆದುಕೊಂಡ ಜನರೊಂದಿಗೆ ಥಿಯೇಟರ್ ಆಕ್ಷನ್ ಗ್ರೂಪ್ ತಂಡ ಕೆಲಸ ಮಾಡುತ್ತಿದೆ. ಅಶಾಂತಿ ವಾತಾವರಣ ಕಾರಣದಿಂದ ಸ್ಥಳಾಂತರಗೊಂಡಿರುವ ವಿವಿಧ ಸಮುದಾಯಗಳಿಗೆ ಸೇರಿದ ಯುವಕರಿಗೆ ಈ ಪ್ರದರ್ಶನದಲ್ಲಿ ಅವಕಾಶ ಸಿಗಲಿದೆ ಎಂದರು.

ಶ್ರೀಲಂಕಾದ ಜನಪದ ಕಲಾವಿದ ಚಿದಂಬರನಾದನ್ ಮಾತನಾಡಿ, ರಂಗಭೂಮಿ ನೊಂದ ಜನರ ಭಾವನೆಗಳಿಗೆ ಸುರಕ್ಷಿತ ವಾತಾವರಣ ಕಲ್ಪಿಸಲಿದೆ. ಶ್ರೀಲಂಕಾದಲ್ಲಿ ಬದುಕುತ್ತಿರುವ ಕಲಾವಿದರಿಗೆ ಇಲ್ಲಿ ಮುಕ್ತವಾಗಿ ಪ್ರದರ್ಶನ ನೀಡುವ ಅವಕಾಶ ಸಿಕ್ಕಿದೆ. ಪ್ರತಿ ವರ್ಷ ಜನವರಿಯಲ್ಲಿ ಸಾಂಸ್ಕೃತಿಕ ವಿನಿಮಯದಡಿ ಈ ತಂಡ ತಮಿಳುನಾಡು ಮತ್ತು ಕರ್ನಾಟಕಕ್ಕೆ ಪ್ರವಾಸ ಮಾಡಿ, ರಂಗಭೂಮಿಯಲ್ಲಿ ತೊಡಗಿಸಿಕೊಂಡು ಒಂದು ಸಮುದಾಯವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಜಾನಪದ ಗಾಯಕ ಮೈಸೂರು ಗುರುರಾಜ್ ಮತ್ತು ತಂಡದಿಂದ ಮಲೆ ಮಹದೇಶ್ವರ, ಮಂಟೇಸ್ವಾಮಿ ಜೀವನ ಚರಿತ್ರೆಯ ಭಕ್ತಿಗೀತೆಗಳ ಗಾಯನ ನಡೆಸಿಕೊಟ್ಟರಲ್ಲದೆ, ದಾರ್ಶನಿಕರ ಸಂದೇಶ ಹಾಗೂ ಧರ್ಮ ಪಾಲನೆ, ಮಾನವ ಪ್ರೇಮದ ಕುರಿತಾದ ನೀಲಗಾರರ ಪದಗಳನ್ನು ಹಾಡಿ ರಂಜಿಸಿದರು.

ಅಧಿಕಾರಿಗಳು, ಸಿಬ್ಬಂದಿ ಹಾಜರಾತಿ ಕಡ್ಡಾಯ

ಮೈಸೂರು: ಜನವರಿ 26 ರಂದು ಬೆಳಗ್ಗೆ 9 ಗಂಟೆಗೆ ನಗರದ ಬನ್ನಿಮಂಟಪ ಪಂಜಿನ ಕವಾಯಿತು ಮೈದಾನಲ್ಲಿ ನಡೆಯುವ ಗಣರಾಜ್ಯೋತ್ಸವ ಸಮಾರಂಭದಲ್ಲಿ ಜಿಲ್ಲಾ ಮಟ್ಟದ ಇಲಾಖಾ ಅಧಿಕಾರಿ/ಸಿಬ್ಬಂದಿ (ಕೇಂದ್ರ/ರಾಜ್ಯ ಸರ್ಕಾರ, ಮಂಡಳಿ, ನಿಗಮ, ಸ್ವಾಯತ್ತ ಸಂಸ್ಥೆಗಳು ಸೇರಿದಂತೆ) ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಸದರಿ ದಿನದಂದು ಬನ್ನಿಮಂಟಪ ಪಂಜಿನ ಕವಾಯಿತು ಮೈದಾನದ ಪ್ರವೇಶ ದ್ವಾರದಲ್ಲಿ ಇಲಾಖಾವಾರು ಇರಿಸಲಾಗಿರುವ ಹಾಜರಾತಿ ವಹಿಯಲ್ಲಿ ಸಮಾರಂಭಕ್ಕೆ ಹಾಜರಾಗುವ ಅಧಿಕಾರಿ/ನೌಕರರು ಕಡ್ಡಾಯವಾಗಿ ಸಹಿ ಮಾಡಿ ಸಮಾರಂಭದಲ್ಲಿ ಭಾಗವಹಿಸುವುದು. ಸಮಾರಂಭ ಮುಕ್ತಾಯಗೊಂಡ ನಂತರ ಹಾಜರಾತಿ ಪಡೆಯಲು ನಿಯೋಜಿಸಿದ ಅಧಿಕಾರಿಗಳು ಹಾಜರಾತಿ ವಹಿಯನ್ನು ತಪ್ಪದೆ ಈ ಕಚೇರಿಗೆ ಸಲ್ಲಿಸಬೇಕು ಎಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಇನ್ಸ್‌ಪೆಕ್ಟರ್‌ಗೆ ಅಭಿನಂದನೆ



ಇತ್ತೀಚೆಗೆ ಮೈಸೂರಿನ ಲಷ್ಕರ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಆಗಿ ಅಧಿಕಾರ ವಹಿಸಿಕೊಂಡ ಶ್ರೀಮತಿ ಟಿ.ಎಸ್.ಲೋಲಾಕ್ಷಿ ಅವರನ್ನು ನಯನಜ ಕ್ಷತ್ರಿಯ ಕನ್ನಡಿಗರ ಶ್ರೀ ರಾಮಮಂದಿರ ಟ್ರಸ್ಟ್ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಟ್ರಸ್ಟ್‌ನ ಅಧ್ಯಕ್ಷ ಎಂ.ಕುಮಾರ್, ಉಪಾಧ್ಯಕ್ಷ ಶ್ರೀನಿಧಿ, ಕಾರ್ಯದರ್ಶಿ ರವೀಂದ್ರ, ಖಜಾಂಚಿ ಗಂಗಾಧರ, ಟ್ರಸ್ಟಿಗಳಾದ ಗುಂಡಣ್ಣ, ಗೋಪಿನಾಥ್, ರವಿ, ಬಿಜೆಪಿ ಮುಖಂಡ ಮೈ.ನಾ.ಲೋಕೇಶ್ ಉಪಸ್ಥಿತರಿದ್ದರು

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.1.2026 ಬುಧವಾರ, ಮಳೆ ನಕ್ಷತ್ರ: ಉಷಾ, 11.01.2026ರಿಂದ 23.01.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಧನಿಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

- **ಕಾವೇರಿ ಆಯುರ್ವೇದಿಕ್ ಆಸ್ಪತ್ರೆ:** ರಕ್ತ ಪ್ರದರ, ದೃಷ್ಟಿ ಮತ್ತು ನೇತ್ರ ಪರೀಕ್ಷಾ ಶಿಬಿರ, ಮೋತಿಯಾ ಬಿಂದು (Cataract) ತಪಾಸಣೆ ಹಾಗೂ ಆರಂಭಿಕ ಹಂತದ ನಿರ್ವಹಣೆ, ದೃಷ್ಟಿದೋಷಗಳ (Retrative errors) ತಿದ್ದುಪಡಿ, ಅಂಬ್ಲಿಯೋಪಿಯಾ ನಿರ್ವಹಣೆ, ಮಧುಮೇಹ ರೆಟಿನೋಪತಿ ಬಗ್ಗೆ ಜಾಗೃತಿ ಹಾಗೂ ತಪಾಸಣೆ, ರೆಟಿನೈಟಿಸ್ ಫಿಗ್ಮಂಟೋಸಾ ನಿರ್ವಹಣೆ, ಕಂಪ್ಯೂಟರ್ ವಿಷನ್ ಸಿಂಡ್ರೋಮ್ ನಿರ್ವಹಣೆ, ಸ್ಥಳ: ಕಾವೇರಿ ಆಯುರ್ವೇದಿಕ್ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ಮೈಸೂರು ವಿವಿ, ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ :** ರೂಸಾ 2.0 ಪ್ರಾಯೋಜಿತ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಅಧ್ಯಕ್ಷತೆ : ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಪ್ರೊ. ಹೆಚ್.ಪಿ. ಜ್ಯೋತಿ, ಸ್ಥಳ: ಎಂಎಂಟಿಟಿಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಕನ್ನಡ ಲೇಖಕಿಯರ ಟ್ರಸ್ಟ್, ಕರ್ನಾಟಕ ಲೇಖಕಿಯರ ಸಂಘ, ಮೈಸೂರು ಶಾಖೆ, ಕನ್ನಡ ಸಾಹಿತ್ಯ ಪರಿಷತ್ :** ಅಭಿನಂದನಾ ಸಮಾರಂಭ, ಅಭಿನಂದಿತರು : ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ. ಆರ್. ಸುನಂದಮ್ಮ, ಅಧ್ಯಕ್ಷತೆ : ಕನ್ನಡ ಲೇಖಕಿಯರ ಟ್ರಸ್ಟ್ ಅಧ್ಯಕ್ಷೆ ಡಾ. ಪದ್ಮಾಶೇಖರ್, ಮುಖ್ಯ ಅತಿಥಿಗಳು : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು : ಕರ್ನಾಟಕ ಲೇಖಕಿಯರ ಸಂಘ, ಮೈಸೂರು ಘಟಕದ ಅಧ್ಯಕ್ಷೆ ಉಷಾ ನರಸಿಂಹನ್, ಕೆರೋಡಿ ಲೋಲಾಕ್ಷಿ, ಸುಧಾ ರಮೇಶ್, ಬಿ. ಸುಜಾತ, ಸುಚಿತ್ರಾ ಹೆಗಡೆ, ಕೆ. ಲಕ್ಷ್ಮೀ, ಕೆ.ಟಿ. ಸುಜಾತಾ ರವೀಶ್, ಎಸ್.ಎಲ್. ವರಲಕ್ಷ್ಮೀ ಮಂಜುನಾಥ್, ಅಭಿನಂದನಾ ನುಡಿ : ಲೇಖಕಿ ಡಾ. ಎಂ.ಎಸ್. ವೇದಾ, ಕವಿಗೋಷ್ಠಿ ಅಧ್ಯಕ್ಷತೆ : ಶ್ರೀಮತಿ ಎಚ್.ಎಸ್. ಮಧುರಾಣಿ, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಭವನ, ವಿಜಯನಗರ ಮೊದಲನೇ ಹಂತ, ಬೆಳಗ್ಗೆ 10.30ಕ್ಕೆ.
- **ಸಿದ್ಧಾರ್ಥನಗರ ಸ್ಟೇಟ್ ಗೌರ್ನಮೆಂಟ್ ಪೆನ್ಷನರ್ಸ್ ಅಸೋಸಿಯೇಷನ್ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಅಸೋಸಿಯೇಷನ್ ಅಧ್ಯಕ್ಷ ಎ. ಮಾದಯ್ಯ, ಸ್ಥಳ: ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಸಭಾಂಗಣ, ಸಿದ್ಧಾರ್ಥನಗರ, ಬೆಳಗ್ಗೆ 10.30ಕ್ಕೆ.
- **ಮೈಸೂರು ಲಯನ್ಸ್ ಸ್ಕೂಲ್ :** ಶಾಲಾ ವಾರ್ಷಿಕೋತ್ಸವ, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್ ಗೌಡ, ಡಿಡಿಪಿಐ ಡಿ. ಉದಯ್‌ಕುಮಾರ್, ಅಧ್ಯಕ್ಷತೆ : ಮೈಸೂರು ಲಯನ್ಸ್ ಸ್ಕೂಲ್ ಅಧ್ಯಕ್ಷ ಲಯನ್ ಶಿವಕುಮಾರ್, ಉಪಸ್ಥಿತರು : ಲಯನ್ಸ್ ಕ್ಲಬ್ ಆಫ್ ಮೈಸೂರು ಅಧ್ಯಕ್ಷ ಕೃಷ್ಣಮೂರ್ತಿ, ಕಾರ್ಯದರ್ಶಿ ಲಯನ್ ಸಿ.ಮೋಹನ್ ಕುಮಾರ್, ಖಜಾಂಚಿಗಳಾದ ಲಯನ್ ಮಾಯಣ್ಣ, ಲಯನ್ ಜೆ. ಲೋಕೇಶ್, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5ಕ್ಕೆ.
- **ಸಾಧನಾ ಮಂದಿರ :** ಅರ್ಥ, ಸಂಕೇತ, ಮಹತ್ವ, ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ಮಾಡಲು ವಿಶೇಷ ತರಬೇತಿ ಪೂಜ್ಯ ಸ್ವಾಮಿ ಹಂಸಾನಂದರಿಂದ, ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್. ಮೊಹಲ್ಲಾ, ಸಂಜೆ 6.30ರಿಂದ.
- **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಪ್ರಜಾಪಿತ ಬ್ರಹ್ಮಾ ಅವರ 57ನೇ ಅವ್ಯಕ್ತ ಪುಣ್ಯ ಸ್ಮೃತಿ ದಿನದ ಪ್ರಯುಕ್ತ ವಿಶ್ವ ಶಾಂತಿ ದಿನಾಚರಣೆ, ಸಾನ್ನಿಧ್ಯ : ಈಶ್ವರೀಯ ವಿವಿ ಮುಖ್ಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಮುಖ್ಯ ಅತಿಥಿಗಳು : ಆಯುಷ್ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಗಜಾನನ ಹೆಗಡೆ, ಎನ್.ಎಸ್. ರವಿಶಂಕರ್, ಸ್ಥಳ: ಜ್ಞಾನಪ್ರಕಾಶ ಭವನ, ಯಾದವಗಿರಿ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಚಂದ್ರಶೇಖರ ದಾಮ್ಲೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮಸಂದ್ರ ಸುರೇಶ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ –ಕೆ. ಶ್ರೇಯಾ, ವ್ಯಾಖ್ಯಾನ –ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯುವವಾಣಿ :ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ವಿಷಯ–ಭೌತಶಾಸ್ತ್ರ, ಭಾಗವಹಿಸುತ್ತಾರೆ–ಮೈಸೂರಿನ ಚಿನ್ಮಯ ಪದವಿ ಪೂರ್ವ ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕರಾದ ಶರತ್ ಕುಮಾರ್, ಪ್ರಸ್ತುತಿ– ದಿಗ್ವಿಜಯ್.ಬಿ, 9.15 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ – ಪಂಡಿತ್ ಪ್ರವೀಣ್ ಗೋಡ್ಖಿಂಡಿ–ಬಾನ್ಸುರಿ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಭೂಷಣಿ ಕಲ್ಯಾಣರಾಮನ್ – ಹಾಡುಗಾರಿಕೆ, 4.00 ಮಹಿಳಾರಂಗ–ಸಾಧನ ಶಿಖರ–2025ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲೂಕು, ಯಾಚೇನಹಳ್ಳಿಯ ಸೋಬಾನೆ ಕಲಾವಿದೆ ಚನ್ನಾಜಮ್ಮ ಅವರೊಂದಿಗೆ ಮಾತುಕತೆ.ಇವರೊಂದಿಗೆ ಭಾಗವಹಿಸಲಿದ್ದಾರೆ–ದಿಗ್ವಿಜಯ್ .ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಮಾಧವಿ ಭಂಡಾರಿ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ಮನೆ ಕಟ್ಟುವಲ್ಲಿ ಇತರ ತಜ್ಞರ ಪಾತ್ರ, ಭಾಗವಹಿಸುತ್ತಾರೆ–ಆರ್.ಎಲ್. Constructionನ ವ್ಯವಸ್ಥಾಪಕ ಪಾಲುದಾರ ಎಂ.ಎಸ್.ರಾಮ್‌ಪ್ರಸಾದ್ ಮತ್ತು ಎಲ್ ಅಂಡ್ ಎನ್ Constructionನ ಸಲಹೆಗಾರರಾದ ನಿರಂಜನ್ ಸಿಂಹ, ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ಕೃಷಿರಂಗ–ಕೋಳಿ ಸಾಕಾಣಿಕೆ ಈ ಕುರಿತು ಮೈಸೂರು ತಾಲ್ಲೂಕು ಜಯಪುರ ಹೋಬಳಿ, ಹಾರೋಹಳ್ಳಿ ಗ್ರಾಮದ ಎಸ್. ಗುರುರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಮಕ್ಕಳ ಮಂಟಪ ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ–ಎಸ್.ಎಸ್.ಎಲ್.ಸಿ ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ –ಸಾಮಾನ್ಯ ವಿಜ್ಞಾನ (ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ), ಭಾಗವಹಿಸುವವರು– ಸದ್ವಿದ್ಯಾ ಪ್ರೌಢಶಾಲೆಯಲ್ಲಿ ಶಿಕ್ಷಕರಾದ ಅನಿಲ್ ಕುಮಾರ್. ಎಸ್. ಇವರೊಂದಿಗೆ ಭಾಗವಹಿಸುತ್ತಾರೆ –ದಿಗ್ವಿಜಯ್.ಬಿ, 9.30 ಕ್ರೀಡಾಲೋಕ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್– 2025–ಸ್ಮಿತ್ ತೆವಾರಿ–ಹಿಂದೂಸ್ಥಾನಿ ಸರೋದ್ ವಾದನ

ಮಂಡ್ಯ ಜಿಲ್ಲೆ ಕೆಆರ್ ಪೇಟೆ ತಾಲೂಕು ಸಿಂಧಘಟ್ಟ ಗ್ರಾಮದಲ್ಲಿ


16–17ನೇ ಶತಮಾನಕ್ಕೆ ಸೇರಿದ ಶಾಸನ ಪತ್ತೆ

ಶಾಸನ ಪಡಿಯಚ್ಚು, ಅಧ್ಯಯನ ಪ್ರಕ್ರಿಯೆ ನಡೆಸಿದ ಮೈಸೂರಿನ ಎಎಸ್‌ಐನ ಎಪಿಗ್ರಫಿ ಪ್ರಧಾನ ಶಾಖೆ ತಂಡ

ಮೈಸೂರು,ಜ.20(ಪಿಎಂ)– ಪುರಾತನ ಶಾಸನವೊಂದು ಮಂಡ್ಯ ಜಿಲ್ಲೆಯ ಕೆಆರ್ ಪೇಟೆ ತಾಲೂಕು ಸಿಂಧಘಟ್ಟ ಗ್ರಾಮದಲ್ಲಿ ಪತ್ತೆಯಾಗಿದೆ. ಈ ಶಾಸನವು 16–17ನೇ ಶತಮಾನಕ್ಕೆ ಸೇರಿದ್ದು ಎನ್ನಲಾಗಿದೆ. ಮೈಸೂರಿನ ಎಎಸ್‌ಐನ ಎಪಿಗ್ರಫಿ ಪ್ರಧಾನ ಶಾಖೆ ತಂಡದಿಂದ ಶಾಸನ ಪಡಿಯಚ್ಚು, ಅಧ್ಯಯನ ಪ್ರಕ್ರಿಯೆ ನಡೆಸಲಾಗಿದೆ.

ಈ ಗ್ರಾಮದ ಹೊರವಲಯದ ಸಣ್ಣ ಗುಡ್ಡದ ಮೇಲಿರುವ ಪಾಳು ಬಿದ್ದ ಸ್ಥಿತಿಯಲ್ಲಿರುವ ತಿರುಮಲ ದೇವಸ್ಥಾನದಲ್ಲಿ ಸದರಿ ಶಾಸನ ಪತ್ತೆಯಾಗಿದೆ. ಈ ಹಳ್ಳಿಯು ಐತಿಹಾಸಿಕ ಹಿನ್ನೆಲೆ ಹೊಂದಿರುವುದನ್ನು ಇಲ್ಲಿ ದೊರೆತಿರುವ ಪ್ರಾಚ್ಯ ಅವಶೇಷಗಳ ಆಧಾರದಲ್ಲಿ ಹೇಳಬಹುದಾಗಿದೆ. ಗ್ರಾಮದಲ್ಲಿ ಎರಡು ಪುರಾತನ ದೇವಸ್ಥಾನಗಳಿದ್ದು, ಈ ಪೈಕಿ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನವು ಭಾರತೀಯ ಪುರಾತತ್ವ ಸರ್ವೇಕ್ಷಣೆ (ಎಎಸ್‌ಐ) ಸಂಸ್ಥೆ ಅಧೀನದಲ್ಲಿದ್ದರೆ, ಮತ್ತೊಂದು ಶ್ರೀ ಸಂಗಮೇಶ್ವರ ದೇವಸ್ಥಾನವು ರಾಜ್ಯ ಸರ್ಕಾರದ ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರಿದೆ.

ಪತ್ತೆಯಾದ ಶಾಸನದ ಅಧ್ಯಯನ: ತಿರುಮಲ ದೇವಸ್ಥಾನದಲ್ಲಿ ಕಂಡುಬಂದ ಶಾಸನದ ಅಧ್ಯಯನ, ಪಡಿಯಚ್ಚು ತೆಗೆಯುವ ಪ್ರಕ್ರಿಯೆಯನ್ನು ಮೈಸೂರಿನಲ್ಲಿರುವ ಎಎಸ್‌ಐ ಸಂಸ್ಥೆಯ ಸಹಾಯಕ ಅಧೀಕ್ಷಕ ಶಾಸನತಜ್ಞ ಡಾ.ಆರ್.ವಿ. ಅನಿಲ್‌ಕುಮಾರ್ ನೇತೃತ್ವದಲ್ಲಿ ಇತ್ತೀಚೆಗೆ ನಡೆಸಲಾಯಿತು. ಈ ಕ್ಷೇತ್ರದ ಅಧ್ಯಯನದಲ್ಲಿ ಇವರಿಗೆ ಎಎಸ್‌ಐ ಸಿಬ್ಬಂದಿ ನಾಗೇಂದ್ರ ಸಹಕರಿಸಿದರು.





ಮಂಡ್ಯ ಜಿಲ್ಲೆಯ ಕೆಆರ್ ಪೇಟೆ ತಾಲೂಕು ಸಿಂಧಘಟ್ಟ ಗ್ರಾಮದ ಹೊರವಲಯದಲ್ಲಿರುವ ಗುಡ್ಡದ ಮೇಲಿರುವ ತಿರುಮಲ ದೇವಸ್ಥಾನ ಹಾಗೂ ಈ ದೇವಸ್ಥಾನದೊಳಗೆ ಭಗ್ನಗೊಂಡ ಸ್ಥಿತಿಯಲ್ಲಿರುವ ತಿರುಮಲ ನಾರಾಯಣ ದೇವರ ವಿಗ್ರಹವನ್ನು ಚಿತ್ರಗಳಲ್ಲಿ ಕಾಣಬಹುದು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಾ.ಆರ್.ವಿ.ಅನಿಲ್ ಕುಮಾರ್, ಈ ಗ್ರಾಮದಲ್ಲಿ ಆಗಾಗ್ಗೆ ಪ್ರಾಚ್ಯ ಅವಶೇಷಗಳು ದೊರಕುತ್ತಿರುವುದು ವಿಶೇಷ. ಇದರ ಹಿಂದಿನ ಹೆಸರು 'ಶ್ರೀ ಮದನಾದಿ ಅಗ್ರಹಾರ' ಎಂಬುದಾಗಿದೆ. ಸಿಂಧಘಟ್ಟ ಗ್ರಾಮದಿಂದ 2 ಕಿ.ಮೀ. ದೂರದಲ್ಲಿ ಅಂತಹ ಎತ್ತರವಿಲ್ಲದ ಚಿಕ್ಕ ಗುಡ್ಡವಿದ್ದು, ಇದರ ಮೇಲೆ ಭಗ್ನಗೊಂಡಿರುವ 'ತಿರುಮಲ ನಾರಾಯಣ' ಎಂಬ ದೇವಸ್ಥಾನ ಇದೆ. ಸ್ಥಳೀಯರು ಇದೇ ಹೆಸರಿನಿಂದ ಇದನ್ನು ಕರೆಯುತ್ತಾರಾದರೂ ಸಾಮಾನ್ಯವಾಗಿ ಅಲ್ಲಿಗೆ ಯಾರೂ ಹೋಗುವುದಿಲ್ಲ. ಸ್ಥಳೀಯರು ತಿರುಮಲ ಗುಡ್ಡ ಎನ್ನುತ್ತಾರೆ ಎಂದು ತಿಳಿಸಿದರು.

ಕನ್ನಡ ಭಾಷೆ, ಕನ್ನಡ ಲಿಪಿಯಲ್ಲಿರುವ ಶಾಸನ: ತಿರುಮಲ ನಾರಾಯಣ ದೇವಸ್ಥಾನದಲ್ಲಿರುವ ಶಾಸನದ ಬಗ್ಗೆ ನಮಗೆ ಮಾಹಿತಿ ನೀಡಿದವರು ಈ ಗ್ರಾಮದ ಲಕ್ಷ್ಮಯ್ಯ ಎಂಬುವವರು. ಅವರು ಹಾಲಿ ಮೈಸೂರಿನ ವಿಜಯನಗರದ ನಿವಾಸಿ. ಅವರು ತಿಂಗಳ ಹಿಂದೆ ಶಾಸನ ಕಂಡು ಬಂದಿರುವ ಬಗ್ಗೆ ಮಾಹಿತಿ ನೀಡಿದರು. ಪ್ರಮುಖ ಅಂಶವೆಂದರೆ ಈ ದೇವಸ್ಥಾನದ ಬಗ್ಗೆ ಈವರೆಗೆ ಯಾವುದೇ ಮಾಹಿತಿ ಲಭ್ಯವಿರಲಿಲ್ಲ. ದೇವಸ್ಥಾನದ ಮುಖ ಮಂಟಪದ ಬಾಗಿಲುವಾಡದಲ್ಲಿ ಶಾಸನ ಇರುವುದು ಕಂಡುಬಂದಿದೆ. ಈ ಶಾಸನದ ಮೊದಲ ಸಾಲಿನಲ್ಲಿ 'ದೇವರಸ' ಎಂದಿದ್ದರೆ, ಎರಡನೇ ಸಾಲಿನಲ್ಲಿ 'ನ ಸೇವೆ' ಎಂದಿದೆ. ಅಲ್ಲಿಗೆ ಇದು ದೇವರಸನ ಸೇವೆ' ಎಂದಾಗಲಿದೆ. ಈ ಶಾಸನ ಸುಮಾರು 16–17ನೇ ಶತಮಾನಕ್ಕೆ ಸೇರಿದ್ದು ಎಂಬುದು ಅಧ್ಯಯನದಿಂದ ತಿಳಿದು ಬಂದಿದೆ. ಈ ದೇವಸ್ಥಾನದ ಬಗ್ಗೆ ಮಾಹಿತಿ ನೀಡಲಿರುವ ಏಕೈಕ ಶಾಸನ ಇದಾಗಿದೆ ಎನ್ನುತ್ತಾರೆ ಡಾ.ಆರ್.ವಿ.ಅನಿಲ್‌ಕುಮಾರ್.

'ದೇವರಸ' ಈ ಪ್ರದೇಶದ ಒಬ್ಬ ಪ್ರಮುಖ ಸ್ಥಾನಮಾನ ಹೊಂದಿದ್ದ ವ್ಯಕ್ತಿ ಎನ್ನಬಹುದು. ಇದೇ ಹೆಸರು ಇದೇ ಗ್ರಾಮದಲ್ಲಿರುವ ಶ್ರೀ ಲಕ್ಷ್ಮಿನಾರಾಯಣ ದೇವಸ್ಥಾನದ ಗರುಡಗಂಭದಲ್ಲಿ ಸಹ ಇರುವುದು ಈ ಹಿಂದೆಯೇ ಪತ್ತೆಯಾಗಿದೆ. ಹಾಗಾಗಿ ಈ ಗರಡುಗಂಭದ ಸ್ಥಾಪಕ ಇವನೇ ಎನ್ನಬಹುದು. ತಿರುಮಲ ನಾರಾಯಣ ದೇವಸ್ಥಾನದ ಆವರಣದಲ್ಲಿ ಚಿಕ್ಕ ಕಲ್ಯಾಣಿ ಸಹ ಕಂಡು ಬಂದಿದೆ. ಆದರೆ ಅದು ಮುಚ್ಚಿ ಹೋಗಿದೆ ಎಂದು ಅವರು ಹೇಳುತ್ತಾರೆ.

> ಸಿಂಧಘಟ್ಟ ಗ್ರಾಮ ನನ್ನ ಸ್ವಂತ ಊರು. ತಿರುಮಲ ದೇವಸ್ಥಾನವಿರುವ ಗುಡ್ಡದ ಪಕ್ಕದಲ್ಲೇ ನಮ್ಮ ಜಮೀನು ಸಹ ಇದೆ. ನಾನು ಚಿಕ್ಕವನಾಗಿಂದ ಗಮನಿಸುತ್ತಿದ್ದೇನೆ. ಅಂದಿನಿಂದ ಸದರಿ ದೇವಸ್ಥಾನ ಭಗ್ನಗೊಂಡಿರುವ ಸ್ಥಿತಿಯಲ್ಲಿಯೇ ಇದೆ. ಆಗಾಗ್ಗೆ ಜಮೀನಿಗೆ ಹೋಗುತ್ತಿದ್ದಾಗ ಈ ದೇವಸ್ಥಾನ ಬಗ್ಗೆ ತಿಳಿದುಕೊಳ್ಳುವ ಕುತೂಹಲದಿಂದ ಹೋಗಿ ನೋಡಿದಾಗ ಶಾಸನ ಇರುವುದು ಕಂಡು ಬಂದಿತು. ಗ್ರಾಮಸ್ಥರಲ್ಲಿ ಆಸಕ್ತರನ್ನು ಸಂಘಟಿಸಿ ಟ್ರಸ್ಟ್ ಸ್ಥಾಪಿಸಿ ಜೀರ್ಣೋದ್ಧಾರಗೊಳಿಸುವ ಉದ್ದೇಶ ಹೊಂದಲಾಗಿದೆ.
> -**ಲಕ್ಷ್ಮಯ್ಯ**, ಸಿಂಧಘಟ್ಟ ಗ್ರಾಮದವರು.

ತಿರುಮಲ ನಾರಾಯಣ ದೇವಸ್ಥಾನ ಸಂಪೂರ್ಣ ಕಲ್ಲಿನಿಂದ ನಿರ್ಮಾಣಗೊಂಡಿದೆ. ಬಹುಶಃ ಈ ದೇವಾಲಯದ ಗೋಪುರ ಇಟ್ಟಿಗೆಯಿಂದ ನಿರ್ಮಿಸಿರಬೇಕು. ಅದು ಈಗ ಇಲ್ಲವಾಗಿದೆ. ಇಲ್ಲಿರುವ ತಿರುಮಲ ನಾರಾಯಣ ದೇವರ ಮೂರ್ತಿ ಭಗ್ನಗೊಂಡಿದೆ. ಈ ದೇವಸ್ಥಾನ ನಿರ್ಮಾಣಕ್ಕೆ ದೇವರಸನೇ ಕಾರಣನೆಂಬುದು ಈಗ ಸ್ಪಷ್ಟವಾಗುತ್ತದೆ. ಹೊಯ್ಸಳರ ಆಳ್ವಿಕೆ ಕಾಲದಿಂದ ಈ ಪ್ರದೇಶದಲ್ಲಿ ರಾಜರು, ಸಮಂತರು ಆಳಿದ್ದಾರೆ ಎನ್ನಬಹುದು. ಸಿಂಧಘಟ್ಟಕ್ಕೆ ಮೇಲುಕೋಟೆ ಸಮೀಪದಲ್ಲಿದೆ. ಹಾಗಾಗಿ ಈ ಪ್ರದೇಶ ವೈಷ್ಣವ ಕೇಂದ್ರವಾಗಿತ್ತು ಎನ್ನಬಹುದು ಎಂದು ಅವರು ವಿವರಿಸಿದರು.

ಚಾಮುಂಡಿಬೆಟ್ಟ ಬಳಿಯ ಭೂಪರಿವರ್ತನೆ

ಕಾನೂನುಬಾಹಿರವಲ್ಲ

ಎಂಡಿಎ ಕಮಿಷನರ್ ಕೆ.ಆರ್.ರಕ್ಷಿತ್ ಸ್ಪಷ್ಟನೆ

ಮೈಸೂರು, ಜ. 20 (ಆರ್‌ಕೆ)– ಅರಣ್ಯ ಇಲಾಖೆ ನೀತಿ ನಿಬಂಧನೆಗಳನ್ನು ಗಾಳಿಗೆ ತೂರಿ ಮೈಸೂರಿನ ಚಾಮುಂಡಿಬೆಟ್ಟದ ಸುತ್ತಲಿನ ಸುಮಾರು 50 ಎಕರೆ ಭೂಮಿಯನ್ನು ಪರಿವರ್ತನೆ ಮಾಡಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ವು ಹೊಸ ವಸತಿ ಬಡಾವಣೆ ನಿರ್ಮಿಸಲು ಅನುವು ಮಾಡಿಕೊಟ್ಟಿದೆ ಎಂಬ ಪರಿಸರವಾದಿಗಳ ಆರೋಪವನ್ನು ಪ್ರಾಧಿಕಾರದ ಆಯುಕ್ತ ಕೆ.ಆರ್.ರಕ್ಷಿತ್ ತಳ್ಳಿ ಹಾಕಿದ್ದಾರೆ.

ಈ ಕುರಿತಂತೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿರುವ ಅವರು ನಾವು ಭೂ ಉಪಯೋಗ ಬದಲಾವಣೆ (Change of Land Use)ಗಾಗಿ ಸರ್ಕಾರಕ್ಕೆ ಕಳುಹಿಸಿರುವ ಪ್ರಸ್ತಾವನೆಯು ಅಭಿವೃದ್ಧಿ ರಹಿತ ವಲಯದ ಹೊರಗಿದೆ ಎಂದರು.

ಹೀಗೆ ಆರೋಪಿಸುತ್ತಿರುವ ಭೂಮಿಯೂ ಕೃಷಿ ವಲಯದಲ್ಲಿದ್ದು, ಕರ್ನಾಟಕ ನಗರ ಮತ್ತು ಗ್ರಾಮೀಣ ಯೋಜನೆ ಕಾಯ್ದೆ 14(ಎ) ಯಡಿಯಲ್ಲಿ ಭೂ ಉಪಯೋಗವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಬದಲಾಯಿಸಲು ನಮಗೆ ಅವಕಾಶವಿದೆ. ಈ ಎಲ್ಲಾ ಪ್ರಸ್ತಾವನೆಗಳು ಚಾಮುಂಡಿ ಬೆಟ್ಟದ ಗಡಿಯ 100 ಮೀಟರ್ ಅಭಿವೃದ್ಧಿ ರಹಿತ ವಲಯದ ಹೊರಗಿವೆ ಎಂದರು.

ಪ್ರಸ್ತಾವಿತ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರವು ಹೊರಡಿಸಿದ ಪ್ರಾಥಮಿಕ ಅಧಿಸೂಚನೆ (41 ನೋಟಿಫಿಕೇಷನ್)ಯನ್ನು ರಾಜ್ಯ ಉಚ್ಚ ನ್ಯಾಯಾಲಯವು ರದ್ದುಗೊಳಿಸಿದೆ. ನಂತರ ಸರ್ಕಾರ ಈ ಭೂಮಿಗೆ ಅಂತಿಮ ಅಧಿಸೂಚನೆ (61 ನೋಟಿಫಿ ಕೇಷನ್) ಮಾಡಿಲ್ಲ ಎಂದು ರಕ್ಷಿತ್ ಸ್ಪಷ್ಟಪಡಿಸಿದ್ದಾರೆ.

ನಾವು ಪ್ರಾಧಿಕಾರದ ಸಭೆಗೆ ಕಾನೂನು ಬಾಹಿರವಾದ ವಿಷಯಗಳನ್ನು ಚರ್ಚೆಗೆ ತರಲು ಅವಕಾಶವೇ ಇಲ್ಲ. ಒಂದು ವೇಳೆ ಅಂತಹ ವಿಚಾರಗಳು ನಡಾವಳಿಯಲ್ಲಿ ಸೇರಿದ್ದರೂ ಅದನ್ನು ಸಭೆಯಲ್ಲಿ ಚರ್ಚಿಸಿ ಅಲ್ಲಿಯೇ ತಿರಸ್ಕರಿಸಲಾಗುವುದು. ಆದ್ದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಅನಧಿಕೃತ ಅಂಶಗಳಿರುವ ಪ್ರಸ್ತಾವನೆಗಳನ್ನು ಎಂಡಿಎ ಕಳುಹಿಸಿ ಕೊಡುವುದಿಲ್ಲ ಎಂದು ತಿಳಿಸಿದ್ದಾರೆ.



ಕೆ.ಆರ್.ರಕ್ಷಿತ್

ಧರ್ಮಸ್ಥಳ ಬುರುಡೆ ಕೇಸ್: ಬಂಗ್ಲೆಗುಡ್ಡದಲ್ಲಿ ಸಿಕ್ಕ ಅಸ್ಥಿಪಂಜರಗಳು ಎಫ್‌ಎಸ್‌ಎಲ್‌ಗೆ ರವಾನೆ

ಮಂಗಳೂರು, ಜ. 20: ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ಮತ್ತು ಅಪಪ್ರಚಾರ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹತ್ವದ ಬೆಳವಣಿಗೆಯೊಂದು ನಡೆದಿದೆ. ಬಂಗ್ಲೆಗುಡ್ಡದಲ್ಲಿ ಸಿಕ್ಕ 7 ಅಸ್ಥಿಪಂಜರಗಳನ್ನು ಎಸ್‌ಐಟಿ ಅಧಿಕಾರಿಗಳು ಎಫ್‌ಎಸ್‌ಎಲ್‌ಗೆ ರವಾನೆ ಮಾಡಿದ್ದಾರೆ. ಹೆಚ್ಚಿನ ತನಿಖೆಗಾಗಿ ಬೆಂಗಳೂರಿನ ಮಡಿವಾಳದಲ್ಲಿರುವ ಎಫ್‌ಎಸ್‌ಎಲ್ ಕಚೇರಿಗೆ ಅಸ್ಥಿಪಂಜರ ರವಾನೆ ಮಾಡಲಾಗಿದ್ದು, ಸದ್ಯ ಭಾರೀ ಕುತೂಹಲಕ್ಕೆ ಕಾರಣವಾಗಿದೆ.

ಅರಣ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಸ್ಥಿತಿಯಲ್ಲಿ ಅಸ್ಥಿಪಂಜರಗಳು ಪತ್ತೆಯಾಗಿದ್ದವು. ಸದ್ಯ ಹೆಚ್ಚಿನ ತನಿಖೆಗಾಗಿ ಬೆಳ್ತಂಗಡಿ ಎಸ್‌ಐಟಿ ಕಚೇರಿಯಿಂದ ಬೆಂಗಳೂರಿನ ಮಡಿವಾಳದಲ್ಲಿರುವ ಎಫ್‌ಎಸ್‌ಎಲ್ ಕಚೇರಿಗೆ ಅಸ್ಥಿಪಂಜರಗಳನ್ನು ರವಾನಿಸಲಾಗಿದೆ.

ಜನವರಿ 22ರ ವಿಶೇಷ ಅಧಿವೇಶನದ ನಂತರ ಬಜೆಟ್ ತಯಾರಿ ಆರಂಭ

ಬೆಂಗಳೂರು: ಜನವರಿ 22 ರಿಂದ ಜನವರಿ 31 ರವರೆಗೆ ಜಂಟಿ ಅಧಿವೇಶನ ನಡೆಯಲಿದ್ದು, ಮನರೇಗಾ ಯೋಜನೆ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬೆಂಗಳೂರಿನಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ ಮತ್ತು ನರೇಗಾಯೋಜನೆ ಬದಲಾವಣೆಯ ಬಗ್ಗೆ ವಿಶೇಷ ಚರ್ಚೆ ನಡೆಯಲಿದೆ. ಅಧಿವೇಶನದ ನಂತರ ಆಯವ್ಯಯದ ಸಿದ್ಧತೆ ಪ್ರಾರಂಭಿಸಲಾಗುವುದು ಎಂದರು.

ಮುಖ್ಯಮಂತ್ರಿಗಳು ನವದೆಹಲಿಗೆ ಭೇಟಿ ನೀಡುವ ಬಗ್ಗೆ ಪ್ರತಿಕ್ರಿಯೆ ನೀಡಿ, ವರಿಷ್ಠರು ಕರೆ ನೀಡಿದರೆ ನವದೆಹಲಿಗೆ ತೆರಳುವುದಾಗಿ ತಿಳಿಸಿದರು. ಡಿಜಿಪಿ ರಾಮಚಂದ್ರರಾವ್ ಅವರ ಅನುಚಿತ ವರ್ತನೆ ವಿರುದ್ಧ ಕ್ರಮದ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿ, ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಿ, ಅಮಾನತುಗೊಳಿಸಲಾಗಿದೆ ಎಂದರು.

ಸಚಿವ ಆರ್.ಬಿ.ತಿಮ್ಮಾಪುರ ವಿರುದ್ಧ ಕೇಳಿ ಬಂದಿರುವ ಆರೋಪ ಕುರಿತು, ನನಗೆ ಮಾಹಿತಿ ಇಲ್ಲ. ನೀವು ಈಗ ಕೇಳಿದಾಗಲೇ ಗೊತ್ತಾಗಿದ್ದು ಎಂದು ಹೇಳಿದರು.



ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಕಾಂಗ್ರೆಸ್ ರಾಜಕೀಯ ಮಾಡಲ್ಲ

ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಬೆಂಗಳೂರು: ಭಾರತೀಯ ಚುನಾವಣಾ ಆಯೋಗದ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ವಿಚಾರದಲ್ಲಿ ಕಾಂಗ್ರೆಸ್ ರಾಜಕೀಯ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಖಾನಾಪುರ ತಾಲೂಕಿನ ನಂದಗಡ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಜವಾದ ಮತದಾರರ ಬಗ್ಗೆ ಕಾಳಜಿ ಹೊಂದಿದ್ದು, ಮತದಾರರು ಪಟ್ಟಿಯಿಂದ ಹೊರಗುಳಿಯಬಾರದು ಎಂದರು.

ಎಸ್‌ಐಆರ್ ಪ್ರಕ್ರಿಯೆ ಎಚ್ಚರಿಕೆಯಿಂದ ನಡೆಯಬೇಕಿದ್ದು, ಯಾವುದೇ ಮತದಾರರಿಗೆ ಅನ್ಯಾಯವಾಗದಂತೆ ಕಾರ್ಯನಿರ್ವಹಿಸಬೇಕು ಎಂದು ಬಿಎಲ್‌ಓಗಳಿಗೆ ಸೂಚಿಸಲಾಗಿದೆ. ಮಹಾನಗರ ಪಾಲಿಕೆ ಚುನಾವಣೆಗಳು ಬ್ಯಾಲೆಟ್ ಪೇಪರ್ ಮೂಲಕವೇ ನಡೆಯಬೇಕೆಂಬುದು ನಮ್ಮ ಬೇಡಿಕೆಯೂ ಆಗಿದೆ. ಜನರು ಕೂಡ ಬ್ಯಾಲೆಟ್ ಪೇಪರ್‌ನಲ್ಲಿ ಚುನಾವಣೆ ನಡೆಯಲಿ ಎಂಬ ಆಗ್ರಹ ಮಾಡುತ್ತಿದ್ದಾರೆ ಎಂದರು.

ಮುಖ್ಯಮಂತ್ರಿ ಮತ್ತು ಅವರ ಸಂಪುಟ ಸಹೋದ್ಯೋಗಿಗಳು ರಾಜ್ಯವನ್ನು ಲೂಟಿ ಮಾಡುತ್ತಿದ್ದಾರೆ ಎಂಬ ಶಾಸಕ ಜನಾರ್ದನರೆಡ್ಡಿ ಆರೋಪಕ್ಕೆ ಪ್ರತಿ ಕ್ರಿಯಿಸಿದ ಅವರು, ರೆಡ್ಡಿ ರಾಜ್ಯದ ಸಂಪತ್ತನ್ನು ಲೂಟಿ ಮಾಡಿ ಜೈಲು ಸೇರಿದ್ದರು. ಸುಪ್ರೀಂಕೋರ್ಟ್ ನಲ್ಲಿ ಪ್ರಕರಣ ಬಾಕಿ ಇದೆ. ಅಲ್ಲಿ ಅವರಿಗೆ ನಮ್ಮ ವಿರುದ್ಧ ಆರೋಪ ಮಾಡುವ ನೈತಿಕ ಹಕ್ಕಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸಲ್ಲಿಸಿರುವ ಮೊಕದ್ದಮೆ ಜ.21 ರಂದು ವಿಚಾರಣೆಗೆ ಬರಲಿದ್ದು, ರಾಜ್ಯಗಳ ಗಡಿ ನಿರ್ಧರಿಸುವ ವಿಷಯ ಸುಪ್ರೀಂಕೋರ್ಟ್‌ನ ವ್ಯಾಪ್ತಿಗೆ ಬರುತ್ತದೆಯೇ ಎಂದು ನಾವು ಪ್ರಶ್ನಿಸುತ್ತೇವೆ ಎಂದು ಅವರು ತಿಳಿಸಿದರು.

ಸುದೀಪ್, ಮ್ಯಾನೇಜರ್ ಚಂದ್ರಚೂಡ್ ವಿರುದ್ಧ ವಂಚನೆ ಆರೋಪ

ಕಮಿಷನರ್‌ಗೆ ದೂರು




ಬೆಂಗಳೂರು: ಧಾರಾವಾಹಿಯೊಂದು ಚಿತ್ರೀಕರಣಕ್ಕಾಗಿ ಅಗ್ರಿಮೆಂಟ್ ಮಾಡಿಕೊಂಡು ಹಣ ನೀಡದೇ ವಂಚಿಸಿದ್ದಾರೆ ಎಂದು ಆರೋಪಿಸಿ ನಟ ಕಿಚ್ಚ ಸುದೀಪ್ ಹಾಗೂ ಮ್ಯಾನೇಜರ್ ಚಂದ್ರಚೂಡ್ ವಿರುದ್ಧ ಕಾಫಿ ತೋಟದ ಮಾಲೀಕರಿಬ್ಬರು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ನೀಡಿದ್ದಾರೆ.

'ವಾರಸ್ದಾರ' ಧಾರಾವಾಹಿಗಾಗಿ ನಮ್ಮ ಮನೆ ಹಾಗೂ ಕಾಫಿತೋಟದಲ್ಲಿ ಚಿತ್ರೀಕರಣ ಮಾಡಲು 2 ವರ್ಷಗಳ ಅಗ್ರಿಮೆಂಟ್ ಮಾಡಿಕೊಂಡಿದ್ದರು. ಚಿತ್ರೀಕರಣ ಶುರುಮಾಡಿದ ಕೆಲವೇ ದಿನಗಳಲ್ಲಿ ಚಿತ್ರೀಕರಣ ಸ್ಥಗಿತಗೊಂಡಿತ್ತು. ಅಲ್ಲದೇ ಚಿತ್ರೀಕರಣಕ್ಕಾಗಿ ಕಾಫಿ ತೋಟ, ಮರಗಳನ್ನು ನಾಶ ಮಾಡಿದ್ದಾರೆ ಎಂದು ಕಾಫಿ ತೋಟದ ಮಾಲೀಕ ದೀಪಕ್ ಆರೋಪಿಸಿದ್ದಾರೆ.

ಅಗ್ರಿಮೆಂಟ್ ಪ್ರಕಾರ, 95 ಲಕ್ಷ ಪರಿಹಾರ ನೀಡುವಂತೆ ಕಿಚ್ಚ ಸುದೀಪ್ ಹಾಗೂ ಚಂದ್ರಚೂಡ್ ವಿರುದ್ಧ ಈ ಹಿಂದೆಯೇ ದೂರು ದಾಖಲಿಸಿದ್ದೆ ಅಂದು 60 ಲಕ್ಷ ಹಣ ನೀಡುವುದಾಗಿ ಸುದೀಪ್ ಅವರು ಭರವಸೆ ನೀಡಿದ್ದರಿಂದ ದೂರು ಹಿಂಪಡೆದಿದ್ದೆ. 10 ಲಕ್ಷ ರೂಪಾಯಿ ಚೆಕ್ ನೀಡಿದ್ದು ಇನ್ನುಳಿದ ಹಣ ನೀಡದೇ ವಂಚಿಸಿದ್ದಾರೆ ಎಂದು ದೀಪಕ್ ಆರೋಪಿಸಿದ್ದಾರೆ.

ಚಾಮುಂಡಿಬೆಟ್ಟದಲ್ಲಿ ಪ್ರಸಾದ ಕಾಮಗಾರಿ ಸ್ಥಗಿತಕ್ಕೆ 'ಪರಿಸರಕ್ಕಾಗಿ ನಾವು' ಸಂಘಟನೆ ಆಗ್ರಹ

ಮನವಿಯಲ್ಲಿ ಕಾಮಗಾರಿ ನಿಲ್ಲಿಸಲು ಐದು ಕಾರಣವನ್ನು ವಿವರಿಸಿದ ಪರಿಸರವಾದಿಗಳು



ಮೈಸೂರು, ಜ.20– ಚಾಮುಂಡಿ ಬೆಟ್ಟದಲ್ಲಿ 'ಪ್ರಸಾದ್' ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳನ್ನು ತಕ್ಷಣ ನಿಲ್ಲಿಸುವಂತೆ 'ಪರಿಸರಕ್ಕಾಗಿ ನಾವು' ಸಂಘಟನೆ ಆಗ್ರಹಿಸಿದೆ.

ಈ ಸಂಬಂಧ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕರಿಗೆ ಮನವಿ ಸಲ್ಲಿಸಿದ್ದು, ಮೈಸೂರು ಗ್ರಾಹಕರ ಪರಿಷತ್ತು, ಟೀಮ್ ಮೈಸೂರು, ಕರ್ನಾಟಕ ಯುವಜನ ನೆಟ್ವರ್ಕ್, ಪಿಯುಸಿಎಲ್, ಕ್ಲೀನ್ ಮೈಸೂರು ಫೌಂಡೇಶನ್, ಬೆಳವಲ ಫೌಂಡೇಶನ್, ಜೈ ಕರ್ನಾಟಕ ಪರಿಷತ್ತು ಮತ್ತು ಗುಬ್ಬಿವಾಣಿ ಟ್ರಸ್ಟ್ ಸೇರಿದಂತೆ ಹಲವು ಸಂಘ ಸಂಸ್ಥೆಗಳು ಬೆಂಬಲ ನೀಡಿವೆ.

ಐದು ಅಂಶಗಳು ಮನದಟ್ಟು: ಅಧಿಕಾರಿಗಳಿಗೆ ಸಲ್ಲಿಸಿರುವ ಮನವಿಯಲ್ಲಿ ಚಾಮುಂಡಿ ಬೆಟ್ಟದಲ್ಲಿ ನಿರ್ಮಾಣ ಕಾಮಗಾರಿಗಳನ್ನು ನಿಲ್ಲಿಸು ವಂತೆ ಆಗ್ರಹಿಸಲು ಪ್ರಮುಖ ಕಾರಣಗಳೇನು ಎಂಬುದನ್ನು ಐದು ಅಂಶಗಳಲ್ಲಿ ಮನದಟ್ಟು ಮಾಡಲಾಗಿದೆ.

- ಚಾಮುಂಡಿ ಬೆಟ್ಟ ಸಂರಕ್ಷಿತ ಅರಣ್ಯ ಪ್ರದೇಶ. ಇಲ್ಲಿ ಸುಮಾರು 40 ಕೋಟಿ ಹಣ ಖರ್ಚು ಮಾಡಿ ಹಲವಾರು ಕಟ್ಟಡಗಳು ಮತ್ತು ಇತರೆ ಕಾಂಕ್ರೀಟ್ ರಚನೆ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಇವು ಪರಿಸರಕ್ಕೆ ಉಂಟುಮಾಡುವ ಪರಿಣಾಮಗಳ (Environmental Impact Assessment) ಮೌಲ್ಯಮಾಪನ ಮಾಡಿಸಬೇಕು. ನಮಗೆ ತಿಳಿದಿರುವಂತೆ ಇಐಎ ಇದುವರೆಗೂ ಆಗಿಲ್ಲ. ಮೊದಲು ಈ ಕೆಲಸವಾಗಲಿ.
- ಕಳೆದ 25 ವರ್ಷಗಳಲ್ಲಿ ಬೆಟ್ಟದ ಮೇಲೆ ಅತೀ ಹೆಚ್ಚು ಮನೆಗಳು ಮತ್ತು ಕಟ್ಟಡಗಳನ್ನು ನಿರ್ಮಿಸಲಾಗಿದೆ. ತುಂಬಾ ದುರ್ಬಲವೂ ಮತ್ತು ಸೂಕ್ಷ್ಮವೂ ಆದ ಬೆಟ್ಟದ ಮೇಲೆ ಅದರ ಧಾರಣಾ ಸಾಮರ್ಥ್ಯ ಮೀರಿ ಕಟ್ಟಡಗಳನ್ನು ಕಟ್ಟುತ್ತಾ ಹೋದರೆ ಅಲ್ಲಲ್ಲಿ ಭೂಕುಸಿತ ಉಂಟಾಗಬಹುದು ಎಂಬ ಆತಂಕವನ್ನು ತಜ್ಞರು ಹಲವಾರು ಬಾರಿ ವ್ಯಕ್ತಪಡಿಸಿದ್ದಾರೆ. ಆದುದರಿಂದ ತಕ್ಷಣ ಬೆಟ್ಟದ ಧಾರಣಾ ಸಾಮರ್ಥ್ಯವನ್ನು ವೈಜ್ಞಾನಿಕವಾಗಿ ಮೌಲ್ಯಮಾಪನ ಮಾಡಬೇಕು.
- ಮೈಸೂರಿನ ಮಾಸ್ಟರ್ ಪ್ಲಾನ್ ಪ್ರಕಾರ ಚಾಮುಂಡಿ ಬೆಟ್ಟದ ಪ್ರದೇಶ ಪಾರಂಪರಿಕ ತಾಣವಾಗಿದೆ. ಈ ಪ್ರದೇಶದಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ಜಿಲ್ಲಾ ಪಾರಂಪರಿಕ ಸಮಿತಿಯ ಅನುಮೋದನೆ ಪಡೆಯಬೇಕು. ಪ್ರಸ್ತುತ ಈ ಕೆಲಸ ಆಗಿಲ್ಲ.
- ಈಗಾಗಲೇ ಬೆಟ್ಟದ ಮೇಲೆ ನಿರ್ಮಿಸಿರುವ ಅಂಗಡಿ ಮಳಿಗೆಗಳು ಮತ್ತು ಭಕ್ತರ ಅನುಕೂಲಕ್ಕೆಂದು ನಿರ್ಮಿಸಿರುವ ಕಟ್ಟಡಗಳನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸದೆ ಅವು ನಿರರ್ಥಕವಾಗಿವೆ. ಇದರಿಂದ ಸಾರ್ವಜನಿಕರ ತೆರಿಗೆ ಹಣ ಪೋಲಾಗಿದೆ.
- ಚಾಮುಂಡಿ ಬೆಟ್ಟದ ಮೇಲೆ ಯಾವುದೇ ಯೋಜನೆಗಳನ್ನು ಜಾರಿಗೆ ತರುವ ಮುನ್ನ ಮೈಸೂರಿನ ನಾಗರಿಕರು ಮತ್ತು ಪರಿಸರ ಕಾರ್ಯಕರ್ತರ ಜೊತೆ ಸಮಾಲೋಚನೆ ನಡೆಸದೆ ಏಕಪಕ್ಷೀಯವಾಗಿ ಮತ್ತು ಮನಸೋಇಚ್ಛೆ ಯೋಜನೆಗಳನ್ನು ಜಾರಿ ಮಾಡುವುದನ್ನು ನಿಲ್ಲಿಸಬೇಕು.

ಈ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ತಕ್ಷಣ ಕಾರ್ಯೋನ್ಮುಖರಾಗುವಂತೆ 'ಪರಿಸರಕ್ಕಾಗಿ ನಾವು' ಸಂಘಟನೆಯ ಅಧ್ಯಕ್ಷರಾದ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ, ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ, ಭಾಮಿ ಶೆಣೈ, ಮೇಜರ್ ಜನರಲ್ ಒಂಬತ್ಕೆರೆ, ರವಿ ಬಳೆ, ಲೀಲಾ ವೆಂಕಟೇಶ್, ಕಮಲ್ ಗೋಪಿನಾಥ್, ಕೆ.ಗೋಕುಲ ಗೋವರ್ಧನ್, ಕೆ.ಸರಸ್ವತಿ, ಎಸ್.ನಾರಾಯಣ್, ಲೀಲಾ ಶಿವಕುಮಾರ್, ಡಾ ರಾಮಕೃಷ್ಣಪ್ಪ, ಮಾಳವಿಕಾ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ 30ಕ್ಕೂ ಹೆಚ್ಚು ಪ್ರತಿನಿಧಿಗಳ ಸಹಿಯನ್ನೊಳಗೊಂಡ ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.

ಚಾಮುಂಡಿಬೆಟ್ಟದ ಪ್ರಸಾದ ಯೋಜನೆ ಕಾಮಗಾರಿ ಮುಂದುವರಿಕೆ

ಮೈಸೂರು, ಜ.20(ಬಿಎಲ್‌ಯು)– ಪೊಲೀಸರ ಭದ್ರತೆಯಲ್ಲಿ ಚಾಮುಂಡಿ ಬೆಟ್ಟದ ಪ್ರಸಾದ ಯೋಜನೆಯಡಿಯ ಕಾಮಗಾರಿ ಮುಂದುವರೆದಿದೆ.

ಕಾಮಗಾರಿ ಸ್ಥಗಿತಗೊಳಿಸುವಂತೆ ನಿನ್ನೆ ಚಾಮುಂಡಿಬೆಟ್ಟದ ಗ್ರಾಮಸ್ಥರು ಹಾಗೂ ಹಿಂದೂಪರ ಸಾಮಾಜಿಕ ಹೋರಾಟಗಾರರು ಪ್ರತಿಭಟನೆ ನಡೆಸಿದ್ದರು. ಆದರೆ ಪೊಲೀಸರ ಭದ್ರತೆಯಡಿ ಕಾಮಗಾರಿ ನಡೆಯುತ್ತಿದ್ದು, ಈ ಸ್ಥಳದ ಸುತ್ತ ಬ್ಯಾರಿಕೇಡ್ ಅಳವಡಿಸಲಾಗಿದೆ. ಹೆಚ್ಚಿನ ಪೊಲೀಸರನ್ನು ನಿಯೋಜಿಸಿದ್ದು, ಯಾರೂ ಕಾಮಗಾರಿಗೆ ಅಡ್ಡಿ ಪಡಿಸಲು ಮುಂದಾಗಲಿಲ್ಲ. ಅಲ್ಲದೆ ಪ್ರತಿಭಟನೆ ಕೂಡ ನಡೆಸಲಿಲ್ಲ.

ಕಾಮಗಾರಿ ಸ್ಥಳದಲ್ಲಿ ಜೆಸಿಬಿಯಿಂದ ಸುಮಾರು ಒಂದು ಅಡಿ ರಸ್ತೆ ಅಗೆದು ಸಮದಟ್ಟು ಮಾಡಲಾಗಿದೆ. ಇಲ್ಲಿ ಕ್ಯೂ ಮಂಟಪ ನಿರ್ಮಾಣ ಮಾಡಲಾಗುತ್ತಿದ್ದು, ಇನ್ನು ಎರಡು ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ಗುತ್ತಿಗೆದಾರ ಸುಜೇಂದ್ರ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅನಧಿಕೃತ ಬೃಹತ್ ಜಾಹೀರಾತು ಫಲಕ ಅಳವಡಿಕೆ ತಡೆದ ಮಾಜಿ ಸಂಸದ ಪ್ರತಾಪ್ ಸಿಂಹ

ಮೈಸೂರು, ಜ.20– ನಗರದ ಕಲಾಮಂದಿರದ ಬಳಿ ಅನಧಿಕೃತವಾಗಿ ಬೃಹತ್ ಜಾಹೀರಾತು ಫಲಕ ಅಳವಡಿಕೆಯನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಬೆಂಬಲಿಗರು ತಡೆದಿದ್ದಾರೆ.

ಹುಣಸೂರು ರಸ್ತೆ ಕಲಾಮಂದಿರ ಜಂಕ್ಷನ್ ಬಳಿ ಬೃಹತ್ ಖಾಸಗಿ ಜಾಹೀರಾತು ಫಲಕ ಅಳವಡಿಸುವುದನ್ನು ಗಮನಿಸಿದ ಪ್ರತಾಪ್ ಸಿಂಹ ತಕ್ಷಣ ಕಾಮಗಾರಿ ತಡೆದಿದ್ದಾರೆ. ನಗರ ವ್ಯಾಪ್ತಿಯ ಹೆದ್ದಾರಿಯಲ್ಲಿ ಅದೂ ಪ್ರಮುಖ ಜಂಕ್ಷನ್‌ನಲ್ಲಿ ಬೃಹತ್ ಜಾಹೀರಾತು ಫಲಕ ಅಳವಡಿಸುವುದು ಸೂಕ್ತವಲ್ಲ ಎಂದು ತಿಳಿಸಿ, ಕೂಡಲೇ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಅವರ ಗಮನಕ್ಕೆ ತಂದಿದ್ದಾರೆ. ನಂತರ ಜಿಲ್ಲಾಧಿಕಾರಿಗಳು ನಗರ ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿ, ಜಾಹೀರಾತು ಫಲಕಕ್ಕೆ ಅಳವಡಿಸಿದ್ದ ಕಬ್ಬಿಣದ ಕಂಬ ಹಾಗೂ ಪಟ್ಟಿಗಳನ್ನು ತೆರವುಗೊಳಿಸಿದ್ದಾರೆ. ಈ ವೇಳೆ ಬಿಜೆಪಿ ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಮುಖಂಡರಾದ ಮಹೇಶ್, ಸುರೇಶ್, ಅಶೋಕ್, ಕಾರ್ತಿಕ್ ಮತ್ತಿತರರಿದ್ದರು.



ಮೈಸೂರಿನ ಹುಣಸೂರು ರಸ್ತೆ ಕಲಾಮಂದಿರ ಜಂಕ್ಷನ್ ಬಳಿ ಬೃಹತ್ ಜಾಹೀರಾತು ಫಲಕ ಅಳವಡಿಕೆಯನ್ನು ಸಂಸದ ಪ್ರತಾಪ್ ಸಿಂಹ ಹಾಗೂ ಬೆಂಬಲಿಗರು ತಡೆದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಈ ಗಂಡು ಮಕ್ಕಳು ಕೆಪಾಸಿಟಿ ಇಲ್ಲಾಂದ್ರು ಯಾಕೆ ಕುಡಿತಾರೋ?

ಗಂಡ : ಹೆಣ್ಣು ಮಕ್ಕಳು ಚೆನ್ನಾಗಿ ಕಾಣ್ಸಲ್ಲ ಅಂದ್ರು, ಯಾಕೆ ಮೇಕಪ್ ಮಾಡ್ಕೊತಾರೋ...!?

ಮೈಸೂರು ಮಿತ್ರ

ಬುಧವಾರ, ಜನವರಿ 21, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಮಾಂಸ ತಿಂದು ಜೀರ್ಣಿಸುವವನು ಮಾಂಸಾಹಾರಿ,
ಸಸ್ಯ ತಿಂದು ಜೀರ್ಣಿಸುವವನು ಸಸ್ಯಹಾರಿ,
ಸಮಸ್ಯೆ ತಿಂದು ಜೀರ್ಣಿಸುವವನು ಸಂಸಾರಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸ್ವರ್ಗದಲ್ಲಿ ಸೇವೆಗೈಯುವುದಕ್ಕಿಂತ ನರಕದಲ್ಲಿ ಆಳುವುದೇ ಲೇಸು.

ನಿಮ್ಮ ಪತ್ರಗಳು

ಮಹದೇವಪುರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮನವಿ

ಮಾನ್ಯರೆ,

ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಮಹದೇವಪುರ, ಶ್ರೀರಾಂಪುರ, ಪರಸಯ್ಯನಹುಂಡಿ, ಗುರೂರು, ರಮಾಬಾಯಿ ನಗರ ಸೇರಿದಂತೆ 10 ಸಾವಿರಕ್ಕೂ ಅಧಿಕ ಜನಸಂಖ್ಯೆ ಹೊಂದಿರುವ ಪ್ರದೇಶಗಳ ಜನರು ಮೂಲಭೂತ ಆರೋಗ್ಯ ಸೌಲಭ್ಯಗಳಿಂದ ವಂಚಿತರಾಗಿರುವುದು ಅತ್ಯಂತ ವಿಷಾದಕರ ಸಂಗತಿ.

ವಿಶೇಷವಾಗಿ ಗರ್ಭಿಣಿ ಮಹಿಳೆಯರು ತಾಯಿ ಕಾರ್ಡ್ ಹಾಗೂ ಸರ್ಕಾರದ ಆರೋಗ್ಯ ಯೋಜನೆಗಳ ಸೌಲಭ್ಯ ಪಡೆಯಲು ಸುಮಾರು 12 ಕಿಲೋಮೀಟರ್ ದೂರದಲ್ಲಿರುವ ಮೂಗನಹುಂಡಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದಾರೆ.

ಈ ಪ್ರದೇಶಗಳಿಂದ ಮೂಗನಹುಂಡಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಲು ಯಾವುದೇ ನೇರ ಬಸ್ ಸೌಲಭ್ಯ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ. ಸ್ವಂತ ವಾಹನ ಹೊಂದಿರುವವರು ಮಾತ್ರ ಅಲ್ಲಿಗೆ ಹೋಗಲು ಸಾಧ್ಯವಾಗುತ್ತಿದ್ದು, ಬಡವರು, ದಲಿತರು ಹಾಗೂ ಕಾರ್ಮಿಕ ವರ್ಗದ ಜನರಿಗೆ ಇದು ದೊಡ್ಡ ತೊಂದರೆಯಾಗಿ ಪರಿಣಮಿಸಿದೆ. ಗರ್ಭಿಣಿ ಮಹಿಳೆಯರು ಹಾಗೂ ವೃದ್ಧರು ಅತ್ಯಂತ ತ್ರಾಸದಾಯಕವಾಗಿ ಪ್ರಯಾಣ ಮಾಡುವಂತಾಗಿರುವುದು ಅವರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವಂತಹ ಸ್ಥಿತಿ ನಿರ್ಮಾಣವಾಗಿದೆ.

ಇದಕ್ಕೆ ವಿರುದ್ಧವಾಗಿ, ಮೂಗನಹುಂಡಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೂಲಸೌಕರ್ಯ, ಸಿಬ್ಬಂದಿ ಅಥವಾ ಸೇವೆಗಳ ಕೊರತೆ ಇಲ್ಲ ಎಂಬುದನ್ನು ಗಮನಿಸಬೇಕಾಗಿದೆ.

ಸಮಸ್ಯೆ ಆರೋಗ್ಯ ಕೇಂದ್ರದ ಕಾರ್ಯವೈಖರಿಯಲ್ಲಿ ಅಲ್ಲ, ಬದಲಾಗಿ ಭೌಗೋಳಿಕ ಅಂತರ ಮತ್ತು ಸಾರಿಗೆ ವ್ಯವಸ್ಥೆಯ ಕೊರತೆ ಅಷ್ಟೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಜನರಿಗೆ ಸಮೀಪದಲ್ಲೇ ಆರೋಗ್ಯ ಸೇವೆ ಲಭ್ಯವಾಗುವಂತೆ ವ್ಯವಸ್ಥೆ ರೂಪಿಸುವುದು ಅವಶ್ಯಕವಾಗಿದೆ.

ಮಹದೇವಪುರ ಗ್ರಾಮದಲ್ಲಿ ಈಗಾಗಲೇ ಎರಡು ಸರ್ಕಾರಿ ಕಟ್ಟಡಗಳು ಖಾಲಿ ಇರುವುದರಿಂದ, ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತಕ್ಷಣವೇ ಪ್ರಾರಂಭಿಸಲು ಎಲ್ಲ ರೀತಿಯ ಅನುಕೂಲತೆಗಳಿವೆ.

ಇದರಿಂದ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸಾವಿರಾರು ಜನರಿಗೆ, ವಿಶೇಷವಾಗಿ ಗರ್ಭಿಣಿ ಮಹಿಳೆಯರು, ಬಡವರು ಹಾಗೂ ದಲಿತ ಸಮುದಾಯಕ್ಕೆ ನೇರ ಲಾಭವಾಗಲಿದೆ.

ಸಂಬಂಧಪಟ್ಟ ಆರೋಗ್ಯ ಇಲಾಖೆ ಹಾಗೂ ಜಿಲ್ಲಾಡಳಿತ ತಕ್ಷಣ ಸೂಕ್ತ ಕ್ರಮ ಕೈಗೊಂಡು ಮಹದೇವಪುರ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ತೆರೆಯುವ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕು.

–ಕಿರಣ್ ನಾಯ್ಡು, ಬಿಜೆಪಿ ಯುವ ಮೋರ್ಚಾ ಜಿಲ್ಲಾ ಕಾರ್ಯದರ್ಶಿ, ಮೈಸೂರು.

ಇಲ್ಲೊಂದು ಅಪಾಯದ ಪಾದಚಾರಿ ಮಾರ್ಗ

ಮಾನ್ಯರೇ.

ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತ(ಹಾರ್ಡಿಂಗ್ ವೃತ್ತ)ದಿಂದ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಹೋಗುವ ಪಾದಚಾರಿ ಮಾರ್ಗ (ಫುಟ್ಪಾತ್)ತುಂಬಾ ಅಪಾಯದಿಂದ ಕೂಡಿದೆ. ಫುಟ್‌ಪಾತ್ ಮೇಲೆ ಅಳವಡಿಸಿರುವ ಕೆಲವೊಂದು ಚಪ್ಪಡಿ ಕಲ್ಲುಗಳು ಮೇಲೆದ್ದು, ಕೆಲವೊಂದು ಮೋರಿಯ ಒಳಗೆ ಬಿದ್ದು ಹೋಗಿದ್ದು, ಜೊತೆಗೆ ಮೋರಿಗೆ ಹೊಂದಿಕೊಂಡಂತಿರುವ ಕಬ್ಬಿಣದ ಸರಳುಗಳೂ ಸಹ ಮೇಲೆದ್ದು ಬಲಿ ಪಡೆಯಲು ತಯಾರಾಗಿವೆ. ಇಲ್ಲಿ ಸಂಚರಿಸುವ ಪಾದಚಾರಿಗಳು ತುಸು ಯಾಮಾರಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಈ ಹಿಂದೆ ಎಷ್ಟೋ ಸಾರ್ವಜನಿಕರಿಗೆ ಇದರಿಂದ ಪೆಟ್ಟಾಗಿದ್ದು ಸಾವಿನಿಂದ ಕೂದಲೆಳೆ ಅಂತರದಲ್ಲಿ ಪಾರಾಗಿರುವ ಉದಾಹರಣೆ ಸಾಕಷ್ಟಿದೆ. ಪಾದಚಾರಿ ಮಾರ್ಗ ಸರಿ ಇಲ್ಲದ ಕಾರಣ ಪಕ್ಕದ ರಸ್ತೆಗೆ ಇಳಿದರೆ ಅದೂ ಕೂಡ ಸದಾ ವಾಹನಗಳು ಸಂಚರಿಸುವ ಮಾರ್ಗವಾಗಿದ್ದು, ಯಾವುದೇ ಕಾರಣಕ್ಕೂ ಸುರಕ್ಷಿತವಲ್ಲ. ಹಾಗಾಗಿ ಇನ್ನು ಮುಂದಾದರೂ ನಗರ ಪಾಲಿಕೆಯ ಆಯುಕ್ತರು ಅಥವಾ ಹಿರಿಯ ಅಧಿಕಾರಿಗಳು ಇದರ ಬಗ್ಗೆ ಕ್ರಮ ವಹಿಸಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ.

–ಪ್ರದೀಪ್, ಯರಗನಹಳ್ಳಿ, ಮೈಸೂರು.

ಘನತೆ ಇಲ್ಲದವನು ಡಿಜಿಪಿ ಹುದ್ದೆಗೆ ಅರ್ಹನೇ?



ಮಾನ್ಯರೆ,

ಯತ್ರ ನಾರ್ಯಸ್ತು ಪೂಜ್ಯಂತೆ ತತ್ರ ರಮಂತೇ ದೇವತಾಃ

ಎಲ್ಲಿ ನಾರಿಗೆ ಪೂಜಾ ಸ್ಥಾನವಿದೆಯೋ ಅಲ್ಲಿ ದೇವತೆಗಳು ವಾಸಿಸುತ್ತಾರೆ ಎಂಬುದು ಇದರ ಅರ್ಥ. ಆ ಶ್ರೀರಾಮಚಂದ್ರ ಏಕಪತ್ನಿ ವ್ರತಸ್ಥನಾಗಿದ್ದು ಮರ್ಯಾದಾ ಪುರುಷೋತ್ತಮ ಎಂಬ ಬಿರುದು ಪಡೆದಿದ್ದ. ಈ ಡಿಜಿಪಿ ರಾಮಚಂದ್ರ ಹಿಂದೆ ಹವಾಲ ಹಣ ಜಪ್ತಿ ಮಾಡಿದ ಪ್ರಕರಣದಲ್ಲಿ ನಡೆದ ಗೋಲ್ ಮಾಲ್‌ನಲ್ಲಿ ಈತನ ಹೆಸರು ಕೇಳಿ ಬಂದಿತ್ತು. ಆ ಕೇಸ್ ಕಥೆ ಏನಾಯಿತೋ ಆ ಭಗವಂತ ಶ್ರೀರಾಮಚಂದ್ರನೇ ಬಲ್ಲ.

ಈಗ ಪೊಲೀಸ್ ಇಲಾಖೆಯ ಅತ್ಯುನ್ನತ ಹುದ್ದೆಯಲ್ಲಿ ಇದ್ದುಕೊಂಡು ರಾಸಲೀಲೆ ಪ್ರಕರಣದಲ್ಲಿ ಸಿಲುಕಿರುವುದು ನಮ್ಮ ದೇಶ ಎತ್ತಸಾಗಿದೆ? ಮುಂದಿನ ಪೀಳಿಗೆಗೆ ನಮ್ಮ ಸಂದೇಶವೇನು? ಇಂತಹ ಹೇಯ ಕೃತ್ಯ ಮಾಡಿರುವವನು ಪೊಲೀಸ್ ವರಿಷ್ಠನಾಗಿರಲು ಲಾಯಕ್ಕೇ? ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಯಾವುದೇ ಘನತೆ ಇಲ್ಲದ 'ಘನ' ಸರ್ಕಾರ ಇಂತಹ ಮಹಾನ್ ವ್ಯಕ್ತಿಗೆ 10 ದಿನಗಳ ಕಡ್ಡಾಯ ರಜೆಯ ಮೇಲೆ ಕಳುಹಿಸಿದೆ. ಈ ರಜಾ ಸಮಯದಲ್ಲಿ ರೆಸಾರ್ಟ್ ಗಿಸಾರ್ಟ್‌ಗೆ ತೆರಳಿ ಇನ್ನಷ್ಟು 'ರಾಸಲೀಲೆ'ಗಳನ್ನು ಮಾಡಲಿ ಎಂಬ ಸರ್ಕಾರದ ದೊಡ್ಡ ಮನಸ್ಸನ್ನು ಮೆಚ್ಚಲೇಬೇಕು. ತಾನು ಒಂದು ರಾಜ್ಯದ ಅತ್ಯುನ್ನತ ಪೊಲೀಸ್ ಅಧಿಕಾರಿ ಎಂಬ ಪರಿಜ್ಞಾನವಿಲ್ಲದ ಹೀನ ವ್ಯಕ್ತಿಯ ಬಗ್ಗೆ ಘನತೆವೆತ್ತ ನ್ಯಾಯಾಲಯ ಸುಮೋಟೋ ಕೇಸ್ ದಾಖಲಿಸಿ ಶಿಕ್ಷೆ ನೀಡಲಿ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ವಚನ ನಿಧಿ ಜಗದ ಸಿರಿ

ಹನ್ನೆರಡನೆಯ ಶತಮಾನ ಕನ್ನಡ ಸಾಹಿತ್ಯದ ಪರ್ವಕಾಲ. ಬಸವಾದಿ ಶರಣರು ಸಮಾಜಮುಖಿಯಾದ ವೈಚಾರಿಕ, ಸಾಮಾಜಿಕ, ಧಾರ್ಮಿಕ ಕ್ರಾಂತಿಯನ್ನು ಮಾಡಿ ವಚನ ಸಾಹಿತ್ಯವನ್ನು ಸೃಷ್ಟಿಸಿದ ಕಾಲ. ಆ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ಅದರ ಸಾರವನ್ನು ಗ್ರಹಿಸಿರುವ ದಾರ್ಶನಿಕ ಕವಿ ಶ್ರೀ ಕೆ.ಸಿ. ಶಿವಪ್ಪನವರು 'ಮುದ್ದುರಾಮನ ಬೆಡಗು' ಎಂಬ ಚೌಪದಿ ಗ್ರಂಥದಲ್ಲಿ 'ವಚನ ನಿಧಿ ಜಗದ ಸಿರಿ' ಎಂಬ ಅಧ್ಯಾಯದಲ್ಲಿ ವಚನ ಸಾಹಿತ್ಯದ ಬಗೆಗೆ ಏನು ಹೇಳಿದ್ದಾರೆಂದು ನೋಡೋಣ.

ಬಿಡಿಯಾಗಿ ನೋಡಿದರೆ ವಚನ ಮುಕ್ತಕ ಮುತ್ತು
ಸರಗೊಳಿಸಿದರೆ ಇದುವೆ ಮಾಣಿಕ್ಯಹಾರ
ಮುಕ್ತಧೋರಣೆಯಿಂದ ಇದು ಆತ್ಮ ಸಾಹಿತ್ಯ
ವಚನನಿಧಿ ಜಗದ ಸಿರಿ ಮುದ್ದುರಾಮ

ಒಂದೊಂದು ವಚನವೂ ಸ್ವತಂತ್ರವಾಗಿ ಅರ್ಥವನ್ನು ಕೊಡುತ್ತದೆ. ಹಾಗೆ ಬಿಡಿಯಾಗಿ ನೋಡಿದಾಗ ಅದು ಮುಕ್ತಕ. ಮುಕ್ತಕ ಎಂಬ ಶಬ್ದಕ್ಕೆ ಸಂದರ್ಭಮುಕ್ತವಾಗಿ ಸ್ವತಂತ್ರ ಪದ್ಯದಂತೆ ಅರ್ಥವನ್ನು ಕೊಡುವ ಪದ್ಯ ಎಂಬ ಅರ್ಥವಿರುವುದರಿಂದ ವಚನಗಳು ಮುಕ್ತಕಗಳು. ಮುಕ್ತಕ ಎಂಬ ಪದವು ಮುಕ್ತಾ ಎಂಬ ಪದದಿಂದ ಬಂದಿದೆ. ಅದಕ್ಕೆ ಮುತ್ತು (Pearl) ಎಂಬ ಅರ್ಥವೂ ಇದೆ. ಆದ್ದರಿಂದ ಮುತ್ತಿನಂತಹ ಮಾತುಗಳಾದ ವಚನಗಳು ಮುತ್ತುಗಳು. ಅವುಗಳನ್ನು ಸರದಂತೆ ಪೋಣಿಸಿದರೆ ಮಾಣಿಕ್ಯದ ಹಾರದಂತೆ ಶೋಭಿಸುತ್ತವೆ. ಮುಕ್ತರು ಎಂದರೆ ಪ್ರಾಪಂಚಿಕ ಬಂಧನವನ್ನು ಕಳೆದುಕೊಂಡು ಮುಕ್ತಿಯನ್ನು ಪಡೆದವರು. ಅವರ ದೃಷ್ಟಿಕೋಣದಿಂದ ನೋಡಿದಾಗ ವಚನಗಳು ಆತ್ಮ ಸ್ವರೂಪವನ್ನು ತಿಳಿಸುವ ಅಧ್ಯಾತ್ಮ ಸಾಹಿತ್ಯ. ಹೀಗೆ ವಚನಗಳ ನಾನಾರ್ಥವನ್ನು ಕವಿ ಶಿವಪ್ಪನವರು ತಿಳಿಸಿದ್ದಾರೆ.

ವಚನದ ಬಗೆಗೆ ಅವರು ಹೇಳುವ ಮಾತು–
ಓದುಗರ ಮೆಚ್ಚುಗೆಗೆ ಪ್ರಿಯವಾಗಲಿಕೆ ವಚನ
ಇರಬೇಕು ಎಂಥದೋ ಸತ್ತ್ವಸಿರಿ ಅಲ್ಲಿ.
ಅಂತರಂಗದ ಸೊಲ್ಲು ಅನುಕಂಪೆ ಮಾರ್ದನಿಯೊ
ದಯೆತಾಣವೋ ವಚನ ಮುದ್ದುರಾಮ

ಎಂಟು ನೂರು ವರ್ಷಗಳ ಹಿಂದೆ ರಚಿಸಲ್ಪಟ್ಟ ವಚನಗಳು ಇಂದೂ ಎಂದರೆ ಇಪ್ಪತ್ತೊಂದನೆಯ ಶತಮಾನದಲ್ಲೂ ಜನಪ್ರಿಯತೆಯನ್ನು ಉಳಿಸಿಕೊಂಡಿವೆ ಎಂಬುದರಲ್ಲಿ ಸಂಶಯವಿಲ್ಲ. ಈಗಲೂ ವಚನಗಳ ಅಧ್ಯಯನ, ವ್ಯಾಖ್ಯಾನ, ಅನುವಾದಗಳು ನಡೆಯುತ್ತಿವೆ. ಹೀಗಾಗ ಬೇಕಾದರೆ ಅವುಗಳಲ್ಲಿ ಏನೋ ಸತ್ತ್ವ, ಏನೋ ತತ್ತ್ವ ಇರಬೇಕು. ಇಲ್ಲದಿದ್ದರೆ ಅವು ಎಂದೋ ಮರೆಯಾಗಿ ಬಿಡುತ್ತಿದ್ದುವು. ಆ ಸತ್ತ್ವ ಯಾವುದೆಂದರೆ, ವಚನ ತುಟಿಯ ಮೇಲಿನ ಮಾತಲ್ಲ, ಅದು ಅಂತರಂಗದ ಸೊಲ್ಲು, ಹೃದಯಾಂತರಾಳದ ನುಡಿ. ಅಷ್ಟೇ ಅಲ್ಲ, ವಚನಗಳು ಅನುಕಂಪೆಯ ಮಾರ್ದನಿ, ಜಗತ್ತಿನ ಶೋಷಿತರನ್ನು ದುಃಖಿತರನ್ನೂ ಬಡವರನ್ನೂ ಕಂಡು ಉಕ್ಕಿದ, ಹೊಮ್ಮಿದ ಪ್ರತಿಧ್ವನಿ. ದಯೆಯ ಸ್ಥಾನವಚನ. ದಯೆಯಿಲ್ಲದ ಧರ್ಮವಿಲ್ಲ ಎಂಬುದು ವಚನಗಳ ಸಾರ.

ಮತ್ತೆ ಶಿವಪ್ಪನವರು ಹೇಳುತ್ತಾರೆ –
ಜೀವಜಾಲದ ಸೊಬಗು ವಚನ ಸೂಳ್ನುಡಿ ಮೆರಗು
ಅರಿವೆ ಅನುಭಾವ ಈ ಬೆಡಗು ಮಾತಿನಲಿ.
ವಚನಸಿರಿ ನಿರ್ವಚನ ಅನುಭವದ ಮಂಟಪದಿ
ಮಾತು ಜ್ಯೋತಿರ್ಲಿಂಗ ಮುದ್ದುರಾಮ.

ಸೂಳ್ನುಡಿ ಎಂದರೆ ಸುಭಾಷಿತ. ವಚನಗಳೆಂಬ ಸೂಳ್ನುಡಿಗಳ ಮೆರಗು. ಜೀವ ಜಾಲದ ಸೊಬಗು. ಈ ವಚನವೆಂಬ ಬೆಡಗು ಮಾತಿನಲ್ಲಿ, ಅರಿವು ಎಂದರೆ ಜ್ಞಾನವು ಅನುಭಾವವಾಗಿದೆ. ವಚನಗಳ ಸಿರಿಯು, ಎಂದರೆ ಲಕ್ಷ್ಮಿಯು, ನಿರ್ವಚನ ಅಥವಾ ನಿರುಕ್ತ ನಡೆದಿದ್ದು ಅನುಭವ ಮಂಟಪದಲ್ಲಿ. ಅಲ್ಲಿ ಆದ ತೀರ್ಮಾನವೇನೆಂದರೆ 'ಮಾತು ಜ್ಯೋತಿರ್ಲಿಂಗ' ಎಂಬುದಾಗಿದೆ. ಅಲ್ಲಮ ಪ್ರಭು ಹೇಳುತ್ತಾರೆ–

"ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ತ್ವ
ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ.
ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ ಮರುಳೆ"

ಆ ವಚನದ ಸಾರ ಈ ಚೌಪದಿಯಲ್ಲಡಗಿದೆ. ಮುದ್ದುರಾಮನ ಇನ್ನೊಂದು ಮುದ್ದಾದ ಚೌಪದಿ ಇಂತಿದೆ–

ವಚನವಾರಿಧಿಯಲ್ಲಿ ಮೆಲ್ಲ ಮುಳುಗಿದರೊಮ್ಮೆ
ಸೂಕ್ತ ಮಾಣಿಕ್ಯ ಹೊತ್ತು ಬರುವೆ ನೀ ಮೇಲೆ
ವಾಕು ರಸಪಾಕಿಂದ, ಶಬ್ದ ಸಂಭ್ರಮ ಸುತ್ತ
ಮಾತು ಮುತ್ತಿನಹಾರ ಮುದ್ದುರಾಮ.

ವಚನ ವಾಙ್ಮಯ ನಿಜವಾಗಿ ಒಂದು ವಾರಿಧಿ, ಎಂದರೆ ಕಡಲು. ಅದರಲ್ಲಿ ಮಾನವನು ತನ್ಮಯನಾಗಿ ಮುಳುಗಬೇಕು. ಹಾಗೆ ಎಷ್ಟೋ ಬಾರಿ ಮುಳುಗಿ ಏಳುತ್ತಿದ್ದರೆ, ಒಮ್ಮೆ ಸೂಕ್ತವಾದ ಮಾಣಿಕ್ಯ, ಅಥವಾ ಸೂಕ್ತರೂಪವಾದ ಮಾಣಿಕ್ಯ ಲಭ್ಯವಾಗುತ್ತದೆ. ಅದನ್ನು ಹೊತ್ತು ನೀನು ಮೇಲಕ್ಕೆ ಬರಬಹುದು. ವಾಕು ಎಂದರೆ ಮಾತು ರಸಪಾಕ, ಅದರ ಸುತ್ತಲೂ ಶಬ್ದ ಸಂಭ್ರಮ. ಅದರಿಂದ ಮಾತು ಮುತ್ತಿನ ಹಾರವಾಗಬಲ್ಲುದು.

ಬಸವಣ್ಣನವರ ವಿಶ್ವಪ್ರಸಿದ್ಧ ವಚನವಿಂತಿದೆ–
ನುಡಿದಡೆ ಮುತ್ತಿನ ಹಾರದಂತಿರಬೇಕು.
ನುಡಿದಡೆ ಮಾಣಿಕ್ಯದ ದೀಪ್ತಿಯಂತಿರಬೇಕು.
ನುಡಿದಡೆ ಸ್ಫಟಿಕದ ಶಲಾಕೆಯಂತಿರಬೇಕು.
ನುಡಿದಡೆ ಲಿಂಗಮೆಚ್ಚಿ ಅಹುದಹುದೆನಬೇಕು.
ನುಡಿಯೊಳಗಾಗಿ ನಡೆಯದಿದ್ದಡೆ
ಕೂಡಲ ಸಂಗಮದೇವನೆಂತೊಲಿವನಯ್ಯಾ॥

ಇದರ ಅರ್ಥವನ್ನೇ ಮುದ್ದುರಾಮ 'ಮಾತು ಮುತ್ತಿನಹಾರ' ಎಂದು ತಿಳಿಸಿದ್ದಾನೆ. ಮುತ್ತಿನ ಹಾರದಷ್ಟು ಬೆಲೆಯುಳ್ಳದ್ದು ಮಾತೆಂಬುದನ್ನರಿಯಬೇಕು.

ವಚನಗಳ ಬಗೆಗೆ ಮುದ್ದುರಾಮನ ಇನ್ನೊಂದು ಚೌಪದಿ–

ನಡೆಯೆ ಸುಂದರವಿರದೆ ನುಡಿ ವಚನವಾದೀತೆ?
ಸೂಳ್ನುಡಿಯ ಆಯಾಮವೇ ಆತ್ಮಸಾಕ್ಷಿ.
ಖ್ಯಾತಿಲಾಭಕೆ ಜೋತ ಮಾತು ಮಲಿನತೆ ರೂಪ
ವಚನ ಜೀವನ ವಿದ್ಯೆ ಮುದ್ದುರಾಮ॥

ನಡೆ–ನುಡಿಗಳಲ್ಲಿ ಸಾಮರಸ್ಯವಿರಬೇಕು. ನುಡಿಯಲ್ಲಿ ಬಂಗಾರ, ನಡೆಯಲ್ಲಿ ಹಿತ್ತಾಳೆ ಆದರೆ ಅಂತಹವನ ಮಾತು ಕೇವಲ ಮಾತು, ವಚನವಲ್ಲ. ನಡೆ ಸುಂದರವಾಗಿಲ್ಲದಿದ್ದರೆ ನುಡಿಯ ಬೆಡಗು ಕೃತ್ರಿಮ ಚಿನ್ನದ ಒಡವೆಯಂತೆ ಮೂಲ್ಯರಹಿತ. ಸೂಳ್ನುಡಿ, ಸೂಕ್ತಿ, ಸುಭಾಷಿತ ಇವುಗಳಿಗೆ ಬೆಲೆ ಬರುವುದು ಆತ್ಮಸಾಕ್ಷಿಗೆ ವಿರುದ್ಧವಲ್ಲದಾಗ ಮಾತ್ರ.

ಯಮೋ ವೈವಸ್ವತೋ ರಾಜಾ ಯಸ್ತವೈಷ ಹೃದಿಸ್ಥಿತಃ।
ತೇನ ಚೇದವಿವಾದಸ್ತೇ ಮಾ ಗಂಗಾಂ ಮಾಕುರೂನ್ ಗಮಃ॥

ಎಂಬ ಶ್ಲೋಕವಿದೆ. ಯಮ, ವೈವಸ್ವತ ಎಂಬ ರಾಜನು ನಿನ್ನ ಹೃದಯದಲ್ಲೇ ನೆಲೆಸಿದ್ದಾನೆ. ಆ ಆತ್ಮಸಾಕ್ಷಿಯೊಡನೆ ವಿವಾದ, ವಿರೋಧ ಇಲ್ಲದ ಹಾಗೆ ನಿನ್ನ ನಡೆ ಇದ್ದರೆ, ನೀನು ಗಂಗಾಸ್ಥಾನವನ್ನೂ ಮಾಡಬೇಕಾಗಿಲ್ಲ. ಕುರುಕ್ಷೇತ್ರ ಯಾತ್ರೆಯನ್ನೂ ಮಾಡಬೇಕಾಗಿಲ್ಲ ಎಂದು ಶ್ಲೋಕದ ತಾತ್ಪರ್ಯ. ಆತ್ಮಸಾಕ್ಷಿಗೆ ವಿರೋಧವಿಲ್ಲದವನ ನಡೆ ಅವನ ಮಾತಿಗೆ ಬೆಲೆಯನ್ನು ತಂದುಕೊಡುತ್ತದೆ. ಖ್ಯಾತಿ ಲಾಭಕ ಜೋತ ಮಾತು ಮಲಿನತೆಯ ರೂಪ. ಪ್ರಸಿದ್ಧಿ ಬರಲಿ, ಪತ್ರಿಕೆಗಳ ಮುಖಪುಟದಲ್ಲಿ ನನ್ನ ಚಿತ್ರ ಬರಲಿ ಎಂಬ ಆಶೆಯಿಂದ ಅಥವಾ ಆ ವ್ಯಕ್ತಿಯನ್ನು ಹೊಗಳಿದರೆ ಇಷ್ಟು ಧನಲಾಭ ಎಂಬ ಆಶೆಯಿಂದ ಆಡಿದ ಮಾತು ಮಲಿನತೆಯ ರೂಪ. ಹಾಗೆ ಮಾತನಾಡಲು ಹೋಗಬಾರದು. ವಚನ ಶುದ್ಧ ಜೀವನದ ವಿದ್ಯೆ. ಅದನ್ನೇ ಅಪೇಕ್ಷಿಸಬೇಕು. ಅನೇಕರು ಪುಸ್ತಕಗಳಿಗೆ ಪೂಜೆ ಮಾಡುವುದು, ಆರತಿ ಬೆಳಗುವುದು ಸರಸ್ವತಿಯ ಪೂಜೆ ಎಂದು ಕೊಂಡಿದ್ದಾರೆ. ಓಲೆಗರಿಗಳಿಗೆ ಹೂವುಗಳಿಂದ ಅರ್ಚನೆ ಮಾಡಿದರೆ ಫಲವೇನು? ಮುದ್ದುರಾಮ ಹೇಳುತ್ತಾನೆ–

ಓಲೆ ಕಟ್ಟನು ತಂದು ಪೂಜೆ ಮಣೆ ಮೇಲಿಟ್ಟು
ಧೂಪದಾರತಿಯೆತ್ತಿ ಕೈಮುಗಿದರೇನು?
ತಿರುಳಕೆನೆ ವಚನವನು ಓದಿ ಅರಿ ಅನುಭಾವ
ಚಿತ್ತಚಿತ್ರವೊ ವಚನ ಮುದ್ದುರಾಮ॥

ಇಂದು ಬರೆಯಲು ಕಾಗದವನ್ನು ಉಪಯೋಗಿಸುವಂತೆ ಹಿಂದೆ ತಾಳೆಗರಿಗಳನ್ನು ಬಳಸುತ್ತಿದ್ದರು. ತಾಳೆ ಮರದ ಎಲೆಗಳೇ ತಾಳಪತ್ರಗಳು ಅಥವಾ ತಾಳೆಗರಿಗಳು. ಅವುಗಳನ್ನು ಕನ್ನಡದಲ್ಲಿ ಓಲೆ ಎಂದು ಹೇಳುತ್ತಾರೆ. ಆ ಓಲೆಗಳ ಕಟ್ಟುಗಳು ಎಷ್ಟೋ ಮಠಗಳಲ್ಲಿ, ದೇವಾಲಯಗಳಲ್ಲಿ, ಮನೆಗಳಲ್ಲಿ ಇರುತ್ತಿದ್ದುವು. ಕಾಗದದಲ್ಲಿ ಮುದ್ರಿತವಾದ ಪುಸ್ತಕಗಳು ಬಂದ ಮೇಲೆ ಓಲೆಗಳನ್ನು ಓದುವ ಕಲೆ ಮರೆಯಾಯಿತು. ಅವುಗಳಲ್ಲಿ ಕನ್ನಡದ ಗ್ರಂಥಗಳಿರಬಹುದು. ಸಂಸ್ಕೃತ ಶ್ಲೋಕಗಳಿರಬಹುದು, ಮನೆಯವರಿಗೆ ತಿಳಿಯದು. ಆದರೆ ವರ್ಷಕ್ಕೆ ಒಮ್ಮೆ ಬರುವ ಸರಸ್ವತೀ ಹಬ್ಬದಂದು ಓಲೆಯ ಗರಿಯ ಕಟ್ಟನ್ನು ತೆಗೆದು ಧೂಳನ್ನು ವರೆಸಿ ಪೂಜೆ ಮಣೆಯ ಮೇಲಿಟ್ಟು ಹೂವುಗಳಿಂದ ಅರ್ಚಿಸಿ ಧೂಪದ ಆರತಿಯನ್ನೆತ್ತಿ ಕೈ ಮುಗಿಯುತ್ತಾರೆ. ಇದರಿಂದ ಯಾವ ಪ್ರಯೋಜನವಿದೆ? ಹಣ್ಣಿನ ತಿರುಳಿನಂತೆ, ಹಾಲಿನ ಕೆನೆಯಂತೆ ಸಾರಿಷ್ಠವಾದ ವಚನಗಳನ್ನು ಶ್ರದ್ಧೆಯಿಂದ ಓದಿ ಅದರ ಅರ್ಥವನ್ನು ತಾತ್ಪರ್ಯವನ್ನು ತಿಳಿದು ಕೊಳ್ಳುವುದೇ ಮುಖ್ಯ. ವಚನವನ್ನು ಓದಿ ಅದರ ಅನುಭಾವವನ್ನು ಅರಿತುಕೋ, ಆ ಅರಿವು ಮುಖ್ಯ ಪ್ರಯೋಜನ ವಚನ ಯಾವುದು? ಚಿತ್ತ ಚಿತ್ರವಚನ. ಹಾಗೆಂದರೆ ಮನವೆಂಬ ಹಾಳೆಯಲ್ಲಿ ಬರೆದ ಚಿತ್ರದಂತಿರುವುದು ವಚನ.

ವಚನ ಎಂಬ ಶಬ್ದಕ್ಕೆ ಕೊಟ್ಟ ಮಾತು (promise) ಎಂಬ ಅರ್ಥವೂ ಇದೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಮುದ್ದುರಾಮ ಹೀಗೆಂದಿದ್ದಾನೆ–

ವಚನವೆಂದರೆ ಏನು? ನೀ ಕೊಟ್ಟ ಮಾತು ಅದು
ದೇವಪದತಳದಲ್ಲಿ ನೇರ ಸತ್ಯ ನುಡಿ.
ಹುಸಿಯಾದ ನುಡಿಯಲ್ಲಿ ಇಲ್ಲ ವಚನದ ನೆನಹು;
ವಚನ ಜೀವನಸಾರ ಮುದ್ದುರಾಮ.

ಭಗವಂತನ ಪಾದತಳದಲ್ಲಿ ನಾವಾಗಿ ಇದು ಸತ್ಯವೆಂದು ಆಡಿದ, ಪ್ರತಿಜ್ಞೆ ಮಾಡಿಕೊಟ್ಟ ಮಾತು ವಚನ. ಅದಕ್ಕೆ ತಪ್ಪಿ ನಾವು ನಡೆದರೆ ನಾವು ವಚನಭ್ರಷ್ಟರು. ನಾವೇ ನಂಬದೆ ಆಡಿದ ಹುಸಿ ನುಡಿ ಎಂದೂ ವಚನ ಎನಿಸಲಾರದು. ಇಂತಹ ಸಂದರ್ಭದಲ್ಲಿ ರಾಮನನ್ನು ಹರಿಶ್ಚಂದ್ರನನ್ನೂ ನೆನೆಸಿಕೊಳ್ಳಬೇಕು. ಕೊಟ್ಟ ಮಾತಿಗೆ ತಪ್ಪಲಾರೆನು ಎಂದ ಪುಣ್ಯಕೋಟಿ ಹಸುವನ್ನೂ ಸ್ಮರಿಸಬೇಕು. ಅಂತಹ ಮಾತು ಜೀವನಸಾರ, ಎಂದರೆ ಬದುಕಿನ ಕೆನೆ. ವಚನಗಳನ್ನು ಓದುವಾಗ, ವಚನಗಳನ್ನು ಆಡುವಾಗ ಅವುಗಳ ಮಹತ್ತ್ವ ಮನಸ್ಸಿನಲ್ಲಿ ಇರಬೇಕು.

ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಪುರುಷರಿಗೆ ವಸ್ತ್ರ ಸಂಹಿತೆ ಜಾರಿ



ಉಡುಪಿ: 800 ವರ್ಷ ಹಳೆಯದಾದ ಶ್ರೀ ಕೃಷ್ಣ ಮಠಕ್ಕೆ ಪುರುಷರು ಶರ್ಟ್ ಧರಿಸದೆ ಪ್ರವೇಶಿಸುವುದು ಕಡ್ಡಾಯ ಎಂದು ಶ್ರೀ ಶಿರೂರು ಮಠದ ಶ್ರೀ ವೇದವರ್ಧನ ತೀರ್ಥ ಸ್ವಾಮೀಜಿ ಹೇಳಿದ್ದಾರೆ.

ಇದಲ್ಲದೆ, ದೇವಾಲಯಕ್ಕೆ ಭೇಟಿ ನೀಡುವಾಗ ಕಟ್ಟುನಿಟ್ಟಾಗಿ ಪಾಲಿಸಬೇಕಾದ ವಸ್ತ್ರ ಸಂಹಿತೆಯ ಬಗ್ಗೆ ಭಕ್ತರಿಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಶಿರೂರು ಪರ್ಯಾಯ ಮಹೋತ್ಸವದ ದಿನದಂದೇ ಅಂದರೆ ಜ.18ರಿಂದಲೇ ಈ ಹೊಸ ಡ್ರೆಸ್ ಕೋಡ್ ಜಾರಿಗೆ ಬಂದಿದೆ. ಅದರಂತೆ ಪುರುಷರು ಅಥವಾ ಸ್ತ್ರೀಯರು ಬರ್ಮುಡಾ ಅಥವಾ ಸ್ಕರ್ಟ್ ಧರಿಸಿಕೊಂಡು ಬರುವಂತಿಲ್ಲ. ಪುರುಷರು ಅಂಗಿ ಮತ್ತು ಬನಿಯನ್ ತೆಗೆದು ದೇವಸ್ಥಾನದೊಳಗೆ ಹೋಗಬೇಕು. ಇದು ಭಕ್ತರ ಅನುಕೂಲಕ್ಕಾಗಿ ಮತ್ತು ದೇವಸ್ಥಾನದ ಪಾವಿತ್ರ್ಯತೆಯನ್ನು ಕಾಪಾಡಲು ಮಾಡಲಾಗಿದೆ ಎಂದು ಶಿರೂರು ಮಠದ ದಿವಾನರಾದ ಡಾ.ಉದಯ ಕುಮಾರ್ ಸರಳತ್ತಾಯ ಹೇಳಿದ್ದಾರೆ.

ಪುರುಷರು ಶರ್ಟ್ ತೆಗೆದ ನಂತರ ಶಾಲು ಧರಿಸಬಹುದು. ದೇವಾಲಯದ ಒಳಗೆ ಬೆಳಿಗ್ಗೆಯಿಂದ ರಾತ್ರಿವರೆಗೆ ಹಲವಾರು ಪೂಜೆಗಳು ಮತ್ತು ಆಚರಣೆಗಳು ನಡೆಯುವುದರಿಂದ, ಮಧ್ಯಾಹ್ನದ ಪೂಜೆಗೆ ಮಾತ್ರ ಇದ್ದ ವಸ್ತ್ರ ಸಂಹಿತೆಯನ್ನು ವಿಸ್ತರಿಸಲಾಗಿದೆ. ದೇವಾಲಯದ ಪೂರ್ವ ಭಾಗದಲ್ಲಿರುವ ಮುಖ್ಯ 'ಮಹಾ ದ್ವಾರ'ದ ಮೂಲಕ ದೇವಾಲಯ ಪ್ರವೇಶಿಸುವ ಮೊದಲು ಭಕ್ತರು ವಸ್ತ್ರ ಸಂಹಿತೆಯನ್ನು ಅನುಸರಿಸುವುದು ಕಡ್ಡಾಯ. ಶ್ರೀ ಕೃಷ್ಣ ಮಠದಲ್ಲಿ ಶ್ರೀ ಕೃಷ್ಣನಿಗೆ ಪರ್ಯಾಯ ಶಿರೂರು ಮಠದ ಶ್ರೀ ವೇದವರ್ಧನ ತೀರ್ಥ ಶ್ರೀಪಾದರು ಪ್ರಥಮ ಮಹಾಪೂಜೆ ನೆರವೇರಿಸಿದರು. ಈ ನಿಮಿತ್ತ ಶ್ರೀ ಕೃಷ್ಣನಿಗೆ ವಜ್ರಾಲಂಕಾರ ಮಾಡಿದರು.

ರೇಣುಕಾಸ್ವಾಮಿ ಕೊಲೆ ಪ್ರಕರಣ: ಪವಿತ್ರಾಗೌಡಗೆ ಮನೆ ಊಟ ರದ್ದು

ಬೆಂಗಳೂರು: ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ವಿಚಾರಣಾಧೀನ ಕೈದಿಯಾಗಿರುವ ಪವಿತ್ರಾಗೌಡಗೆ ಹೈಕೋರ್ಟ್ ಶಾಕ್ ನೀಡಿದ್ದು, ಅವರಿಗೆ ನೀಡಿದ್ದ ಮನೆ ಊಟ ಸವಲತ್ತನ್ನು ದಿಢೀರ್ ರದ್ದು ಮಾಡಿದೆ.

ಕೊಲೆ ಪ್ರಕರಣದಲ್ಲಿ ಜೈಲುಪಾಲಾಗಿರುವ ಪವಿತ್ರಾಗೌಡ ಪರವಾಗಿ ವಕೀಲರು ಇತ್ತೀಚೆಗೆ ಮನೆಯೂಟ ಬೇಕೆಂದು ಅರ್ಜಿ ಸಲ್ಲಿಸಿದ್ದರು. ಇದರ ಜತೆ ನಾಗ ರಾಜು ಮತ್ತು ಲಕ್ಷ್ಮಣ್ ಕೂಡ ಅರ್ಜಿ ಸಲ್ಲಿಸಿದ್ದರು. ಕೋರ್ಟ್ ಪವಿತ್ರಾಗೌಡ ಹಾಗೂ ಇತರೆ ಇಬ್ಬರಿಗೆ ದಿನಕ್ಕೊಮ್ಮೆ ಮನೆಯೂಟ ನೀಡಬೇಕೆಂದು ಆದೇಶಿಸಿತ್ತು. ಆ ಬಳಿಕ ಆದೇಶವನ್ನು ಮಾರ್ಪಡಿಸಿ ವಾರಕ್ಕೊಮ್ಮೆ ಮನೆಯೂಟ ನೀಡಬೇಕೆಂದು 57ನೇ ಸಿಸಿಎಚ್ ಕೋರ್ಟ್ ಹೇಳಿತ್ತು.

ಇದೇ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಜೈಲಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದು, ಯಾವುದೇ ಆರೋಪಿಗೆ ವಿಶೇಷ ಸವಲತ್ತು ನೀಡಬಾರದು ಎಂದು ಸೂಚಿಸಿದೆ.



ವಿಶೇಷ ಸವಲತ್ತು ನೀಡಿದಲ್ಲಿ ಕ್ರಮ ಜರುಗಿಸುವ ಎಚ್ಚರಿಕೆ ನೀಡಿದೆ. 57ನೇ ಸಿಸಿಎಚ್ ನ್ಯಾಯಾಲಯ ಆದೇಶವನ್ನು ಪ್ರಶ್ನಿಸಿ ಜೈಲಧಿಕಾರಿಗಳು ಹೈಕೋರ್ಟ್ ಮೊರೆ ಹೋಗಿದ್ದರು. ಯಾವುದೇ ಆರೋಪಿಗೆ ವಿಶೇಷ ಸವಲತ್ತು ನೀಡಬಾರದು. ಒಂದು ವೇಳೆ ಪವಿತ್ರಾಗೌಡ ಮತ್ತು ಇತರರಿಗೆ ಮನೆಯೂಟ ನೀಡಿದರೆ ಇತರೆ ಆರೋಪಿಗಳು ಬೇಡಿಕೆ ಇಡುತ್ತಾರೆ. ಆಗ ಜೈಲಿನ ಶಿಸ್ತು ಸಡಿಲವಾಗುತ್ತದೆ ಎಂದು ಸರ್ಕಾರಿ ವಕೀಲರು ವಾದಿಸಿದ್ದರು.

ಜೈಲಿನ ಆಹಾರ ಶುಚಿ, ರುಚಿ, ಆರೋಗ್ಯಕರವಾಗಿಯೂ ಇದೆ ಹೀಗಿರುವಾಗ ಮನೆಯಿಂದ ಊಟ ನೀಡುವ ಔಚಿತ್ಯ ಏನಿದೆ ಎಂದು ಸರ್ಕಾರಿ ವಕೀಲರು ಹೈಕೋರ್ಟ್‌ನಲ್ಲಿ ವಾದ ಮಂಡಿಸಿದ್ದರು. ವಾದ ಆಲಿಸಿದ ನ್ಯಾಯಮೂರ್ತಿ ನಾಗಪ್ರಸನ್ನ ಅವರಿದ್ದ ಪೀಠವು 57ನೇ ಸಿಸಿಎಚ್ ಕೋರ್ಟ್ ನೀಡಿದ್ದ ಆದೇಶಕ್ಕೆ ಮಧ್ಯಂತರ ತಡೆ ನೀಡಿದೆ.

ಎಲ್ಲರೂ ಸಮಾನರೇ: ಕಾನೂನಿಗೆ ಎಲ್ಲರೂ ಒಂದೇ. ಯಾರಿಗೂ ವಿಶೇಷ ಸವಲತ್ತು ನೀಡುವಂತಿಲ್ಲ. ಜೈಲು ಕೈಪಿಡಿಯಲ್ಲಿ ಮನೆ ಊಟವನ್ನು ಕೇವಲ ಬಹಳ ವಿಶೇಷ ಸಂದರ್ಭದಲ್ಲಿ ಐಜಿಪಿ ಅವರ ಒಪ್ಪಿಗೆ ಮೇರೆಗೆ ಮಾತ್ರವೇ ನೀಡಬೇಕು, ಅದೂ ಆ ಕಾರಣ ವೈದ್ಯಕೀಯ ಕಾರಣ ಆಗಿರಬೇಕು ಎಂದು ಹೈಕೋರ್ಟ್ ಹೇಳಿದೆ.

ಕೋಕಾ ಕೋಲಾ 25,760 ಕೋಟಿ ಹೂಡಿಕೆ ಪ್ರಸ್ತಾಪ

- ರಾಜ್ಯಕ್ಕೆ ಆಕರ್ಷಿಸಲು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಯತ್ನ
- ವಿಜಯಪುರದಲ್ಲಿ ಅಗತ್ಯ ಸೌಕರ್ಯದ ಭರವಸೆ
- ಮೆಂಜಿಸ್ ಏವಿಯೇಷನ್ ಹೂಡಿಕೆ ವಿಶ್ವಾಸ



ದಾವೋಸ್‌ನ ವಿಶ್ವ ಆರ್ಥಿಕ ಸಮಾವೇಶದ ಮೊದಲ ದಿನ ಕೋಕಾ ಕೋಲಾ ಕಂಪನಿಯ ಜಾಗತಿಕ ನೀತಿ ಹಾಗೂ ಸುಸ್ಥಿರತೆಯ ಹಿರಿಯ ಉಪಾಧ್ಯಕ್ಷ ಮೈಕಲ್ ಗೋಲ್ಡ್ಜ್‌ಮನ್ ಜೊತೆಗಿನ ಸಭೆಯಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಪ್ರಮುಖವಾಗಿ ಚರ್ಚಿಸಿದರು.

ಬೆಂಗಳೂರು, ಜ.20(ಕೆಎಂಶಿ)–ದೇಶದ ಆಹಾರ ಸಂಸ್ಕರಣಾ ವಲಯದಲ್ಲಿ ಕೋಕಾ ಕೋಲಾ ಕಂಪನಿ 25,760 ಕೋಟಿ ರೂ. ಬಂಡವಾಳ ಹೂಡಿಕೆಗೆ ಮುಂದಾಗಿದ್ದು ಇದರಲ್ಲಿ ಬಹುಪಾಲು ಮೊತ್ತವನ್ನು ಕರ್ನಾಟಕಕ್ಕೆ ಆಕರ್ಷಿಸಲು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಪ್ರಯತ್ನ ನಡೆಸಿದ್ದಾರೆ.

ದಾವೋಸ್‌ನ ವಿಶ್ವ ಆರ್ಥಿಕ ಸಮಾವೇಶದ ಮೊದಲ ದಿನ ಕೋಕಾ ಕೋಲಾ ಕಂಪನಿಯ ಜಾಗತಿಕ ನೀತಿ ಹಾಗೂ ಸುಸ್ಥಿರತೆಯ ಹಿರಿಯ ಉಪಾಧ್ಯಕ್ಷ ಮೈಕಲ್ ಗೋಲ್ಡ್ಜ್‌ಮನ್ ಜೊತೆಗಿನ ಸಭೆಯಲ್ಲಿ ಸಚಿವ ಎಂ.ಬಿ.ಪಾಟೀಲ್ ಪ್ರಮುಖವಾಗಿ ಚರ್ಚಿಸಿದರು. ಕಂಪನಿ ಭಾರತದಲ್ಲಿ ಹೂಡಲಿರುವ ಬಂಡವಾಳದಲ್ಲಿ ಗಮನಾರ್ಹ ಮೊತ್ತ ಕರ್ನಾಟಕಕ್ಕೆ ಆಕರ್ಷಿಸಲು ಅಗತ್ಯ ಎಲ್ಲ ಸೌಲಭ್ಯ ಹಾಗೂ ಬೆಂಬಲ ನೀಡಲು ರಾಜ್ಯ ಸರ್ಕಾರ ಉತ್ಸುಕವಾಗಿರುವ ಭರವಸೆ ನೀಡಿದರು.

ಕಂಪನಿಯ ಪಾನೀಯ ತಯಾರಿಕಾ ಮತ್ತು ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ವಿಜಯಪುರ ಜಿಲ್ಲೆ ಸೂಕ್ತ ಸ್ಥಳ ಎಂಬುದನ್ನು ಮನವರಿಕೆ ಮಾಡಿಕೊಡಲಾಗಿದೆ. ಈ ಪ್ರದೇಶದಲ್ಲಿ ಪಾನೀಯ ತಯಾರಿಕೆ ಕೈಗಾರಿಕೆಗಳ ಬಳಕೆಗೆ ಅಗತ್ಯವಿರುವ ನೀರು ಅಪಾರ ಪ್ರಮಾಣದಲ್ಲಿ ಸುಸ್ಥಿರ ರೀತಿಯಲ್ಲಿ ಲಭ್ಯ ಇದೆ ಎಂಬುದನ್ನು ಕಂಪನಿ ಮುಖ್ಯಸ್ಥರ ಗಮನಕ್ಕೆ ತರಲಾಯಿತು.

ಸಚಿವರ ನೇತೃತ್ವದ ಉನ್ನತಮಟ್ಟದ ನಿಯೋಗ ದೇಶ–ವಿದೇಶಗಳ ಬಹುರಾಷ್ಟ್ರೀಯ ಕಂಪನಿಗಳ ದಿಗ್ಗಜರ ಭೇಟಿ ಮಾಡಿ, ರಾಜ್ಯದಲ್ಲಿ ಉದ್ಯಮ ಸ್ಥಾಪನೆ, ವಿಸ್ತರಣೆ ಹಾಗೂ ಬಂಡವಾಳ ಹೂಡಿಕೆ ಆಕರ್ಷಿಸಲು ಸರ್ಕಾರ ನೀಡಲಿರುವ ಸಬ್ಸಿಡಿ, ಉತ್ತೇಜನಾ ಕ್ರಮಗಳನ್ನು ವಿವರಿಸಿತು.

ಮೆಂಜಿಸ್ ಏವಿಯೇಷನ್ನಿನ ಕಾರ್ಯನಿರ್ವಾಹಕ ಅಧ್ಯಕ್ಷ ಹ್ಯಾಸನ್ ಎಲ್.ಹೌರಿ, ಯುಪಿಎಲ್‌ನ ಅಧ್ಯಕ್ಷ ಜೈ ಶ್ರಾಫ್, ಎಬಿ ಇನ್‌ಬೆವ್‌ನ ಕಾರ್ಪೊರೇಟ್ ವ್ಯವಹಾರಗಳ ಅಧಿಕಾರಿ ಜಾನ್ ಬ್ಲಡ್, ಟಾಟಾ ಸನ್ಸ್ ಅಧ್ಯಕ್ಷ ಎನ್.ಚಂದ್ರಶೇಖರನ್, ನ್ಯಾಚುರಲ್ ಫೈಬರ್ ವೆಲ್ಡಿಂಗ್ (ಎನ್‌ಎಫ್‌ಡಬ್ಲ್ಯು ಅರ್ಥ್)ನ ಸುಹಾಸ್ ಉಪ್ಪಲಪತಿ ಜೊತೆ ಫಲಪ್ರದ ಮಾತುಕತೆ ನಡೆಸಲಾಯಿತು.

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಗ್ರೌಂಡ್ ಹ್ಯಾಂಡ್ಲಿಂಗ್ ಉದ್ದೇಶದ ಟೆಂಡರ್ ದೊರೆತರೆ, 85 ಕೋಟಿ ರೂ. ಹೂಡಿಕೆ ಮಾಡುವುದಾಗಿ ಮೆಂಜಿಸ್ ಏವಿಯೇಷನ್ ನಿಯೋಗದ ಗಮನಕ್ಕೆ ತಂದಿತು.

ತನ್ನ ಜಾಗತಿಕ ಕಾರ್ಯಾಚರಣೆಗಳಿಗೆ ಪೂರಕವಾಗಿ ರಾಜ್ಯದಲ್ಲಿ ಶ್ರೇಷ್ಠತಾ ಕೇಂದ್ರ ಹಾಗೂ ಸಾಮರ್ಥ್ಯ ಕೇಂದ್ರಗಳ ಸ್ಥಾಪನೆ ಸಾಧ್ಯತೆಗಳನ್ನು ಪರಿಶೀಲಿಸುವುದಾಗಿ ನಿಯೋಗಕ್ಕೆ ತಿಳಿಸಿದೆ.

ಕೃಷಿ ರಾಸಾಯನಿಕ ಮತ್ತು ಬೆಳೆ ಸಂರಕ್ಷಣಾ ಕಂಪನಿ ಯುಪಿಎಲ್ ಲಿಮಿಟೆಡ್, ಕೃಷಿ ಪರಿಹಾರ ಮತ್ತು ನೀರಾವರಿ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಕರ್ನಾಟಕದಲ್ಲಿ ವಹಿವಾಟು ವಿಸ್ತರಿಸಲು ಆಸಕ್ತಿ ವ್ಯಕ್ತಪಡಿಸಿದ್ದು, ರಫ್ತು ಮಾರುಕಟ್ಟೆಗಳಿಗೆ ಮೌಲ್ಯವರ್ಧಿತ ಮೆಕ್ಕೆಜೋಳ ಆಧಾರಿತ ಉತ್ಪನ್ನಗಳ ತಯಾರಿಕೆ ಸಾಧ್ಯತೆಗಳನ್ನು ಕಂಪನಿ ಪ್ರಸ್ತಾಪಿಸಿದೆ, ಅಲ್ಲದೆ, ಎಥೆನಾಲ್ ರಫ್ತು ಸಾಧ್ಯತೆ ಸೇರಿದಂತೆ ಸ್ಥಾವರ ನಿರ್ಮಾಣ ಬಗ್ಗೆಯೂ ಚರ್ಚಿಸಲಾಗಿದೆ.

ವಿಶ್ವ ಆರ್ಥಿಕ ವೇದಿಕೆಯ ಕಾರ್ಯಕ್ರಮಗಳ ಪ್ರಾಯೋಗಿಕ ಪರೀಕ್ಷೆಗೆ ಕರ್ನಾಟಕ ಸೂಕ್ತ ತಾಣವಾಗಿದೆ ಎಂಬುದನ್ನು ಡಬ್ಲ್ಯುಇಎಫ್ ಗಮನಕ್ಕೆ ತರಲಾಗಿದೆ.

ಟಾಟಾ ಸನ್ಸ್ ಸಂಸ್ಥೆಯ ಭವಿಷ್ಯದ ಯೋಜನೆಗಳ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗಿದೆ. ಎಬಿ ಇನ್‌ಬೆವ್ ತನ್ನ ಕಾರ್ಯಾಚರಣೆಗಳನ್ನು ಮತ್ತಷ್ಟು ವಿಸ್ತರಿಸುವ ಸ್ಪಷ್ಟ ಇಂಗಿತ ವ್ಯಕ್ತಪಡಿಸಿದೆ.

ತನ್ನ ವಹಿವಾಟಿನ ಕುರಿತು ರಾಜ್ಯ ಸರ್ಕಾರದ ಜೊತೆ ಯೋಜನಾ ಪ್ರಸ್ತಾವ ಹಂಚಿಕೊಳ್ಳುವುದಾಗಿ ನ್ಯಾಚುರಲ್ ಫೈಬರ್ ವೆಲ್ಡಿಂಗ್ (ಎನ್‌ಎಫ್‌ಡಬ್ಲ್ಯು ಅರ್ಥ್) ಉನ್ನತಾಧಿಕಾರಿಗಳ ತಂಡ ರಾಜ್ಯದ ನಿಯೋಗಕ್ಕೆ ಭರವಸೆ ನೀಡಿದೆ ಎಂದು ಪಾಟೀಲ್ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಲಕ್ಕುಂಡಿ ಉತ್ಖನನ: ಶಿವಲಿಂಗದ ಪಾಣಿಪೀಠವನ್ನು ಸಂಪೂರ್ಣ ಹೊರತೆಗೆದ ಪುರಾತತ್ವ ಇಲಾಖೆ



ಗದಗ: ಲಕ್ಕುಂಡಿಯಲ್ಲಿ ಐದನೇ ದಿನದ ಉತ್ಖನನ ಕಾರ್ಯ ಮುಗಿದಿದ್ದು 2ನೇ ದಿನ ಗೋಚರವಾಗಿದ್ದ ಶಿವಲಿಂಗದ ಪಾಣಿಪೀಠವನ್ನು ಪುರಾತತ್ವ ಸಿಬ್ಬಂದಿ ಹೊರ ತೆಗೆದಿದ್ದಾರೆ. ಈ ಪಾಣಿಪೀಠ ಎರಡೂ ಭಾಗವಾಗಿ ಒಡೆದು ಹೋಗಿದೆ. ಶಿವಲಿಂಗ ಇರುವ ಮಧ್ಯದ ಭಾಗ ತುಂಡಾಗಿದ್ದು ಈಗ ಈ ಭಾಗದ ಶೋಧ ಕಾರ್ಯ ನಡೆಯುತ್ತಿದೆ. ಕೈಮುಗಿದು, ಪದ್ಮಾಸನದಲ್ಲಿ ಕುಳಿತ ಶಿಲ್ಪಾಕೃತಿಯನ್ನು ಪಾಣಿಪೀಠದ ಬಲ ಭಾಗದಲ್ಲಿ ಕೆತ್ತಲಾಗಿದೆ.

ಇದು ಮುಂಜಾನೆ ಪುರಾತನ ಕಾಲದ ಮಡಿಕೆ ಹಾಗೂ ಕವಡೆ ಪತ್ತೆಯಾಗಿತ್ತು. ಈಗ ಪುರಾತತ್ವ ಇಲಾಖೆ ಸಿಬ್ಬಂದಿ ಫೋಟೋಗ್ರಾಫಿ ಹಾಗೂ ಅದರ ಕುರುಹುಗಳ ದಾಖಲು ಮಾಡಿದ್ದಾರೆ.

ಕೋಟೆ ವೀರಭದ್ರೇಶ್ವರ ದೇವಸ್ಥಾನ ಹಾಗೂ ಸಿದ್ದರ ಬಾವಿ ನಡುವೆ ನಡೆದಿರುವ ಉತ್ಖನನದ ವೇಳೆ ಈ ಪ್ರಾಚ್ಯಾವಶೇಷ ಸಿಕ್ಕಿದೆ. ಈ ಜಾಗದಲ್ಲಿ ದೇವಸ್ಥಾನದಿಂದ ಬಾವಿವರೆಗೆ ಮೆಟ್ಟಿಲುಗಳಿರುವ ಸಾಧ್ಯತೆ ಇದೆ. ಅರೆಳು ಅಡಿ ಕೆಳಕ್ಕೆ ಇಳಿದರೆ ಇನ್ನೂ ಹಲವಾರು ಪ್ರಾಚ್ಯಾವಶೇಷಗಳು ಸಿಗುವ ಸಾಧ್ಯತೆಯಿದೆ.

ಶಿವಲಿಂಗದ ಪೀಠದ ಸುತ್ತುತ್ತಲಿನ ಭಾಗವನ್ನು ಪಾಣಿಪೀಠ ಎಂದು ಕರೆಯಲಾಗುತ್ತದೆ. ಲಿಂಗದ ಮೇಲೆ ಸುರಿಯುವ ಅಭಿಷೇಕದ ನೀರು, ಇತರ ದ್ರವಗಳು ದ್ರವಗಳು ಹರಿದು ಹೋಗಲು ಒಂದು ಮಾರ್ಗವಿರುತ್ತದೆ.

ಬೃಹತ್ ಮೈಸೂರು ಮಹಾ ನಗರಪಾಲಿಕೆ ಅಭಿವೃದ್ಧಿಗೆ ಆರಂಭಿಕ 1,000 ಕೋಟಿ ಅನುದಾನಕ್ಕೆ ಬೇಡಿಕೆ

● ಜಿಲ್ಲಾಧಿಕಾರಿ ಮೂಲಕ ಕಾಂಗ್ರೆಸ್ ನಿಯೋಗದಿಂದ ಮುಖ್ಯಮಂತ್ರಿಗಳಿಗೆ ಮನವಿ ● ಅಧಿಕಾರಿಗಳಿಗೆ ಸಮಸ್ಯೆಗಳ ಬಗ್ಗೆ ಮನವರಿಕೆ



ಬೃಹತ್ ಮೈಸೂರು ಮಹಾನಗರಪಾಲಿಕೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರದಿಂದ ಬಜೆಟ್‌ನಲ್ಲಿ ಸಾವಿರ ಕೋಟಿ ಅನುದಾನ ನೀಡುವಂತೆ ಮೈಸೂರು ಕಾಂಗ್ರೆಸ್ ನಿಯೋಗ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತು.

ಯುಜಿಡಿ ಸಮಸ್ಯೆಗೆ ಮೊದಲ ಆದ್ಯತೆ

ಕಾಂಗ್ರೆಸ್ ನಿಯೋಗದಿಂದ ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಬೃಹತ್ ಮೈಸೂರು ಮಹಾನಗರ ಪಾಲಿಕೆ ಅಧಿಕೃತವಾಗಿ ಗೆಜೆಟ್ ನೋಟಿಫಿಕೇಷನ್ ಹೊರಡಿಸುವ ಮುನ್ನವೇ ಅಧಿಕಾರಿಗಳೊಟ್ಟಿಗೆ ಸಾಕಷ್ಟು ಚರ್ಚೆಗಳನ್ನು ಮಾಡಲಾಗಿದೆ. ಇಂದು ಸಹ ಅಧಿಕಾರಿಗಳ ಸಭೆ ಕರೆಯಲಾಗಿದೆ. ಅನೇಕ ಗ್ರಾಮಾಂತರ ಪ್ರದೇಶಗಳು ಬೃಹತ್ ಮೈಸೂರು ಪಾಲಿಕೆ ವ್ಯಾಪ್ತಿಗೆ ಬರುವುದರಿಂದ ಪ್ರಮುಖವಾಗಿ ಅಲ್ಲಿ ಯುಜಿಡಿ ಸಮಸ್ಯೆ ಕಂಡು ಬಂದಿದೆ. ಅದಕ್ಕೆ ಮೊದಲ ಆದ್ಯತೆ ನೀಡಿದ್ದೇವೆ ಎಂದರು.

ಈಗಾಗಲೇ ಯುಜಿಡಿಗೆ ಸಂಬಂಧಿಸಿದಂತೆ 800 ಕೋಟಿ ರೂ. ಅಗತ್ಯವಿದ್ದು, ಸರ್ಕಾರಕ್ಕೆ ಡಿಪಿಆರ್ ಸಹ ಕಳುಹಿಸಲಾಗಿದೆ. ಮತ್ತೊಂದೆಡೆ ಕಸ ಸಂಗ್ರಹಣೆ ಕಡಿಮೆ ಆಗುತ್ತಿರುವುದರಿಂದ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚುವರಿ ಕಸ ಸಂಗ್ರಹಣೆಯ ಆಟೋಗಳನ್ನು ನೀಡಲು ಚಿಂತಿಸಲಾಗಿದೆ. ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿರುವ ಪ್ರದೇಶದ ರಸ್ತೆಗಳು ಎಲ್ಲವೂ ಕಾಂಕ್ರೀಟ್ ರಸ್ತೆಗಳು ಉತ್ತಮವಾಗಿವೆ ಎಂದರು. ಚಾಮುಂಡಿಬೆಟ್ಟವನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆಗೆ ಸೇರಿಸದಂತೆ ಕೆಲವರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಆದರೆ, ಅದು ನಗರ ಪ್ರದೇಶದಲ್ಲಿ ಇರುವುದರಿಂದ ಅದನ್ನು ಕೈಬಿಡಲು ಸಾಧ್ಯವಿಲ್ಲ. ಮುಖ್ಯಮಂತ್ರಿಗಳು ಅಂತಿಮವಾಗಿ ನಿರ್ಧಾರ ಕೈಗೊಳ್ಳಲಿದ್ದಾರೆ. ಇಂದು ಸಭೆಯಲ್ಲಿ ನೀವು ಸಲ್ಲಿಸಿರುವ ಮನವಿಯನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುತ್ತದೆ ಎಂದರು.

ಮೈಸೂರು, ಜ.20(ಜಿಎ)–ಬೃಹತ್ ಮೈಸೂರು ಮಹಾನಗರಪಾಲಿಕೆ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಸಾವಿರ ಕೋಟಿ ಅನುದಾನ ಕಲ್ಪಿಸುವಂತೆ ಮೈಸೂರು ಕಾಂಗ್ರೆಸ್ ನಿಯೋಗ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಮೈಸೂರಿನ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರೊಂದಿಗೆ ಬೃಹತ್ ಮೈಸೂರು ಮಹಾನಗರಪಾಲಿಕೆಗೆ ಸಂಬಂಧ ಪಟ್ಟಂತೆ ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನ ಬೇಡಿಕೆ ಜೊತೆಗೆ ನಾನಾ ಸಮಸ್ಯೆಗಳ ಕುರಿತು ಕಾಂಗ್ರೆಸ್ ನಿಯೋಗ ಸಭೆ ನಡೆಸಿತ್ತು.

ಈ ವೇಳೆ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ್ ಮಾತನಾಡಿ, ಬೃಹತ್ ಮೈಸೂರು ಮಹಾನಗರಪಾಲಿಕೆ ಸಂಬಂಧ ಜ.8ರಂದು ಅಧಿಕೃತವಾಗಿ ಗೆಜೆಟ್ ನೋಟಿಫಿಕೇಷನ್ ಹೊರಡಿಸಿರುವುದು ಸಂತಸದ ವಿಚಾರ. ಆದರೆ, ಹಾಲಿ 56 ಕಿಮಿ ವ್ಯಾಪ್ತಿಯ ಮೈಸೂರು ಪಾಲಿಕೆಯನ್ನು 341.44 ಚದರ ಕಿಮಿ ವ್ಯಾಪ್ತಿಗೆ ವಿಸ್ತರಿಸುತ್ತಿರುವುದರಿಂದ ಅಭಿವೃದ್ಧಿಗಾಗಿ ಬಜೆಟ್‌ನಲ್ಲಿ ಮೊದಲ ಹಂತದಲ್ಲಿ ಕನಿಷ್ಠ 1 ಸಾವಿರ ಕೋಟಿ ಮೀಸಲಿಡಬೇಕು. ಸೀವೇಜ್ ಟ್ರೀಟ್ಮೆಂಟ್ ಪ್ಲಾಂಟ್ ಈಗಾಗಲೇ 4 ಇದ್ದು, ಅದಕ್ಕೆ ಹೆಚ್ಚುವರಿಯಾಗಿ 4 ಸೇರ್ಪಡೆ ಮಾಡಬೇಕು. ಇಲ್ಲದಿದ್ದರೆ ಬೆಂಗಳೂರಿನ ಸ್ಥಿತಿ ಬರುತ್ತದೆ. ಈಗ ಪಾಲಿಕೆ ವ್ಯಾಪ್ತಿ 1,200 ಕಿಮೀ ರಸ್ತೆ ಬರಲಿದ್ದು, ರಸ್ತೆ ನಿರ್ಮಾಣಕ್ಕೆ ಯೋಜನೆ ರೂಪಿಸಿ, ಸೀವೇಜ್ ಲೈನ್, ಡ್ರೈನೇಜ್, ಪೈಪ್ ಲೈನ್, ಕಸ ಸಂಗ್ರಹ ಘಟಕ ಹೆಚ್ಚಿಸಬೇಕು. ಶಾಲಾ–ಕಾಲೇಜುಗಳು ಹಾಗೂ ಮೈದಾನಕ್ಕೆ ಜಾಗ ಇಲ್ಲ. ಅದಕ್ಕೆ ಜಾಗ ಗುರುತಿಸಿ ಎಂದು ಸಲಹೆ ನೀಡಿದರು.

ಟ್ರಾಫಿಕ್ ಸಮಸ್ಯೆ ಸುಧಾರಿಸಲು ಕ್ರಮ ವಹಿಸಬೇಕು. ದೆಹಲಿ, ಛತ್ತೀಸ್‌ಘಡ ರೀತಿಯ ನೀತಿ ತರಬೇಕು. ಸಿಗ್ನಲ್ ಲೈಟ್‌ನಿಂದ ಪರಿಹಾರ ಸಾಧ್ಯವಿಲ್ಲ. ವಾರ್ಡ್‌ಗಳ ಸಂಖ್ಯೆ 120ಕ್ಕೆ ಹೆಚ್ಚಿಸಬೇಕು. 20 ವಲಯ ಕಚೇರಿಗಳು, ಕುಡಿಯುವ ನೀರಿಗಾಗಿ ಓವರ್ ಹೆಡ್ ಟ್ಯಾಂಕ್ ನಿರ್ಮಿಸಬೇಕು. ಬೃಹತ್ ಬಸ್ ಡಿಪೊ ಆಗಬೇಕು. ಪಾರ್ಕಿಂಗ್ ದೊಡ್ಡ ಸಮಸ್ಯೆಯಾಗುತ್ತಿದ್ದು, ಅದಕ್ಕೆ ಜಾಗ ಗುರುತಿಸಬೇಕು. ಪೊಲೀಸ್ ಠಾಣೆಗಳಿಗೆ, ಸರ್ಕಾರಿ ಆಸ್ಪತ್ರೆಗಳಿಗೆ ಜಾಗ ಒದಗಿಸಬೇಕು ಎಂದರು.

ಸಿಎ ನಿವೇಶನ ಕಾಯ್ದಿರಿಸಿ : ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮೈಸೂರಿನ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕಿದೆ. ಗ್ರೇಟರ್ ಮೈಸೂರು ಅಭಿವೃದ್ಧಿಯ ದೃಷ್ಟಿಯಿಂದ ಆಸ್ಪತ್ರೆಗಳು, ಶಾಲೆಗಳು, ಸರ್ಕಾರಿ ಕಚೇರಿಗಳು, ಪೊಲೀಸ್ ಠಾಣೆಗಳ ಹೆಚ್ಚಿಸಬೇಕಿದೆ ಹಾಗಾಗಿ ಕಾರಣ ತತ್ ಕ್ಷಣವೇ ಮೈಸೂರಿನ ಅಭಿವೃದ್ಧಿ ಪ್ರಾಧಿಕಾರ, ಸಿಎ ನಿವೇಶನಗಳನ್ನು ಕಾಯ್ದಿರಿಸಬೇಕಾಗಿದೆ ಎಂದರು.

ಕಸ ಸಂಸ್ಕರಣಾ ಘಟಕ: ನಾನು ಶಾಸಕನಾಗಿದ್ದಾಗ ಮೈಸೂರಿನ ಸೂಯೇಜ್ ಫಾರಂನ ಅಭಿವೃದ್ಧಿ ಮಾಡಿದ್ದು, ಬಿಟ್ಟರೆ ನಂತರದ ಅವಧಿಯಲ್ಲಿ ಯಾವ ಪ್ರಗತಿಯೂ ಆಗಿಲ್ಲ. ಈಗಾಗಲೇ ಮೈಸೂರು ನಗರದ ಕಸವೆಲ್ಲಾ ಸೂಯೇಜ್ ಪ್ಲಾಂಟ್‌ನಲ್ಲಿ ಚಾಮುಂಡಿ ಬೆಟ್ಟವನ್ನು ಮೀರಿಸುವಷ್ಟು ಎತ್ತರಕ್ಕೆ ಸಂಗ್ರಹವಾಗುತ್ತಿದೆ. ಕೆಸರೆ ಮತ್ತು ರಾಯನಕೆರೆ ಹೊರತುಪಡಿಸಿ ಬೇರೆಲ್ಲೂ ಸ್ಥಳ ನಿಗದಿಪಡಿಸಿಲ್ಲ. ಗ್ರೇಟರ್ ಮೈಸೂರು ರಚನೆಯಾದ ಮೇಲೆ ಮತ್ತಷ್ಟು ಗ್ರಾಮಗಳು, ಹೊರವಲಯಗಳು ಸೇರ್ಪಡೆ ಆದರೆ ಹೆಚ್ಚು ಹೆಚ್ಚು ಕಸ ಉತ್ಪಾದನೆಯಾಗಲಿದ್ದು, ಮತ್ತಷ್ಟು ಸಮಸ್ಯೆ ಬಿಗಡಾಯಿಸುವ ಸಾಧ್ಯತೆ ಇದೆ. ಆದ್ದರಿಂದ ಉದ್ದೇಶಿತ ಪೆರಿಫೆರಲ್ ರಿಂಗ್ ರಸ್ತೆಯಿಂದಾಚೆಗೂ ಕಸ ಸಂಸ್ಕರಣೆ ಘಟಕಗಳು ನಿರ್ಮಾಣವಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಪ್ರವಾಸಿಗರಿಗೆ ಕಿರಿಕಿರಿ: ಚಾಮುಂಡಿ ಬೆಟ್ಟ, ಮೃಗಾಲಯ ಕೂಡ ಅತ್ಯುತ್ತಮ ಪ್ರವಾಸಿ ತಾಣಗಳಾಗಿದ್ದು ಚಾಮುಂಡಿಬೆಟ್ಟ ಮತ್ತು ಸುತ್ತಮುತ್ತಲಿನ ಸರ್ಕಾರಿ ಜಾಗದಲ್ಲಿ ಖಾಸಗಿಯವರು ಅತಿಕ್ರಮ ಪ್ರವೇಶ ಮಾಡಿದ್ದು,ಬೆಟ್ಟದ ಮೇಲೂ ಅಂಗಡಿ ಮುಂಗಟ್ಟುಗಳು ಪ್ರವಾಸಿಗರಿಗೆ ಕಿರಿಕಿರಿ ಉಂಟು ಮಾಡುತ್ತಿವೆ. ಇವುಗಳಿಗೆ ಕಡಿವಾಣ ಹಾಕಬೇಕಿದೆ ಎಂದು ತಿಳಿಸಿದರು.

ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಮಾತನಾಡಿ, ಮೊದಲು ಚಾಮುಂಡಿ ಬೆಟ್ಟದಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಕೈಬಿಡಿ. ಬೆಟ್ಟದ ಸುತ್ತಲೂ ಅಕ್ರಮ ಕಟ್ಟಡಗಳ ನಿರ್ಮಾಣ ತಡೆಯಬೇಕು. ಚಾಮುಂಡಿಬೆಟ್ಟವನ್ನು ಬೃಹತ್ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸೇರಿಸಿ ಎಂದು ಮನವಿ ಮಾಡಿದರು.

ವಿವಿಧ ಗ್ರಾಮಗಳ ಸೇರ್ಪಡೆಗೆ ಆಗ್ರಹ: ಜಿಪಂ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಮಾತನಾಡಿ, ಬೃಹತ್ ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಗೆ ಕಳಸ್ತವಾಡಿ, ಲಕ್ಷ್ಮಿಪುರಂ ಸೇರಿದಂತೆ ವರುಣಾ ಕ್ಷೇತ್ರದ ಕೆಲವು ಗ್ರಾಮಗಳನ್ನು ಸೇರಿಸಿ ಎಂದು ಆಗ್ರಹಿಸಿದರು.

ಸಭೆಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಅಸೀಫ್, ಕೆಪಿಸಿಸಿ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ಮೈಸೂರು ಜಿಲ್ಲಾ ಅಧ್ಯಕ್ಷ ಅರುಣ್‌ಕುಮಾರ್, ಜಿಪಂ ಅಧ್ಯಕ್ಷ ಬಿ.ಎಂ.ರಾಮು, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಮಲ್ಲೇಶ್, ಶೌಕತ್ ಪಾಷಾ, ಭಾಸ್ಕರ್, ಕಾಂತರಾಜು, ಯುವಕಾಂಗ್ರೆಸ್ ಅಧ್ಯಕ್ಷರಾದ ಅಬ್ರಾರ್, ಮಹೇಶ್, ಮನೋಮ್ಮಣಿ ಮತ್ತಿತರರು ಉಪಸ್ಥಿತರಿದ್ದರು.

ಸಂಶೋಧನೆಗಳು ದೇಶದ ಪ್ರಗತಿಗೆ ಪೂರಕವಾಗಿರಬೇಕು

ಜೆಎಸ್‌ಎಸ್ ಎಹೆಚ್‌ಇಆರ್ ಸಂಶೋಧನಾ ಡೀನ್ ಡಾ.ಪ್ರಶಾಂತ್ ವಿಶ್ವನಾಥ್ ಅಭಿಮತ



ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಭಾಂಗಣದಲ್ಲಿ ನಡೆದ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಸೌಲಭ್ಯಗಳ ನಕ್ಷೆ (ಐ–ಸ್ಟೆಮ್) ಸಮಾವೇಶದಲ್ಲಿ ಡೀನ್ ಡಾ.ಪ್ರಶಾಂತ್ ವಿಶ್ವನಾಥ್ ಮಾತನಾಡಿದರು.

ಮೈಸೂರು, ಜ.20(ಜಿಎ)–ಕೃತಕ ಬುದ್ಧಿಮತ್ತೆ (ಎಐ) ಯುಗದಲ್ಲಿ ಎಲ್ಲ ಮಾಹಿತಿಯೂ ಸುಲಭವಾಗಿ ಸಿಗುತ್ತಿದೆ. ಆದರೆ ಪೂರಕವಾದ ಸಂಶೋಧನೆಗಳು ಅಗತ್ಯ ಎಂದು ಜೆಎಸ್‌ಎಸ್ ಎಹೆಚ್‌ಇಆರ್ ಸಂಶೋಧನಾ ಡೀನ್ ಡಾ.ಪ್ರಶಾಂತ್ ವಿಶ್ವನಾಥ್ ಅಭಿಪ್ರಾಯಪಟ್ಟರು.

ಮೈಸೂರಿನ ಬನ್ನಿಮಂಟಪದಲ್ಲಿರುವ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನ ಸಭಾಂಗಣದಲ್ಲಿ ಜೆಎಸ್‌ಎಸ್ ಎಹೆಚ್‌ಇಆರ್‌ನ ಯೂನಿವರ್ಸಿಟಿ ಸೋಫಿಸ್ಟಿಕೇಟೆಡ್ ಇನ್ಸ್ಟ್ರುಮೆಂಟೇಶನ್ ಸೆಂಟರ್ ವತಿಯಿಂದ ಆಯೋಜಿಸಿದ್ದ ವಿಜ್ಞಾನ, ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್ ಸೌಲಭ್ಯಗಳ ನಕ್ಷೆ (ಐ–ಸ್ಟೆಮ್) ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಔಷಧ, ವಿಜ್ಞಾನ, ತಂತ್ರಜ್ಞಾನ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿ ಹೊಂದುತ್ತಿದ್ದೇವೆ. ಅಭಿವೃದ್ಧಿಯಿಂದ ಎಷ್ಟು ಜನರಿಗೆ ಅನುಕೂಲವಾಗುತ್ತಿದೆ ಎಂಬುವುದು ಕೂಡ ಮುಖ್ಯವಾಗಿದೆ. ನಾವು ಮಾಡುವ ಸಂಶೋಧನೆಗಳು ಜನ ಹಾಗೂ ದೇಶದ ಅಭಿವೃದ್ಧಿಗೆ ಪೂರಕವಾಗಿ ಇರಬೇಕು. ಆಧುನಿಕ ಯುಗದಲ್ಲಿ ಸವಾಲುಗಳ ನಡುವೆ ಔಷಧಿಗಳ ಸಂಶೋಧನೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವುದು ದೇಶಕ್ಕೆ ಪೂರಕವಾದ ವಾತಾವರಣ ಸೃಷ್ಟಿ ಮಾಡುತ್ತಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ರೋಗಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ, ಅದರ ವೇಗಕ್ಕೆ ಔಷಧಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿರುವುದರಿಂದ ರೋಗಿಗಳಿಗೆ ಅನುಕೂಲವಾಗುತ್ತಿದೆ. ಔಷಧ ಕ್ಷೇತ್ರದಲ್ಲಿ ಪರಿಣಾಮಕಾರಿ ಸಂಶೋಧನೆಗಳು ದೇಶದ ಬೆಳವಣಿಗೆಗೆ ಪೂರಕವಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಸಂಶೋಧನಾ ಸೌಲಭ್ಯಗಳ ಜಾಗೃತಿ ಮತ್ತು ಪರಿಣಾಮಕಾರಿಯಾಗಿ ಸಂಶೋಧನೆಗಳನ್ನು ಹೆಚ್ಚಿಸುವ ಮೂಲಕ ಭಾರತದಾದ್ಯಂತ ಪ್ರಯೋಗಾಲಯಗಳು ಮತ್ತು ಸಂಶೋಧಕರ ನಡುವೆ ಐ–ಸ್ಟೆಮ್ ಉತ್ತಮವಾಗಿ ಕೆಲಸ ಮಾಡುತ್ತಿದೆ. ಆತ್ಮನಿರ್ಭರ ಭಾರತದ ಮನೋಭಾವವನ್ನು ಉತ್ತೇಜಿಸುತ್ತಿದೆ ಎಂದರು.

ದೇಶದ ನಾನಾ ಕಡೆಗಳಿಂದ ಬಂದಿದ್ದ ಸ್ಪರ್ಧಿಗಳು, ನೆಟ್‌ವರ್ಕಿಂಗ್, ಸಂಪನ್ಮೂಲ ಬಳಕೆ, ಕಾರ್ಯಾಗಾರಗಳ ವಿಧಾನ, ಪ್ರಯೋಗಾಲಯ ನಿರ್ವಹಣೆ, ಹಲವು ವಿಷಯಗಳ ಮೇಲೆ ವಿಚಾರ ಮಂಡನೆ ಮಾಡಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಎಹೆಚ್‌ಇಆರ್ ರಿಜಿಸ್ಟ್ರರ್ ಡಾ.ಬಿ.ಮಂಜುನಾಥ್, ಪ್ರಾಂಶುಪಾಲ ಡಾ.ಪ್ರಮೋದ್ ಕುಮಾರ್, ಐ–ಸ್ಟೆಮ್ ರಾಷ್ಟ್ರೀಯ ಸಂಯೋಜಕ ಡಾ.ಹರಿಲಾಲ್ ಮತ್ತಿತರರು ಉಪಸ್ಥಿತರಿದ್ದರು.

ಜ.25ಕ್ಕೆ ನಿರಂತರ ಕಲೆಮನೆ ಉತ್ಸವ




ಮೈಸೂರು,ಜ.20–ಕುಮಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ವತಿಯಿಂದ ಜ.25ರಂದು ಮಧ್ಯಾಹ್ನ 2.30ಕ್ಕೆ ಕಲೆಮನೆ ಸಭಾಂಗಣದಲ್ಲಿ 68ನೇ ಅಂತರರಾಷ್ಟ್ರೀಯ ನಿರಂತರ ಕಲೆಮನೆ ಉತ್ಸವ ಹಮ್ಮಿಕೊಳ್ಳಲಾಗಿದೆ.

ಮುಖ್ಯ ಅತಿಥಿಗಳಾಗಿ ರಂಗಕರ್ಮಿ ಕೆ.ಜೆ.ನಾರಾಯಣ ಕಿಕ್ಕೇರಿ, ಕೆನರಾ ಬ್ಯಾಂಕ್ ನಿವೃತ್ತ ಹಿರಿಯ ಪ್ರಬಂಧಕ ಎಸ್.ರಾಧಾಕೃಷ್ಣ ಭಾಗವಹಿಸಲಿದ್ದಾರೆ.

ಬೆಂಗಳೂರಿನ ವೇದ್ಯ ಡ್ಯಾನ್ಸ್ ಅಕಾಡೆಮಿ ನೃತ್ಯ ಗುರುಗಳಾದ ವಿದುಷಿ ಶ್ರೀಮತಿ ಬಿ.ಆರ್.ವಿಂದ್ಯಾ ಇವರ ಶಿಷ್ಯಂದಿರಿಂದ ಭರತನಾಟ್ಯ ಕಾರ್ಯಕ್ರಮ, ಬೆಂಗಳೂರಿನ ಆರಾಧನಾ ಇನ್ಸ್‌ಟಿಟ್ಯೂಟ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್‌ನ ಗುರು ವಿದುಷಿ ಶ್ರೀಮತಿ ಎಸ್. ಅಪರ್ಣ ಅವರ ಶಿಷ್ಯಂದಿರಿಂದ ನೃತ್ಯ ರೂಪಕ, ಬೆಂಗಳೂರಿನ ಧೀರನ ನೃತ್ಯ ಶಾಲೆಯ ಗುರು ವಿದುಷಿ ಶ್ರೀಮತಿ ಎಂ.ಎಸ್. ಶ್ರುತಿ ಮತ್ತು ತಂಡದಿಂದ ಭರತನಾಟ್ಯ, ವಿದುಷಿ ಮಮತಾ ಕಾರಂತ್ ಅವರ ಶಿಷ್ಯೆ ವಿದುಷಿ ಕುಮಾರಿ ಧೀನರೆಡ್ಡಿ ಅವರಿಂದ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ.


ನಿಧನ

ಕೆ.ಆರ್.ದಾಸಶೆಟ್ಟಿ



ಮೈಸೂರು, ಜ.20– ನಗರದ ನಂಜುಮಳಿಗೆ ನಾರಾಯಣಶಾಸ್ತ್ರಿ ರಸ್ತೆ ನಿವಾಸಿ, ನಿವೃತ್ತ ಸಹಾಯಕ ವಾಣಿಜ್ಯ ತೆರಿಗೆ ಅಧಿಕಾರಿ ಕೆ.ಆರ್.ದಾಸಶೆಟ್ಟಿ(98) ಅವರು ಸೋಮವಾರ ನಿಧನರಾದರು. ಇವರು ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಿ.ಪಿ.ಮುನಿಸುವ್ರತ



ನಂಜನಗೂಡು ಪಟ್ಟಣದ ಕೆ.ನರಸೇಗೌಡ ರಸ್ತೆಯ ನಿವಾಸಿ, ಹಿರಿಯ ವಕೀಲ ಸಿ.ಪಿ.ಮುನಿಸುವ್ರತ(90) ಅವರು ಮಂಗಳವಾರ ಬೆಳಗ್ಗೆ ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ ಸಾವಿತ್ರಿ, ಪುತ್ರರಾದ ಎಂ.ನವೀನ್, ಎಂ.ಚೇತನ್, ಪುತ್ರಿ ಪಾವನ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಪುತ್ರಿ ವಿದೇಶದಿಂದ ಆಗಮಿಸುತ್ತಿದ್ದು, ಗುರುವಾರ ಬೆಳಗ್ಗೆ 11ಕ್ಕೆ ನಂಜನಗೂಡಿನಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಚ್ಚಂಡ ಸರೋಜ ನಂಜಪ್ಪ



ಮೈಸೂರು, ಜ.20– ಮೈಸೂರಿನ ಜಯಲಕ್ಷ್ಮೀಪುರಂ, ಎರಡನೇ ಬ್ಲಾಕ್ ನಿವಾಸಿ ಮಚ್ಚಂಡ ಸರೋಜ ನಂಜಪ್ಪ(91) ಅವರು ಮಂಗಳವಾರ ನಿಧನರಾದರು. ಇವರು ಲೇಟ್ ಮಚ್ಚಂಡ ನಂಜಪ್ಪ(ಡಾಲು) ಅವರ ಧರ್ಮಪತ್ನಿ. ಅಪಾರ ಬಂಧು–ಬಳಗವನ್ನು ಅಗಲಿರುವ ಇವರ ಅಂತ್ಯಸಂಸ್ಕಾರ ಗೋಕುಲಂ ಚಿರಶಾಂತಿಧಾಮದಲ್ಲಿ ಬುಧವಾರ(ಜ.21) ಮಧ್ಯಾಹ್ನ 2 ಗಂಟೆಗೆ ನೆರವೇರಲಿದೆ ಎಂದು ಸಂಬಂಧಿಕರು ತಿಳಿಸಿದ್ದಾರೆ.

ಇಮ್ಮಾವು ಬಳಿ ಚಿತ್ರನಗರಿ, ಕೈಗಾರಿಕಾ ಉದ್ದೇಶಕ್ಕೆ ಭೂಸ್ವಾಧೀನ: ನೈಜ ಸಾಗುವಳಿದಾರರಿಗೆ ಪರಿಹಾರಕ್ಕೆ ವಾರದ ಗಡುವು

ಮೈಸೂರು, ಜ.20(ಎಂಕೆ)– ನಂಜನಗೂಡು ತಾಲೂಕಿನ ಇಮ್ಮಾವು ಬಳಿ ಚಿತ್ರನಗರಿ ಸೇರಿದಂತೆ ಇನ್ನಿತರೆ ಕೈಗಾರಿಕಾ ಉದ್ದೇಶಕ್ಕಾಗಿ 589 ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿರುವ ಕೆಐ ಎಡಿಬಿ (ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾಸ್ ಡೆವಲಪ್ಮೆಂಟ್ ಬೋರ್ಡ್) ನಿಜವಾದ ಸಾಗುವಳಿದಾರರನ್ನು ನಿರ್ಲಕ್ಷಿಸಿದ್ದು, ಒಂದು ವಾರದೊಳಗೆ ಪರಿಹಾರ ಹಣ ನೀಡದಿದ್ದಲ್ಲಿ ಮೈಸೂರಿನ ಮೇಟಗಳ್ಳಿಯ ಕೆಐಎಡಿಬಿ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘದ ವಿಭಾಗೀಯ ಸಂಘಟನಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಭೂಸ್ವಾಧೀನ ಪಡಿಸಿಕೊಂಡ ಬಳಿಕ ಭೂಮಿ ಕಳೆದುಕೊಂಡ ಸಾಗುವಳಿದಾರರಿಗೆ ಪರಿಹಾರ ನೀಡಲು ಕೆಐಎಡಿಬಿ ಸುಮಾರು 18 ಕೋಟಿ ಮಂಜೂರು ಮಾಡಿತ್ತು. ಆದರೆ, ಈ ವೇಳೆ ರಾಜಕೀಯ ಉದ್ದೇಶಗಳಿಂದಾಗಿ ನಿಜವಾದ ಸಾಗುವಳಿದಾರರ ಬದಲು ತಾಲೂಕಿನಲ್ಲಿಯೇ ಇಲ್ಲದ ಕೆಲವರು ಸೇರಿದಂತೆ ಇತರರಿಗೆ ಪರಿಹಾರ ವಿತರಿಸಲಾಗಿದೆ. ಇದರ ವಿರುದ್ಧ ಹಲವು ಹೋರಾಟ ನಡೆಸಿದ್ದರಿಂದ ನಿಜವಾದ ರೈತರನ್ನು ಗುರುತಿಸಿ ಅವರಿಗೆ ಪರಿಹಾರ ವಿತರಿಸುವ ಹೊಣೆ ಕೆಲ ಅಧಿಕಾರಿಗಳಿಗೆ ವಹಿಸಲಾಗಿದೆ. ಆದರೆ, ಈವರೆಗೂ ಯಾವುದೇ ಬೆಳವಣಿಗೆಯಾಗಿಲ್ಲ ಎಂದರು.

ಹಾಗೆಯೇ ಮೈಸೂರು ತಾಲೂಕಿನ ಕೋಚನಹಳ್ಳಿಯಲ್ಲಿ ಗಾಲ್ಫ್ ಕ್ಲಬ್‌ಗಾಗಿ ಭೂಮಿ ವಶಪಡಿಸಿಕೊಂಡಿದ್ದು, ಅಲ್ಲಿಯೂ ನಿಯಮದಂತೆ ಪರಿಹಾರ ಪಾವತಿಸಿಲ್ಲ. ಈ ಬಗ್ಗೆ ಪ್ರತಿಭಟನೆ ನಡೆಸಿದ ಬಳಿಕ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆಯೇ ಹೊರತು ಬೇಡಿಕೆ ಈಡೇರಿಸಲು ಮುಂದಾಗಿಲ್ಲ ಆದ್ದರಿಂದ ನಿಯಮಾನುಸಾರ ಪರಿಹಾರ ನೀಡುವವರೆಗೂ ಧರಣಿ ನಡೆಸಲಾಗುವುದು ಎಂದರು. ಗೋಷ್ಠಿಯಲ್ಲಿ ಹೋರಾಟಗಾರ ಉಗ್ರ ನರಸಿಂಹೇಗೌಡ, ಮುಖಂಡರಾದ ಪಿ.ಮರಂಕಯ್ಯ, ಪ್ರೇಮ್ ರಾಜ್, ಕೋಚನಹಳ್ಳಿ ಮಹದೇವ್, ಶಿವಣ್ಣ ನಾಯಕ, ಶ್ರೀಕಂಠ, ಮಹೇಶ್ ಇದ್ದರು.

ಸ್ಥಳ ಬದಲಾವಣೆ ಆಗಲೇಬೇಕು

ನಿಮಾನ್ಸ್ ಮಾದರಿ ಆಸ್ಪತ್ರೆ ನಿರ್ಮಾಣಕ್ಕೆ ತಾಲೂಕಿನ ಗುಡಮಾದನಹಳ್ಳಿಯಲ್ಲಿ ಗುರ್ತಿಸಿರುವ 20 ಎಕರೆ ಸ್ಥಳ ಆಸ್ಪತ್ರೆ ನಿರ್ಮಾಣಕ್ಕೆ ಯೋಗ್ಯವಾಗಿಲ್ಲ. ಕೃಷಿ ಭೂಮಿಯಾಗಿದ್ದರಿಂದ ಭೂಮಿ ವಸ್ತಿಯಾಗಿದ್ದು, ಕಟ್ಟಡ ನಿರ್ಮಾಣಕ್ಕೆ ಬೇರೆ ಸ್ಥಳ ಗುರ್ತಿಸಬೇಕು. ಅದಾಗ್ಯೂ ಅಲ್ಲೇ ಆಸ್ಪತ್ರೆ ನಿರ್ಮಾಣಕ್ಕೆ ಮುಂದಾದರೆ, ಮಾನವೀಯತೆ ದೃಷ್ಟಿಯಿಂದ ಹಲವು ವರ್ಷದಿಂದ ಅದೇ ಭೂಮಿಯನ್ನು ನಂಬಿ ಸಾಗುವಳಿ ಮಾಡಿಕೊಂಡು ಬಂದಿರುವ ರೈತ ಕುಟುಂಬಗಳ ಒಕ್ಕಲೆಬ್ಬಿಸದೆ ಭೂ ಪರಿಹಾರ ಅಥವಾ ಕುಟುಂಬದಲ್ಲಿ ಒಬ್ಬರಿಗೆ ಕೆಲಸ ನೀಡುವ ಕ್ರಮ ಕೈಗೊಳ್ಳಬೇಕು.

–ಹೊಸಕೋಟೆ ಬಸವರಾಜು

ಬಿಜೆಪಿ ಸಂಸದರಿಂದ ರಾಜ್ಯಕ್ಕೆ ಅನ್ಯಾಯ

ಕೇಂದ್ರದ ಅನುದಾನ ತಾರತಮ್ಯಕ್ಕೆ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆಕ್ರೋಶ



ಕೆ.ವಿ.ಮಲ್ಲೇಶ್

ಮೈಸೂರು, ಜ. 20–ಕೇಂದ್ರ ಸರ್ಕಾರ ಅನುದಾನ ಹಂಚಿಕೆಯಲ್ಲಿ ಮಿತ್ರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಮತ್ತೆ ತನ್ನ ಹಳೇ ಚಾಳಿಯನ್ನು ಮುಂದುವರಿಸಿದೆ. ಎಂದಿನಂತೆ ಈ ಬಾರಿಯೂ ರಾಜ್ಯಕ್ಕೆ ಬಿಡಿಗಾಸು ನೀಡುವ ಮೂಲಕ ಮಲತಾಯಿ ಧೋರಣೆ ಅನುಸರಿಸುವ ಸಾಧ್ಯತೆ ಇದೆ ಎಂದು ಮಾಜಿ ಕಾರ್ಪೊರೇಟರ್ ಕೆ.ವಿ. ಮಲ್ಲೇಶ್ ಅನುಮಾನಿಸಿದ್ದಾರೆ.

ಕೇಂದ್ರದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ರಾಜ್ಯದ ವಿರುದ್ಧ ಮಲತಾಯಿ ಧೋರಣೆ ಅನುಸರಿಸುತ್ತಲೇ ಬಂದಿದೆ. ರಾಜ್ಯದಿಂದ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ಸ್ವೀಕರಿಸುವ ಕೇಂದ್ರ, ರಾಜ್ಯಕ್ಕೆ ನೀಡುವ ಅನುದಾನದಲ್ಲಿ ಮಾತ್ರ ತೀವ್ರ ತಾರತಮ್ಯ ಮಾಡುತ್ತಲೇ ಇದೆ. ಚುನಾವಣೆ ವೇಳೆ ಮಹಾ ಭರವಸೆ ನೀಡಿ ಮತ ಪಡೆಯುವ ಬಿಜೆಪಿ ಆ ನಂತರ ರಾಜ್ಯವನ್ನು ಮರೆಯುವ ಖಯ್ಯಾಲಿ ಬೆಳೆಸಿಕೊಂಡಿದೆ. ಆಡಳಿತದಲ್ಲಿನ ಮಿತ್ರರನ್ನು ಮೆಚ್ಚಿಸಲು ಮುಂದಾಗಿರುವ ಮೋದಿ ಅವರು, ನೆರೆ ರಾಜ್ಯ ಆಂಧ್ರ ಪ್ರದೇಶ ಮತ್ತು ಬಿಹಾರ ರಾಜ್ಯಗಳಿಗೆ ಭರಪೂರ ಅನುದಾನ ನೀಡುವ ಮೂಲಕ ಓಲೈಕೆ ರಾಜಕಾರಣಕ್ಕೆ ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ.

ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರದ ಹಪಾಹಪಿಯಿಂದ ಕರ್ನಾಟಕ ಸೇರಿದಂತೆ ದಕ್ಷಿಣದ ರಾಜ್ಯಗಳಿಗೆ ಅನುದಾನ ಹಂಚಿಕೆಯಲ್ಲಿ ಪದೇ ಪದೆ ಅನ್ಯಾಯವಾಗುತ್ತಲೇ ಇದೆ. ಸ್ಪಷ್ಟ ಬಹುಮತ ಬರದಿದ್ದರೂ ಯಾವಾಗಲೂ ಅಧಿಕಾರದಲ್ಲಿ ಇರಬೇಕು ಎನ್ನುವ ಉದ್ದೇಶದಿಂದ ಬಿಜೆಪಿ, ತನಗೆ ಬೆಂಬಲ ನೀಡಿದ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಅನುದಾನದ ಹೊಳೆ ಹರಿಸಲಾಗುತ್ತಿದೆ. ಇದರ ಜತೆಗೆ ತಮ್ಮ ಪೊಲಿಟಿಕಲ್ ಪಾರ್ಟ್ನರ್‌ಗಳನ್ನು ಓಲೈಸುವ ಮತ್ತು ಅವರ ನೆಲೆ ಗಟ್ಟಿಗೊಳಿಸುವ ಉದ್ದೇಶದಿಂದ ಆಂಧ್ರಪ್ರದೇಶದಂತಹ ರಾಜ್ಯಗಳಿಗೆ ಅನುದಾನ ನೀಡಲಾಗುತ್ತಿದೆ ಎಂದರು.

ಈ ಹಿಂದೆ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ, 25 ಸಂಸದರು ಬಿಜೆಪಿಯಿಂದ ಆಯ್ಕೆಯಾಗಿದ್ದಾಗಲೂ ರಾಜ್ಯಕ್ಕೆ ಅನ್ಯಾಯವಾಗಿತ್ತು. ಆ ವೇಳೆಯೂ ರಾಜ್ಯದ ಪಾಲು ನ್ಯಾಯಯುತವಾಗಿ ನಮಗೆ ಸಿಗಲಿಲ್ಲ. ಒಕ್ಕೂಟ ವ್ಯವಸ್ಥೆ ಬಲಗೊಳ್ಳಬೇಕಿದ್ದರೆ ಪ್ರತಿ ರಾಜ್ಯಕ್ಕೂ ಅದರ ಪಾಲನ್ನು ಸರ್ಕಾರ ಸರಿಯಾದ ಪ್ರಮಾಣದಲ್ಲಿ ಹಂಚಿಕೆ ಮಾಡಬೇಕು, ಆದ್ಯತೆ ನೀಡಬೇಕು. ಆದರೆ, ಕೇಂದ್ರದ ಪ್ರತಿ ನಡೆಯೂ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಮಲ್ಲೇಶ್ ದೂರಿದ್ದಾರೆ.

ಧ್ವನಿ ಸತ್ತ ಸಂಸದರು: ರಾಜ್ಯದಲ್ಲಿನ ಬಿಜೆಪಿಯ ಕೇಂದ್ರ ಸಚಿವರು, ಸಂಸದರು ಧ್ವನಿ ಸತ್ತವರಾಗಿದ್ದಾರೆ. ಮೇಲಿಂದ ಮೇಲೆ ರಾಜ್ಯಕ್ಕೆ ಅನುದಾನ ಹಂಚಿಕೆಯಲ್ಲಿ ಅನ್ಯಾಯವಾಗುತ್ತಿದ್ದರೂ ಆ ಬಗ್ಗೆ ತಮ್ಮದೇ ನಾಯಕರ ಬಳಿ ಕೇಳಲು ವಿಫಲರಾಗಿದ್ದಾರೆ ಎಂದು ಆರೋಪಿಸಿದ್ದಾರೆ.

ಮಾ.14ರಂದು ಮೈಸೂರು ಜಿಲ್ಲೆಯಲ್ಲಿ ರಾಷ್ಟ್ರೀಯ, ಮೆಗಾ ಲೋಕ್ ಅದಾಲತ್

ಮೈಸೂರು: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಮಾ.14ರಂದು ಮೈಸೂರು ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ರಾಷ್ಟ್ರೀಯ/ಮೆಗಾ ಲೋಕ್ ಅದಾಲತ್ ಆಯೋಜಿಸಲಾಗಿದೆ.

ಅದಾಲತ್‌ನಲ್ಲಿ ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಕಾರ್ಮಿಕ ವಿವಾದಗಳು, ಉದ್ಯೋಗದಲ್ಲಿ ಪುನರ್ ಸ್ಥಾಪನೆ ಸಂಬಂಧಿಸಿದ ಪ್ರಕರಣಗಳು, ವಿದ್ಯುತ್ ಹಾಗೂ ನೀರಿನ ಶುಲ್ಕ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನ ಸಂಬಂಧಿತ ಪ್ರಕರಣಗಳು, ಭೂಸ್ವಾಧೀನ ಪ್ರಕರಣಗಳು, ಜಿಲ್ಲಾ ಗ್ರಾಹಕ ವ್ಯಾಜ್ಯಗಳು, ವೇತನ ಭತ್ಯೆ ಹಾಗೂ ಸೇವಾ ಪಿಂಚಣಿ ಪ್ರಕರಣಗಳು, ಖಾಯಂ ಜನತಾ ನ್ಯಾಯಾಲಯದ ಪ್ರಕರಣಗಳು, ಸಾರ್ವಜನಿಕ ಉಪಯುಕ್ತತೆ ಸೇವೆಗಳ ವ್ಯಾಜ್ಯಗಳು, ರಾಜಿಯಾಗಬಲ್ಲ ಸಿವಿಲ್ ಮತ್ತು ಇತರೆ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದು. ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ National Helpline 15100 ಹಾಗೂ ತಾಲೂಕುಗಳಿಗೆ ಸಂಬಂಧಿಸಿದಂತೆ ಕಾನೂನು ಸೇವಾ ಸಮಿತಿಗಳನ್ನು ನೇರವಾಗಿ ಸಂಪರ್ಕಿಸಿ.

ಚುನಾವಣೆ ಹತ್ತಿರ ಬಂದಾಗಲೇ ಜಿ.ಟಿ.ದೇವೇಗೌಡರಿಗೆ ಜೆಡಿಎಸ್ ನೆನಪಾಗುತ್ತಾ...!

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಲೇವಡಿ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಂಗಳವಾರ ಪತ್ರಿಕಾಗೋಷ್ಠಿ ನಡೆಸಿದರು.

ಮೈಸೂರು, ಜ.20(ಎಂಕೆ)– ನಾನು ಜೆಡಿಎಸ್‌ನಲ್ಲಿದ್ದೇನೆ... ಜೆಡಿಎಸ್‌ನಿಂದಲೇ ಮುಂದಿನ ಚುನಾವಣೆಗೆ ಸ್ಪರ್ಧಿಸುತ್ತೇನೆ ಎಂದೇಳುವ ಶಾಸಕ ಜಿ.ಟಿ.ದೇವೇಗೌಡರ ಹೇಳಿಕೆ ಹಾಸ್ಯಾಸ್ಪದವಾಗಿದ್ದು, ಅವರಿಗೆ ಚುನಾವಣೆ ಹತ್ತಿರ ಬಂದಾಗಲೇ ಜೆಡಿಎಸ್ ನೆನಪಾಗುವುದು. ಜೆಡಿಎಸ್ ಪಕ್ಷದ ವರಿಷ್ಠರ ಮೇಲೆ ಗೌರವ ಬರುವುದು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಇಂದಿಲ್ಲಿ ಲೇವಡಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಜಯಗಳಿಸಿದ ಜಿ.ಟಿ.ದೇವೇಗೌಡರು, ಸಾರ್ವಜನಿಕ ವೇದಿಕೆಗಳಲ್ಲಿ ಪಕ್ಷ ವಿರೋಧಿ ಹೇಳಿಕೆಗಳನ್ನು ನೀಡುತ್ತಾ, ಪಕ್ಷ ವಿರೋಧಿ ಚಟುವಟಿಕೆಗಳ ಮೂಲಕ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ದೂರಿದರು.

ಪಕ್ಷ ವಿರೋಧಿ ಚಟುವಟಿಕೆಗಳನ್ನು ಮಾಡಿಲ್ಲ ಎನ್ನುವ ಜಿ.ಟಿ.ದೇವೇಗೌಡರು, ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಹೆಚ್.ಕೆ.ರಾಮು ವಿರುದ್ಧ ಅಪಪ್ರಚಾರ ಮಾಡಿ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ಅವರಿಗೆ ಬೆಂಬಲ ಸೂಚಿಸಿದ್ದರು. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾದ ನನ್ನ ಪ್ರತಿಸ್ಪರ್ಧಿ ಬಿಜೆಪಿಯ ರಘು ಕೌಟಿಲ್ಯ ಅವರಿಗೆ ಬಹಿರಂಗವಾಗಿ ಬೆಂಬಲ ನೀಡಿದ್ದು ಪಕ್ಷ ವಿರೋಧಿ ಚಟುವಟಿಕೆಯಲ್ಲವೇ? ಎಂದು ಪ್ರಶ್ನಿಸಿದರು.

ಹಾಗೆಯೇ 2020ರ ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಲಕ್ಷ್ಮಣ ಸವದಿ ಅವರಿಗೆ ಮತ ನೀಡಿದ್ದು, ಹುಣಸೂರು ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಹೆಚ್.ಪಿ.ಮಂಜುನಾಥ್‌ಗೆ ಬೆಂಬಲ ನೀಡಿ ಜೆಡಿಎಸ್ ಅಭ್ಯರ್ಥಿ ದೇವರಳ್ಳಿ ಸೋಮಶೇಖರ್ ಅವರನ್ನು ಸೋಲಿಸಿದ್ದು. ಕೆ.ಆರ್.ನಗರದಲ್ಲಿ ಸಾ.ರಾ. ಮಹೇಶ್ ಅವರ ಶಕ್ತಿ ಕುಗ್ಗಿಸಲು ಕಾರ್ಯಕರ್ತನೊಬ್ಬನನ್ನು ಜಿಪಂ ಸದಸ್ಯನಾಗಿ ಗುರ್ತಿಸಿ, ನಂತರ ಆತನನ್ನು ಮುಡಾ ಅಧ್ಯಕ್ಷನನ್ನಾಗಿ ಮಾಡಿ ಮೆರವಣಿಗೆ ಮಾಡಿದ್ದಲ್ಲದೆ ಸಾ.ರಾ.ಮಹೇಶ್ ಅವರ ವಿರುದ್ಧ ಕೆಲಸ ಮಾಡಲು ಸೂಚಿಸಿದ್ದು ಹಾಗೂ ಎಂಸಿಡಿಸಿಸಿ ಚುನಾವಣೆಯಲ್ಲಿ ಹರದನಹಳ್ಳಿ ಸೊಸೈಟಿ ಪ್ರತಿನಿಧಿಯಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಡಿಸಿದ್ದು ಪಕ್ಷದ್ರೋಹವಲ್ಲವೇ ಎಂದು ಕಿಡಿಕಾರಿದರು.

ಸಾ.ರಾ.ಮಹೇಶ್‌ಗೆ ಶೇ.70ರಷ್ಟು ಬೆಂಬಲ...!

“ ಚಾಮುಂಡೇಶ್ವರಿ ಕ್ಷೇತ್ರಕ್ಕೆ ಜೆಡಿಎಸ್ ಅಭ್ಯರ್ಥಿಯಾಗಿ ಸಾ.ರಾ.ಮಹೇಶ್ ಅವರನ್ನು ಘೋಷಣೆ ಮಾಡಬೇಕು ಎಂದು ನಾವೆಲ್ಲರೂ ಒತ್ತಾಯ ಮಾಡಿದ್ದೇವೆ. ಪಕ್ಷದಲ್ಲಿಯೂ ಶೇ.70 ರಷ್ಟು ಬೆಂಬಲ ದೊರೆತಿದೆ. ಮಾವಿನಹಳ್ಳಿ ಸಿದ್ದೇಗೌಡರನ್ನು ಭೇಟಿ ಮಾಡಿ ಬೆಂಬಲ ಕೇಳಿದ್ದು, ಸಾ.ರಾ.ಮಹೇಶ್ ಅವರು ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿಯಾದಲ್ಲಿ ವಾಪಸ್ ಪಕ್ಷಕ್ಕೆ ಬರುವುದಾಗಿ ಹೇಳಿದ್ದಾರೆ. ನಿಖಿಲ್ ಕುಮಾರಸ್ವಾಮಿ ಹೆಸರು ಪ್ರಸ್ತಾಪವಾಗಿಲ್ಲ. ಆಕಸ್ಮಾತ್ ಪಕ್ಷದ ವರಿಷ್ಠರು ಮತ್ತು ಸಾ.ರಾ.ಮಹೇಶ್ ಅವರು ಸೇರಿದಂತೆ ಎಲ್ಲರೂ ಒಮ್ಮತದಿಂದ ನನಗೆ ಅವಕಾಶ ನೀಡಿದರೆ ಚಾಮುಂಡೇಶ್ವರಿಯಿಂದ ಸ್ಪರ್ಧಿಸಲು ಸಿದ್ದನಿದ್ದೇನೆ.

–ಸಿ.ಎನ್.ಮಂಜೇಗೌಡ, ವಿಧಾನಪರಿಷತ್ ಸದಸ್ಯ

ದಸರಾ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾಕೆ ರಾಜೀನಾಮೆ ಕೊಡಬೇಕು. ಕುಮಾರಸ್ವಾಮಿ ಅವರು ರಾಜೀನಾಮೆ ಕೊಡುತ್ತಾರಾ ಎಂದು ಸಮರ್ಥಿಸಿಕೊಂಡಿದ್ದು. ಕೋರ್ ಕಮಿಟಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಪಕ್ಷ ಸಂಘಟಿಸದೆ ತಟಸ್ಥವಾಗಿದ್ದು, ಪಕ್ಷದ ಎಲ್ಲಾ ಸಭೆ–ಸಮಾರಂಭಗಳಿಂದ ದೂರ ಉಳಿದದ್ದು, ಇಲ್ಲಸಲ್ಲದ ನೆಪ ಹೇಳಿ ನಿಖಿಲ್ ಕುಮಾರಸ್ವಾಮಿ ಅವರ ಚುನಾವಣಾ ಪ್ರಚಾರದಲ್ಲಿ ಭಾಗವಹಿಸದಿರುವುದು ಪಕ್ಷ ವಿರೋಧಿ ಚಟುವಟಿಕೆಯಲ್ಲವೇ?

ಸ್ವಂತ ವರ್ಚಸ್ಸು ಅಲ್ಲ... ಪಕ್ಷದಿಂದ ಗೆದ್ದಿದ್ದು: ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸೋಲಿಸಿದ್ದೇನೆ ಎಂದೇಳುವ ಜಿ.ಟಿ.ದೇವೇಗೌಡರು ಗೆದ್ದಿದ್ದು ಪಕ್ಷದಿಂದಲೇ ಹೊರತು ಸ್ವಂತ ವರ್ಚಸ್ಸಿನಿಂದಲ್ಲ. ಅಷ್ಟೊಂದು ಶಕ್ತಿ ಇದ್ದರೆ ಪಕ್ಷ ಬಿಟ್ಟು ಸ್ಪರ್ಧಿಸಲಿ ನೋಡೋಣ ಎಂದು ಸವಾಲು ಹಾಕಿದರಲ್ಲದೆ ಕಾಂಗ್ರೆಸ್‌ನಲ್ಲಿದ್ದ ನನ್ನನ್ನು ಕರೆದುಕೊಂಡು ಬಂದು ಕೇವಲ 15 ದಿನದಲ್ಲಿ ಎಂಎಲ್‌ಸಿ ಮಾಡಿದ್ದು ಜೆಡಿಎಸ್. ಹಾಗಾಗಿ ಪಕ್ಷದ ವರ್ಚಸ್ಸು ದೊಡ್ಡದ್ದೇ ಹೊರತು ಜಿ.ಟಿ. ದೇವೇಗೌಡರ ವರ್ಚಸ್ಸು ಏನೂ ಇಲ್ಲ ಎಂದರು. ಗೋಷ್ಠಿಯಲ್ಲಿ ಮುಖಂಡರಾದ ದಿನೇಶ್, ಪ್ರಕಾಶ್, ಧರ್ಮರಾಜ್, ನಯಾಜ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಪ್ರತಿ ಹಳ್ಳಿಯಲ್ಲೂ ನರೇಗಾ ಬಚಾವೋ ಹೋರಾಟ ನಡೆಸಿ

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕರೆ

ಮಂಡ್ಯ, ಜ.20– ಪ್ರತಿ ಹಳ್ಳಿ ಹಳ್ಳಿಯಲ್ಲೂ ನರೇಗಾ ಬಚಾವೋ ಹೋರಾಟ ನಡೆಸಿ. ವಿಬಿ ಜಿ ರಾಮ್ ಜಿ ಯೋಜನೆಯಿಂದಾಗುವ ಅನ್ಯಾಯಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದರ ಜೊತೆಗೆ ಈ ಕಾಯ್ದೆಗೆ ಬೆಂಬಲವಾಗಿ ನಿಂತಿರುವ ಜೆಡಿಎಸ್ ಅನ್ನು ಸಹ ಕಿತ್ತೊಗೆಯಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕರೆ ನೀಡಿದರು.

ನಗರದ ಸಿಲ್ವರ್ ಜ್ಯೂಬಿಲಿ ಉದ್ಯಾನದಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಸಮಿತಿಯಿಂದ ಏರ್ಪಡಿಸಿದ್ದ ಯುವ ಸಮ್ಮೇಳನ ಉದ್ಘಾಟಿಸಿ, ಮನ್ರೇಗಾ ಬಚಾವೋ ಸಂಗ್ರಾಮ್ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವಿಬಿ ಜಿ ರಾಮ್ ಜಿಯಿಂದ ಕೂಲಿಕಾರರಿಗೆ ಅನ್ಯಾಯವಾಗುತ್ತಿರುವುದು ಗೊತ್ತಿದ್ದರೂ ಎನ್‌ಡಿಎ ಮೈತ್ರಿ ಕೂಟದಲ್ಲಿ ಕೇಂದ್ರ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಯೋಜನೆ ಸಮರ್ಥಿಸಿಕೊಳ್ಳುವ ಮೂಲಕ ಮೌನ ವಹಿಸಿದ್ದಾರೆ ಎಂದು ಛೇಡಿಸಿದರು.

ಎನ್‌ಡಿಎ ಜೊತೆ ಜೆಡಿಎಸ್‌ನವರು ಹೋಗದಿದ್ದರೆ ಈ ನೂತನ ಕಾಯ್ದೆ ವಿರುದ್ಧ ಮೊದಲು ಬೀದಿಗಿಳಿಯುತ್ತಿದ್ದರು. ಆದರೆ ಅವರಿಗೆ ಕೇಂದ್ರ ಸಚಿವ ಸ್ಥಾನ ಕೊಟ್ಟಿರುವುದರಿಂದ ಸಮರ್ಥನೆ ಮಾಡಿಕೊಳ್ಳುತ್ತಿದ್ದಾರೆ. ಅಧಿಕಾರಕ್ಕಾಗಿ ಯಾರ ಜೊತೆಗಾದರೂ ಕೈಜೋಡಿಸುವ ಇಂತಹವರಿಂದ ಜಿಲ್ಲೆಯ ಅಭಿವೃದ್ಧಿ ಸಾಧ್ಯವಿಲ್ಲ ಎಂದರು.

ಕಳೆದ 11 ವರ್ಷದಿಂದ ದೇಶದ ಪ್ರಧಾನಿಯಾಗಿರುವ ನರೇಂದ್ರ ಮೋದಿ ಅವರು 8 ಸಾವಿರ ಕೋಟಿ ರೂ. ವೆಚ್ಚದಲ್ಲಿ ವಿಮಾನದಲ್ಲಿ ಇಡೀ ಪ್ರಪಂಚ ಸುತ್ತಾಡಿರುವುದು ಮತ್ತು 56 ಲಕ್ಷ ಕೋಟಿ ರೂ.ಗಳಿದ್ದ ಸಾಲವನ್ನು 3 ಲಕ್ಷ ಕೋಟಿ ರೂ.ಗೆ ಹೆಚ್ಚಳ ಮಾಡಿರುವುದೇ ಮಹಾನ್ ಸಾಧನೆಯಾಗಿದೆ ಎಂದು ಲೇವಡಿ ಮಾಡಿದರು.

ಪೆಟ್ರೋಲ್, ಡೀಸೆಲ್, ಗ್ಯಾಸ್ ಸಿಲಿಂಡರ್ ಬೆಲೆ ಹೆಚ್ಚಿಸಿದ್ದಾರೆ. ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುತ್ತಿದ್ದಾರೆಯೇ ಹೊರತು ಯಾವುದೇ ಅಭಿವೃದ್ಧಿ ಕೆಲಸ ಮಾಡುತ್ತಿಲ್ಲ. ಬ್ರಿಟಿಷರಿಗಿಂತ ಅತ್ಯಂತ ಕೆಟ್ಟ ಆಡಳಿತ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು. ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮನರೇಗಾ ಯೋಜನೆ ಕೇಂದ್ರೀಕೃತಗೊಳಿಸಿ, ಮಹಾತ್ಮ ಗಾಂಧೀಜಿ ಅವರ ಹೆಸರನ್ನು ಅಳಿಸಲು ಹೊರಟಿದೆ. ಕಾರ್ಮಿಕರ ಘನತೆ, ಗ್ರಾಮ ಸ್ವರಾಜ್ಯ ಮತ್ತು ರಾಷ್ಟ್ರದ ನೈತಿಕ ಜವಾಬ್ದಾರಿ ನಾಶ ಪಡಿಸಿದೆ. ಈ ಕಾಯ್ದೆ ಹಿಂಪಡೆಯಬೇಕು ಮತ್ತು ಮೂಲ ಮನರೇಗಾ ಕಾಯ್ದೆ ಮರಳಿ ಜಾರಿಗೊಳಿಸುವವರೆಗೂ ಹೋರಾಟ ನಡೆಸಲಾಗುವುದು ಎಂದರು.



ಕಾರ್ಯಕ್ರಮವನ್ನು ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಕೇಂದ್ರ ಸರ್ಕಾರ ಮನ್ರೇಗಾ ಕಾಯ್ದೆ ವಾಪಸ್ ಪಡೆಯುವ ಮೂಲಕ ಗ್ರಾಮೀಣ ಜನರ ಉದ್ಯೋಗದ ಹಕ್ಕನ್ನು ಕಿತ್ತುಕೊಳ್ಳುವ ಕೆಲಸ ಮಾಡಿದೆ. ಮನ್ರೇಗಾ ಮೂಲಕ ಗ್ರಾಪಂಗಳಲ್ಲಿ ಆಸ್ತಿ ನಿರ್ಮಾಣವಾಗುತ್ತಿತ್ತು. ಗ್ರಾಮಗಳಲ್ಲಿ ಯಾವ ಕೆಲಸವಾಗಬೇಕೆಂದು ತೀರ್ಮಾನಿಸುವ ಅಧಿಕಾರ ಪಂಚಾಯಿತಿಗಳಿಗಿತ್ತು. ಈಗ ಅದನ್ನು ಸಂಪೂರ್ಣವಾಗಿ ಕಿತ್ತುಕೊಂಡು ಕೆಲಸ ಎಲ್ಲಿ ಆಗಬೇಕು ಎಂದು ಕೇಂದ್ರ ಸರ್ಕಾರ ನಿರ್ದೇಶನ ನೀಡಲಿದೆ. ಮೇಲ್ನೋಟಕ್ಕೆ 125 ದಿನ ಕೆಲಸ ನೀಡುವುದು ಎಂದಿದ್ದರೂ, ಕೆಲಸ ಸಿಗುವುದೇ ಅನುಮಾನ ಎಂದರು.

ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಶೇ.50ರಷ್ಟು ಯುವಜನತೆಗೆ ಅವಕಾಶ ನೀಡಲಾಗುವುದು. ಅದಕ್ಕೂ ಮುನ್ನ ತಮ್ಮ ಸಾಮರ್ಥ್ಯ ತೋರಿಸಬೇಕು. ಆಗ ನಾವೇ ಗುರುತಿಸಿ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಅವಕಾಶ ನೀಡಲಾಗುವುದು ಎಂದರು.

> ಕೇಂದ್ರ ಸರ್ಕಾರ ಕೋಟ್ಯಾಂತರ ಕೂಲಿಕಾರರ ಜೀವನಕ್ಕೆ ಆಸರೆಯಾಗಿದ್ದ ಮನ್ರೇಗಾ ಯೋಜನೆ ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೆ ತರುವ ಮೂಲಕ ಬಡವರಿಗೆ ಕೂಲಿ ಕೊಡದೆ ಬೀದಿಗೆ ತಳ್ಳಿದೆ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಗಾಂಧೀಜಿ ಅವರ ಹೆಸರನ್ನು ಅಳಿಸಿ ಹಾಕಿ ವಿಬಿ ಜಿ ರಾಮ್ ಜಿ ಎಂಬ ಹೆಸರಿನಲ್ಲಿ ಕೂಲಿಕಾರರ ಹೊಟ್ಟೆ ಮೇಲೆ ಹೊಡೆಯಲಾಗಿದೆ. ಇದರ ವಿರುದ್ಧ ಹೋರಾಟ ಅನಿವಾರ್ಯವಾಗಿದ್ದು, ಪ್ರತಿ ಹಳ್ಳಿ ಹಳ್ಳಿಯಲ್ಲೂ ಹೋರಾಟ ನಡೆಸಬೇಕು. - ಪಿ.ರವಿಕುಮಾರ್, ಶಾಸಕ.

ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್‌ಗೌಡ ಮಾತನಾಡಿ, ಕೇಂದ್ರ ಸರ್ಕಾರದಲ್ಲಿ ಪ್ರಮುಖ ನಾಯಕರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಸಚಿವರಾಗಿದ್ದರೂ ಬಡವರ ಪರ ಮತ್ತು ಮಂಡ್ಯ ಜಿಲ್ಲೆಯ ಅಭಿವೃದ್ಧಿ ಪರ ತುಟಿ ಬಿಚ್ಚುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಂಡ್ಯ ಜಿಲ್ಲೆ ಮಣ್ಣಿನಲ್ಲಿ ಹೋರಾಟದ ಗುಣ ಇದೆ. ಮಂಡ್ಯದಲ್ಲಿ ಕ್ರಾಂತಿಯಾದರೆ ಇಡೀ ರಾಷ್ಟ್ರದಲ್ಲೇ ಕ್ರಾಂತಿ ಆಗುತ್ತದೆ. ಬಿಜೆಪಿಯವರು ಧರ್ಮ ಧರ್ಮಗಳ ನಡುವೆ ಬೆಂಕಿ ಹಚ್ಚಿದರೆ ಜೆಡಿಎಸ್ ನಾಯಕರು ಗ್ರಾಮ ಗ್ರಾಮಗಳ ನಡುವೆ ಬೆಂಕಿ ಹಚ್ಚುತ್ತಿದ್ದಾರೆ ಎಂದು ಆರೋಪಿಸಿದರು.

ವೇದಿಕೆಯಲ್ಲಿ ಶಾಸಕ ಕೆ.ಎಂ.ಉದಯ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ, ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯಸ್ವಾಮಿ, ಉಪಾಧ್ಯಕ್ಷ ಚಲುವರಾಜು, ಮನ್‌ಮುಲ್ ನಿರ್ದೇಶಕ, ಮಾಜಿ ಶಾಸಕ ಅಪ್ಪಾಜಿಗೌಡ, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಯುವ ಕಾಂಗ್ರೆಸ್ ಉಸ್ತುವಾರಿ ನಿಗಮ್ ಭಂಡಾರಿ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಶೈಲೇಂದ್ರ ಕುಮಾರ್, ಕಾಂಗ್ರೆಸ್ ಮುಖಂಡ ರಾದ ಆರ್.ವಿ.ದೇವರಾಜು, ಸತೀಶ್ ಸಿದ್ಧಾರೂಢ, ಅಂಜನಾ ಶ್ರೀಕಾಂತ್, ಸಿ.ಎಂ. ದ್ಯಾವಪ್ಪ ಇತರರು ಉಪಸ್ಥಿತರಿದ್ದರು.

ಜ.23, ಆನಂದಾಳ್ವಾರ್ ಪ್ರೌಢಶಾಲೆ ಸುವರ್ಣ ಮಹೋತ್ಸವ



ಸುದ್ದಿಗೋಷ್ಠಿಯಲ್ಲಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಗಿರಿಸ್ವಾಮಿ ಮಾತನಾಡಿದರು.

ಮಂಡ್ಯ, ಜ.20– ಆನಂದ ಶಿಕ್ಷಣ ಸಂಸ್ಥೆ, ಎಂ.ಕೆ.ಆನಂದಾಳ್ವಾರ್ ಪ್ರೌಢಶಾಲೆ, ಸುವರ್ಣ ಮಹೋತ್ಸವ ಸಮಿತಿ ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಎಂ.ಕೆ.ಆನಂದಾಳ್ವಾರ್ ಪ್ರೌಢಶಾಲೆ ಸುವರ್ಣ ಮಹೋತ್ಸವ ಸಮಾರಂಭ ಜ.23ರಂದು ಬೆಳಗ್ಗೆ 11 ಗಂಟೆಗೆ ಶಾಲಾವರಣದಲ್ಲಿ ಆಯೋಜಿಸಲಾಗಿದೆ ಎಂದು ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಗಿರಿಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರನಾಥ ಸ್ವಾಮೀಜಿ ಕಾರ್ಯಕ್ರಮದ ಸಾನಿಧ್ಯ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಲಿದ್ದು, ಶಾಸಕ ಎ.ಬಿ.ರಮೇಶ್ ಬಾಬು ಸ್ವರ್ಣಾನಂದ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು. ನಿವೃತ್ತ ನ್ಯಾ. ಹೆಚ್.ಎನ್.ನಾಗಮೋಹನ್‌ದಾಸ್ ಆಶಯ ಭಾಷಣ ಮಾಡಲಿದ್ದು, ಸಂಸ್ಥೆ ಅಧ್ಯಕ್ಷ ಡಾ. ಗಿರಿಸ್ವಾಮಿ ಅಧ್ಯಕ್ಷತೆ ವಹಿಸುವರು ಎಂದರು.

ಎಂಎಲ್‌ಸಿಗಳಾದ ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ಮಾಜಿ ಶಾಸಕರಾದ ಮರಿತಿಬ್ಬೇಗೌಡ, ಬಿ.ರಾಮಕೃಷ್ಣ, ಅಧಿಕಾರಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸುವರು. ಮಧ್ಯಾಹ್ನ 2 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸಮಾರೋಪ ಭಾಷಣ ಮಾಡುವರು. ಸಾಹಿತಿ ಹಾಗೂ ವಿಶ್ರಾಂತ ಪ್ರಾಚಾರ್ಯ ಡಾ.ಮ.ರಾಮಕೃಷ್ಣ ಆಶಯ ಭಾಷಣ ಮಾಡುವರು. ಸಂಸ್ಥೆ ಅಧ್ಯಕ್ಷ ಡಾ.ಗಿರಿ ಸ್ವಾಮಿ ಅಧ್ಯಕ್ಷತೆ ವಹಿಸುವರು. ಶಾಸಕ ಕೆ.ವಿವೇಕಾನಂದ, ಮಾಜಿ ಶಾಸಕರಾದ ಎ.ಎಸ್. ರವೀಂದ್ರ ಶ್ರೀಕಂಠಯ್ಯ, ಕೆ.ಟಿ.ಶ್ರೀಕಂಠೇಗೌಡ, ಇಸ್ಕಾನ್‌ನ ಮಹೋತ್ಸಾಹ ಚೈತನ್ಯದಾಸ್, ಗಣಪತಿದಾಸ್ ಸೇರಿದಂತೆ ಹಲವು ಗಣ್ಯರು ಭಾಗವಹಿಸುವರು ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಸಂಸ್ಥೆ ಖಜಾಂಚಿ ಎ.ಪಿ. ಸ್ವಾಮಿಗೌಡ, ನಿರ್ದೇಶಕರಾದ ಕೆಪುಟ್ಟ ಸ್ವಾಮಿ, ಬಸವರಾಜು, ಎ.ಜಿ.ದಶರಥ ಇದ್ದರು.

ಶಾಸಕರು ಉದ್ಧಟತನ ಬಿಟ್ಟು ಕ್ಷೇತ್ರ ಅಭಿವೃದ್ಧಿಪಡಿಸಲಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕಿವಿಮಾತು



ಚಿನಕುರಳಿ, ಜ.20– ಕ್ಷೇತ್ರದಲ್ಲಿ 3 ಬಾರಿ ಶಾಸಕನಾಗಿ ಮೇಲುಕೋಟೆ ವಿಧಾನಸಭಾ ಕ್ಷೇತ್ರವನ್ನು ಮಾದರಿಯಾಗಿ ಅಭಿವೃದ್ಧಿಗೊಳಿಸಿದ್ದೇನೆ. ಹೀಗಾಗಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಉದ್ಧಟತನ ಬದಿಗೊತ್ತಿ, ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಕಿವಿಮಾತು ಹೇಳಿದರು.

ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕನಗನಹಳ್ಳಿ ಗ್ರಾಮದ ಸರ್ಕಾರಿ ಗೋಮಾಳ 14 ಎಕರೆ ಜಮೀನನ್ನು ಆಂಧ್ರ ಮೂಲದ ಖಾಸಗಿ ವ್ಯಕ್ತಿಗೆ 30 ವರ್ಷಕ್ಕೆ ಗುತ್ತಿಗೆ ನೀಡಿ ಸೋಲಾರ್ ಪವರ್ ಪ್ಲಾಂಟ್‌ನಿಂದ ಕೇವಲ 4.5 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವ ಜೊತೆಗೆ, ಇಲ್ಲಿ ಉತ್ಪಾದನೆಯಾಗುವ ವಿದ್ಯುತ್ ಅನ್ನು ಚಿನಕುರಳಿ ಸಬ್‌ಸ್ಟೇಷನ್‌ಗೆ ತರಲು ಪ್ರತ್ಯೇಕ ಲೈನ್ ಅಳವಡಿಸುವ ವೇಳೆ ಹಲವು ರೈತರ ಜಮೀನು ಮತ್ತು ತೋಟದ ಬೆಳೆ ನಾಶವಾಗ ಲಿದೆ. ಆ ಮೂಲಕ ರೈತರಿಗೆ ಅನಾನುಕೂಲ ಉಂಟು ಮಾಡಿ ಆಂಧ್ರ ಮೂಲದ ವ್ಯಕ್ತಿಗೆ ದುಡ್ಡು ಮಾಡಿಕೊಡಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ನಾನು ಶಾಸಕನಾಗಿದ್ದ ವೇಳೆ ಉಯ್ಗೋನಹಳ್ಳಿ ಪವರ್ ಸ್ಟೇಷನ್‌ನಿಂದ ಚಿನಕುರಳಿ ಪವರ್ ಸ್ಟೇಷನ್‌ಗೆ ಪ್ರತ್ಯೇಕ ಎಕ್ಸ್‌ಪ್ರೆಸ್ ವಿದ್ಯುತ್ ಲೈನ್ ಕಾಮಗಾರಿ ಮಾಡಲಾಗಿದೆ. ಈ ಲೈನ್ ಮೂಲಕ ಈ ಭಾಗದ ರೈತರಿಗೆ ಹಗಲು ವೇಳೆ ಉತ್ತಮ ವಿದ್ಯುತ್ ನೀಡಲು ಶಾಸಕರು ಮುಂದಾಗಬೇಕು. ರೈತಾಪಿ ವರ್ಗಕ್ಕೆ ಮಾರಕವಾಗಿರುವ ಸೋಲಾರ್ ಪವರ್ ಪ್ಲಾಂಟ್ ಯೋಜನೆ ಕೈಬಿಡಬೇಕು ಎಂದು ಒತ್ತಾಯಿಸಿದರು. ನಾನು ಶಾಸಕನಾಗಿದ್ದ ವೇಳೆ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಂಡರೂ, ಸ್ಥಳೀಯರೊಂದಿಗೆ ಚರ್ಚಿಸಿ, ತೀರ್ಮಾನಿಸಿ ಚಾಲನೆ ನೀಡುತ್ತಿದ್ದೆ. ನಾನು ಶಾಸಕನಾಗುವವರೆಗೆ ಕ್ಷೇತ್ರದಲ್ಲಿ ಇದದ್ದು ಕೇವಲ ಒಂದೇ ಒಂದು ವಿದ್ಯುತ್ ಸಬ್ ಸ್ಟೇಷನ್. ನಾನು ಶಾಸಕನಾದ ಬಳಿಕ ನನ್ನ ರೈತರು ನೆಮ್ಮದಿಯಿಂದ ಬೆಳೆ ಬೆಳೆಯ ಬೇಕೆಂದು ಹೋಬಳಿಗೆ 3 ವಿದ್ಯುತ್ ಸಬ್‌ಸ್ಟೇಷನ್ ಮಂಜೂರು ಮಾಡಿಸಿ ಸಮರ್ಪಕ ವಿದ್ಯುತ್ ಪೂರೈಕೆ ಮಾಡುವ ಕೆಲಸ ಮಾಡಿದ್ದೇನೆ. ನಮಗೆ ಸೋಲಾರ್ ಪ್ಲಾಂಟ್ ಅವಶ್ಯಕತೆ ಇಲ್ಲ. ಶಾಸಕರು ಬೇಕಾದರೆ ಬೇರೆಡೆಗೆ ವರ್ಗಾಯಿಸಿ ರೈತರಿಗೆ ಅನಾನುಕೂಲ ವಾಗದ ಸೂಕ್ತ ಸ್ಥಳದಲ್ಲಿ ನಿರ್ಮಿಸಲಿ. ನನ್ನ ಅವಧಿಯಲ್ಲಿ ಕ್ಯಾತನಹಳ್ಳಿ ಗ್ರಾಮಕ್ಕೆ ವಿದ್ಯುತ್ ಸಬ್ ಸ್ಟೇಷನ್ ಮಂಜೂರು ಮಾಡಿಸಿದ್ದೇನೆ. ಆದರೆ ಇಲ್ಲಿವರೆಗೂ ಅದಕ್ಕೆ ಜಾಗ ಮಂಜೂರು ಮಾಡಿಸಿಕೊಡಲು ಶಾಸಕರಾಗಿದ್ದ ಕೆ.ಎಸ್.ಪುಟ್ಟಣ್ಣಯ್ಯ ಅವರ ಕೈಯಲ್ಲೂ ಸಾಧ್ಯವಾಗಲಿಲ್ಲ. ಈಗಿನ ಶಾಸಕರಿಗೂ ಸಾಧ್ಯವಾಗಿಲ್ಲ. ಮೊದಲು ಕ್ಯಾತನಹಳ್ಳಿ ವಿದ್ಯುತ್ ಸಬ್‌ಸ್ಟೇಷನ್‌ಗೆ ಸ್ಥಳ ಮಂಜೂರು ಮಾಡಿಸಿಕೊಡುವ ಕೆಲಸ ಮಾಡಲಿ ಎಂದು ಸಲಹೆ ನೀಡಿದರು.

ತಾಲೂಕಿನ ಸುಪುತ್ರ ಎಸ್.ಆರ್.ಉಮಾಶಂಕರ್ ಅವರು ಗೃಹ ಇಲಾಖೆಯಲ್ಲಿ ಜವಾಬ್ದಾರಿ ಹೊತ್ತು ಕೆಲಸ ಮಾಡುವ ಸಂದರ್ಭ ಚಿನಕುರಳಿ ಗ್ರಾಮದ ಉಪಠಾಣೆ ಮೇಲ್ದರ್ಜೆಗೇರಿಸಿ, ಪೊಲೀಸ್ ಠಾಣೆ ಮಂಜೂರು ಮಾಡಿಸಿದ್ದರು. ಆದರೆ, ಈಗಿನ ಶಾಸಕರು ಅದನ್ನು ರದ್ದುಪಡಿಸಿ ಕ್ಯಾತನಹಳ್ಳಿ ಗ್ರಾಮಕ್ಕೆ ಸ್ಥಳಾಂತರ ಮಾಡಿಸಿಕೊಂಡರು. ಶಾಸಕರು ಮನಸ್ಸು ಮಾಡಿದ್ದರೆ ಈಗಿನ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕ್ಯಾತನಹಳ್ಳಿ ಗ್ರಾಮಕ್ಕೂ ಸಬ್ ಸ್ಟೇಷನ್ ಮಂಜೂರು ಮಾಡಿಸಿಕೊಳ್ಳಬಹುದಾಗಿತ್ತು. ಅದನ್ನು ಬಿಟ್ಟು ಚಿನಕುರಳಿಗೆ ಮಂಜೂರಾಗಿದ್ದ ಠಾಣೆಯನ್ನು ಸ್ಥಳಾಂತರ ಮಾಡಿಸಿ ತಮ್ಮೂರಿಗೆ ತೆಗೆದುಕೊಂಡು ಹೋದರು. ಇದೀಗ ಸ್ಥಳೀಯರು ವಿರೋಧ ನಡೆಸಿದರೂ ಸೋಲಾರ್ ಪವರ್ ಪ್ಲಾಂಟ್ ನಿರ್ಮಾಣಕ್ಕೆ ಭೂಮಿ ಪೂಜೆ ಸಲ್ಲಿಸಿದ್ದಾರೆ. ಶಾಸಕರು ಇಂತಹ ಉದ್ಧಟತನ ಬಿಟ್ಟು ಕ್ಷೇತ್ರದ ಅಭಿವೃದ್ಧಿ ಪಡಿಸಲಿ ಎಂದು ಕಿಡಿಕಾರಿದರು.

ಕೆ.ಆರ್.ಪೇಟೆ ಪಿಎಲ್‌ಡಿ ಬ್ಯಾಂಕ್‌ಗೆ ಮೋಹನ್ ಅಧ್ಯಕ್ಷ



ನೂತನ ಅಧ್ಯಕ್ಷರನ್ನು ನಿರ್ದೇಶಕರು ಅಭಿನಂದಿಸಿದರು.

ಕೆ.ಆರ್.ಪೇಟೆ, ಜ.20– ತಾಲೂಕು ಪಿಎಲ್‌ಡಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಅರಳಕುಪ್ಪೆ ಎ.ಸಿ.ಮೋಹನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಪುಟ್ಟಸ್ವಾಮಿಗೌಡರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಪಟ್ಟಣದ ಬ್ಯಾಂಕ್ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಎ.ಸಿ.ಮೋಹನ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಎಲ್ಲಾ ನಿರ್ದೇಶಕರು ಬ್ಯಾಂಕ್‌ನ ಸಮಗ್ರ ಅಭಿವೃದ್ಧಿಗೆ ಪಕ್ಷಾತೀತವಾಗಿ ಶ್ರಮಿಸುತ್ತಿದ್ದೇವೆ. ನೂತನ ಅಧ್ಯಕ್ಷ ಎ.ಸಿ.ಮೋಹನ್ ಅವರು ಸರ್ಕಾರದಿಂದ ಅನುದಾನ ತಂದು ಬ್ಯಾಂಕ್ ಅಭಿವೃದ್ಧಿಗೆ ಸಹಕಾರ ನೀಡಬೇಕು. ಅಲ್ಲದೇ ರೈತರಿಗೆ ಹೆಚ್ಚಿನ ಸಾಲ ನೀಡಲು ಕ್ರಮ ವಹಿಸಬೇಕು ಎಂದರು.

ನೂತನ ಅಧ್ಯಕ್ಷ ಮೋಹನ್ ಮಾತನಾಡಿ, ನನ್ನ ಅಧಿಕಾರವಧಿಯಲ್ಲಿ ಎಲ್ಲಾ ನಿರ್ದೇಶಕರು ಹಾಗೂ ಬ್ಯಾಂಕ್‌ನ ನೌಕರರ ಸಹಕಾರದೊಂದಿಗೆ ಬ್ಯಾಂಕ್‌ನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಉಪಾಧ್ಯಕ್ಷ ರಮೇಶ್, ನಿರ್ದೇಶಕರಾದ ನಾಗರಾಜೇಗೌಡ, ರಾಜಾನಾಯಕ್, ಧನಂಜಯ, ರಾಮೇಗೌಡ, ಸುರೇಶ್, ಜಗದೀಶ್, ಕೆ.ಟಿ.ಚಕ್ರಪಾಣಿ, ಸುನೀಲ್, ಚಂದ್ರೇಗೌಡ, ನಾಗೇಶ್, ಮಂಜುಳಾ, ಕವಿತ, ಮುಖಂಡರಾದ ಎ.ಸಿ. ಸೋಮೇಗೌಡ, ರಾಜೇಶ್, ಸಿ.ಜೆ.ಮಂಜೇಗೌಡ, ಸೇರಿದಂತೆ ಹಲವರಿದ್ದರು.

ಒಂದನೇ ಪುಟದಿಂದ

ತಾಳ್ಮೆಯೂ ಶಾಶ್ವತ ಅಲ್ಲ...!!

ರಾಜಕಾರಣದಲ್ಲಿ ನಂಬಿಕೆ ಮುಖ್ಯ ಎಂಬುದಾಗಿ ಪುನರುಚ್ಚರಿಸಿದ ಸುರೇಶ್, ತಮ್ಮ ಸಹೋದರ ಶಿವಕುಮಾರ್ ಅವರಿಗೆ ಅಧಿಕಾರ ಸಿಗುವುದು ದೇವರ ಇಚ್ಛೆ. ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಕೇವಲ ಕರ್ನಾಟಕ ಮಾತ್ರವಲ್ಲ. ಇಡೀ ರಾಷ್ಟ್ರ ರಾಜಕಾರಣ ನೋಡಬೇಕಾಗುತ್ತದೆ. ಅವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕರ್ನಾಟಕದ ಬಗ್ಗೆ ಒಂದು ನಿಲುವಿಗೆ ಬರಲಿದ್ದಾರೆ. ಬಜೆಟ್‌ಗೆ ಮುನ್ನವೇ ಅಧಿಕಾರ ಹಸ್ತಾಂತರ ಆಗಲಿದೆಯೇ ಎಂಬ ಪ್ರಶ್ನೆಗೆ ಕಾದು ನೋಡಿ ಎಂದರು. ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಕಚೇರಿಯಲ್ಲಿ ಮಹಿಳೆಯ ಜೊತೆ ವರ್ತಿಸಿದ ರೀತಿ ಖಂಡಿಸಿದ ಸುರೇಶ್, ಇಲಾಖೆಯಲ್ಲಿ ಶಿಸ್ತು ಮುಖ್ಯ, ಅಧಿಕಾರಿ ಗೃಹ ಸಚಿವರಿಗೂ ಹತ್ತಿರ, ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದರು.

ಯುವಕನ ಕೊಚ್ಚಿ ಬರ್ಬರ ಕೊಲೆ

ಆರಂಭವಾಗಿಲ್ಲ ಉದಯಗಿರಿ ಹೊಸ ಠಾಣೆ: ಜನಸಂಖ್ಯೆ ಮತ್ತು ಭೂವಿಸ್ತಾರದ ಜೊತೆಗೆ ಸಮರ್ಥ ಕಾನೂನು ಸುವ್ಯವಸ್ಥೆ ನಿರ್ವಹಣೆಗಾಗಿ ರಾಜ್ಯ ಸರ್ಕಾರವು ನವೆಂಬರ್ 18 ರಂದು ಉದಯಗಿರಿಗೆ ಮತ್ತೊಂದು ಠಾಣೆಯನ್ನು (ಉದಯಗಿರಿ ಉತ್ತರ) ಮಂಜೂರು ಮಾಡಿತ್ತು. ಅದಕ್ಕಾಗಿ ರಾಜೀವ್ ನಗರ 2ನೇ ಹಂತದಲ್ಲಿ ಬಾಡಿಗೆ ಮನೆಯೊಂದನ್ನು ಗುರುತಿಸಲಾಗಿದ್ದು, ಅದನ್ನು ಕಚೇರಿಗೆ ಅನುಕೂಲವಾಗುವಂತೆ ಮಾರ್ಪಾಡು ಮಾಡಲಾಗುತ್ತಿದೆ. ಆದರೆ, ಇಲ್ಲಿಗೆ ಸರ್ಕಾರದಿಂದ ಮಂಜೂರಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯ ನೇಮಕ ಆಗಿಲ್ಲದ ಕಾರಣ ಉದಯಗಿರಿ ಉತ್ತರ ಠಾಣೆ ಪರಿಸ್ಥಿತಿ ಇನ್ನೂ ಅನಿಶ್ಚಿತವಾಗಿದೆ.

ಡಿಜಿಪಿ ರಾಮಚಂದ್ರರಾವ್ ಅಮಾನತು

ನೀತಿಯಡಿಯಲ್ಲಿ ಡಿಜಿಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಯೋಗ ಒತ್ತಾಯಿಸಿದೆ. ಸೋಮವಾರ ರಾತ್ರಿ ಕರ್ನಾಟಕ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಬರೆದ ಪತ್ರಗಳಲ್ಲಿ, ರಾವ್ ತಮ್ಮ ಕಚೇರಿಯೊಳಗೆ ಸಮವಸ್ತ್ರದಲ್ಲಿದ್ದಾಗ ಮಹಿಳೆಯರೊಂದಿಗೆ ಅಸಭ್ಯವಾಗಿ ವರ್ತಿಸುತ್ತಿರುವುದನ್ನು ತೋರಿಸುವ ದೃಶ್ಯಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಆಯೋಗ ತಿಳಿಸಿದೆ. ರಾಜ್ಯ ಸುದ್ದಿ ವಾಹಿನಿಗಳಲ್ಲಿ ಪ್ರಸಾರವಾದ ಐಪಿಎಸ್ ಅಧಿಕಾರಿಯೊಬ್ಬರು ಸಮವಸ್ತ್ರದಲ್ಲಿದ್ದಾಗ ತಮ್ಮ ಕಚೇರಿಯೊಳಗೆ ಅಶ್ಲೀಲ ವರ್ತನೆ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಸಮಾನವಾದ ರೀತಿಯಲ್ಲಿ ವರ್ತಿಸುತ್ತಿರುವ ದೃಶ್ಯಗಳನ್ನು ರಾಜ್ಯ ಮಹಿಳಾ ಆಯೋಗವು ಗಂಭೀರವಾಗಿ ಪರಿಗಣಿಸಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಸೇರಬೇಕಾಗಿಲ್ಲದ ಏಕೈಕ ಪಕ್ಷ ಬಿಜೆಪಿ

"ಪ್ರಧಾನಿ ನರೇಂದ್ರ ಮೋದಿ ಅವರು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸಲು ಮಾಡಿದ ಸಂಕಲ್ಪವನ್ನು ಸಾಕಾರಗೊಳಿಸಲು ನಾವು ಸಂಪೂರ್ಣ ಏಕತೆ ಮತ್ತು ಬದ್ಧತೆಯೊಂದಿಗೆ ದೃಢವಾಗಿರುತ್ತೇವೆ" ಎಂದು ನಬಿನ್ ಹೇಳಿದ್ದಾರೆ.

ಪ್ರಮುಖ ಹುದ್ದೆಗಳು ಮತ್ತು ದೊಡ್ಡ ಜವಾಬ್ದಾರಿಗಳನ್ನು ಹೊಂದಲು ಯಾವುದೇ ನಿರ್ದಿಷ್ಟ ಕುಟುಂಬಕ್ಕೆ ಸೇರಬೇಕಾಗಿಲ್ಲದ ಏಕೈಕ ಪಕ್ಷ ಬಿಜೆಪಿ ಎಂದು ನೂತನ ಅಧ್ಯಕ್ಷರು ಹೇಳಿದ್ದಾರೆ. ಬಿಜೆಪಿಯು ತಳ ಮಟ್ಟದ ಕಾರ್ಯಕರ್ತರಿಗೆ ನೀಡುತ್ತಿರುವ ಮಹತ್ವವನ್ನು ಎತ್ತಿ ತೋರಿಸುತ್ತಾ, ಇಲ್ಲಿ, ಸಾಮಾನ್ಯ ಕಾರ್ಯಕರ್ತನಾಗಿರುವುದು ಅತ್ಯಂತ ದೊಡ್ಡ ಅರ್ಹತೆ. ಈ ಸಂಸ್ಥೆಯಲ್ಲಿಯೇ, ಸಾಮಾನ್ಯ ಕುಟುಂಬದ ವ್ಯಕ್ತಿಯೊಬ್ಬರು ದೇಶದ ಪ್ರಧಾನಿಯಾಗಬಹುದು ಮತ್ತು ಸಾಮಾನ್ಯ ಕಾರ್ಯಕರ್ತ ರಾಷ್ಟ್ರೀಯ ಅಧ್ಯಕ್ಷರಾಗಬಹುದು ಎಂದು ಹೇಳಿದರು.

ಪಕ್ಷದ ಹಿರಿಯರು ಮತ್ತು ಕೋಟ್ಯಂತರ ಕಾರ್ಯಕರ್ತರ ಅಚಲ ನಂಬಿಕೆ ಮತ್ತು ಅಪಾರ ಬೆಂಬಲದಿಂದಾಗಿ ದೊಡ್ಡ ಜವಾಬ್ದಾರಿ ವಹಿಸಿಕೊಳ್ಳಲು ಸಾಧ್ಯವಾಗಿದೆ. ಇದು ಬಿಜೆಪಿಯ ಆತ್ಮ, ಮತ್ತು ಇದು ಮೂಲಭೂತವಾಗಿ ಇತರ ರಾಜಕೀಯ ಪಕ್ಷಗಳಿಗಿಂತ ಬಿನ್ನವಾಗಿದೆ ಎಂದು ಅವರು ಹೇಳಿದರು. ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತ ಕೇವಲ ಕಾರ್ಯಕರ್ತನಲ್ಲ; ರಾಷ್ಟ್ರ ನಿರ್ಮಾಣದ ಸೈನಿಕರು. ನಿಮ್ಮ ಹೋರಾಟ, ನಿಮ್ಮ ನಿಷ್ಠೆ ಮತ್ತು ನಿಮ್ಮ ಕಠಿಣ ಪರಿಶ್ರಮವು ಭಾರತದ ಉಜ್ವಲ ಭವಿಷ್ಯಕ್ಕೆ ಬಲವಾದ ಅಡಿಪಾಯವಾಗಿದೆ. ನಮ್ಮ ಗುರಿ ಸ್ಪಷ್ಟವಾಗಿದೆ – 2047 ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡುವುದು ಮತ್ತು ಪ್ರಧಾನಿ ಮೋದಿಯವರ ಸಂಕಲ್ಪಗಳನ್ನು ಈಡೇರಿಸುವುದು ಎಂದು ಹೇಳಿದ್ದಾರೆ.

ಅಧಿಕಾರ ಸ್ವೀಕಾರ

ತಲುಪಲು ಕಾರಣವಾದ ಆ ಪಕ್ಷದ ಅವಗುಣಗಳನ್ನು ಗುರುತಿಸಿ ಆ ಪಕ್ಷ ಮಾಡಿದ ತಪ್ಪುಗಳಿಂದ ಪಾಠ ಕಲಿಯಿರಿ. ಆಮೇಲೆ ನೀವು ಅದೇ ತಪ್ಪುಗಳನ್ನು ಮಾಡಬೇಡಿ ಎಂದು ಪ್ರಧಾನಿ ಮೋದಿ ಅವರು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು.

ಪಂಚಾಯ್ತಿಯಿಂದ ಸಂಸತ್‌ವರೆಗೆ: ಅಟಲ್ ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾನಿ ಮತ್ತು ಮುರಳಿ ಮನೋಹರ ಜೋಶಿ ಅವರ ನಾಯಕತ್ವದಲ್ಲಿ ಪಕ್ಷವು ಶೂನ್ಯದಿಂದ ಶಿಖರಕ್ಕೆ ಏರಿತು. ಬಳಿಕ ವೆಂಕಯ್ಯ ನಾಯ್ಡು ನಿತಿನ್ ಗಡ್ಕರಿ ಸೇರಿ ಹಲವು ಹಿರಿಯ ಸಹೋದ್ಯೋಗಿಗಳು ಪಕ್ಷವನ್ನು ಸಂಘಟನೆಯಾಗಿ ಬೆಳೆಸಿದರು. ರಾಜನಾಥ ಅವರ ನಾಯಕತ್ವದಲ್ಲಿ ಮೊದಲ ಬಾರಿಗೆ ಪಕ್ಷವು ಬಹುಮತದ ಸರ್ಕಾರ ರಚಿಸಿತು. ಅಮಿತ್ ಶಾ ಅವರ ನಾಯಕತ್ವದಲ್ಲಿ ಹಲವು ರಾಜ್ಯಗಳಲ್ಲಿ ಬಿಜೆಪಿ ಆಡಳಿತಕ್ಕೆ ಬಂದಿತು ಮತ್ತು ಎರಡನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರ ಹಿಡಿಯಿತು. ಜೆ.ಪಿ ನಡ್ಡಾ ಅವರ ನಾಯಕತ್ವದಲ್ಲಿ ಪಂಚಾಯಿತಿಯಿಂದ ಸಂಸತ್ತಿನವರೆಗೆ ಪಕ್ಷವು ಮತ್ತಷ್ಟು ಶಕ್ತಿಯುತವಾಯಿತು ಎಂದು ಪ್ರಧಾನಿ ಮೋದಿ ಹೇಳಿದರು.

ಮಹೋತ್ಸವ ಸಂಪನ್ನ

ಆರು ದಿನ ಬೆಳಗ್ಗೆ, ಮಧ್ಯಾಹ್ನ ಮತ್ತು ರಾತ್ರಿ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು. ಈ ಮಹಾ ದಾಸೋಹದಲ್ಲಿ ಸುಮಾರು 20 ರಿಂದ 25 ಲಕ್ಷ ಮಂದಿ ಪ್ರಸಾದ ಸೇವಿಸಿದರು.

ಗಣ್ಯರ ಸಮಾಗಮ: ಜಾತ್ರಾ ಮಹೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಸಚಿವೆ, ಲಕ್ಷ್ಮಿ ಹೆಬ್ಬಾಳ್ಕರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ವೈದ್ಯಕೀಯ ಹಾಗೂ ಕೌಶಲ್ಯ ಅಭಿವೃದ್ಧಿ ಸಚಿವ ಶರಣಪ್ರಕಾಶ ಪಾಟೀಲ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಶಾಸಕರು, ಮಾಜಿ ಸಚಿವರು, ವಿವಿಧ ಮಠಗಳ ಮಠಾಧೀಶರು ಭಾಗಿಯಾಗಿದ್ದರು.

ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು, ಕಲಾವಿದರು ಜಾತ್ರಾ ಮಹೋತ್ಸವಕ್ಕೆ ಸಾಕ್ಷಿಯಾದರು. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಹುಣಸೂರು ಸ್ಕೈ ಗೋಲ್ಡ್ ಅಂಡ್ ಡೈಮಂಡ್ ದರೋಡೆ ಪ್ರಕರಣ

ಬಿಹಾರದಲ್ಲಿ ಬಂಧಿತ ಇಬ್ಬರು ಆರೋಪಿಗಳ ಇಂದು ತೀವ್ರ ವಿಚಾರಣೆ

- ಉಳಿದ ಆರೋಪಿಗಳ ಸೆರೆಗೆ ಬಿಹಾರದಲ್ಲೇ ಮೈಸೂರು ಪೊಲೀಸರ ಒಂದು ತಂಡ ಕಾರ್ಯಾಚರಣೆ
- ಐವರು ಇನ್ಸ್‌ಪೆಕ್ಟರ್‌ಗಳು; 30 ಪೊಲೀಸರಿಂದ ಖದೀಮರು, ಕದ್ದ ಮಾಲಿಗೆ ಶೋಧ

ಮೈಸೂರು, ಜ.20(ಬಿಎಲ್ ಯು)– ಮೈಸೂರಿನ ಹುಣಸೂರು ಸ್ಕೈ ಗೋಲ್ಡ್ ಅಂಡ್ ಡೈಮಂಡ್ ಶಾಪ್‌ನಲ್ಲಿ ದರೋಡೆ ಮಾಡಿ ಬಿಹಾರದಲ್ಲಿ ಸಿಕ್ಕಿ ಬಿದ್ದಿರುವ ಇಬ್ಬರು ಆರೋಪಿಗಳನ್ನು ಇಂದು ರಾತ್ರಿ ಮೈಸೂರಿಗೆ ಕರೆ ತರುತ್ತಿದ್ದು, ನಾಳೆಯಿಂದ ವಿಚಾರಣೆ ನಡೆಸಲಾಗುವುದು ಎಂದು ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ದರೋಡೆ ಪ್ರಕರಣದ ಕಾರ್ಯಾಚರಣೆ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಅವರು, ಮೂಲತಃ ಬಿಹಾರ ಮೂಲದ ಪಂಕಜ್ ಕುಮಾರ್ ಹಾಗೂ ದೆಹಲಿಯ ಜೇತ್‌ಪುರ್‌ನ ಹರಿಹರನಗರ ಬಡಾವಣೆಯ ರಿಷಿಕೇಶ್ ಕುಮಾರ್‌ನನ್ನು ನಮ್ಮ ಪೊಲೀಸರ ಒಂದು ತಂಡ ಮೈಸೂರಿಗೆ ಕರೆ ತರುತ್ತಿದ್ದು, ಈ ಇಬ್ಬರು ಆರೋಪಿಗಳನ್ನು ಬಾಗಲ್ಪುರ್ ನ್ಯಾಯಾಲಯದಲ್ಲಿ ಹಾಜರುಪಡಿಸಿ ಪೊಲೀಸ್ ಕಸ್ಟಡಿಗೆ ಪಡೆದಿದ್ದೇವೆ. ಸದ್ಯ ನ್ಯಾಯಾಧೀಶರು ನಾಲ್ಕು ದಿನಗಳ ಕಾಲ ನಮ್ಮ ಕಸ್ಟಡಿಗೆ ನೀಡಿದ್ದು, ಮತ್ತೆ ವಿಸ್ತರಣೆ ಮಾಡುವಂತೆ ಕೋರುತ್ತೇವೆ ಎಂದು ತಿಳಿಸಿದರು.



ಈಗ ಬಂಧಿತರಾಗಿರುವ ಪಂಕಜ್ ಕುಮಾರ್ ಹಾಗೂ ರಿಷಿಕೇಶ್ ಕುಮಾರ್‌ನನ್ನು ನಾಳೆಯಿಂದ ತೀವ್ರ ವಿಚಾರಣೆಗೊಳಪಡಿಸುತ್ತೇವೆ. ದರೋಡೆ ಪ್ರಕರಣ ಸಂಬಂಧ ಅವರಿಂದ ಇನ್ನು ಬಹಳಷ್ಟು ಮಾಹಿತಿ ಕಲೆ ಹಾಕಬೇಕಿದೆ. ಉಳಿದ ಆರೋಪಿಗಳ ಬಗ್ಗೆ ಈ ಇಬ್ಬರು ನೀಡುವ ಮಾಹಿತಿಯನ್ನು ಬಿಹಾರದಲ್ಲಿ ರುವ ನಮ್ಮ ತಂಡಕ್ಕೆ ರವಾನೆ ಮಾಡುತ್ತೇವೆ ಇದರಿಂದ ಇತರೆ ಆರೋಪಿಗಳನ್ನು ಪತ್ತೆ ಮಾಡಲು ಸಹಾಯವಾಗುತ್ತದೆ ಎಂದರು.

ದರೋಡೆ ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನು 8 ಕ್ಕೂ ಹೆಚ್ಚು ಆರೋಪಿಗಳು ಪತ್ತೆಯಾಗಿಲ್ಲ. ಬಿಹಾರದಲ್ಲಿ ಐವರು ಇನ್ಸ್‌ಪೆಕ್ಟರ್‌ಗಳು 30 ಕ್ಕೂ ಹೆಚ್ಚು ಮೈಸೂರು ಪೊಲೀಸರ ತಂಡ ಆರೋಪಿಗಳ ಪತ್ತೆಗೆ ವ್ಯಾಪಕ ಶೋಧ ಕಾರ್ಯ ಕೈಗೊಂಡಿದ್ದಾರೆ ಎಂದು ಮಾಹಿತಿ ನೀಡಿದರು.

ದರೋಡೆ ಮಾಡಿರುವ 8 ಕೆಜಿ.ಗೂ ಅಧಿಕ ಚಿನ್ನಾಭರಣದ ಜೊತೆಗೆ ಆರೋಪಿಗಳನ್ನು ಬಂಧಿಸಲು ನಮ್ಮ ಪೊಲೀಸ್ ತಂಡ ನಿರಂತರ ಕಾರ್ಯಾಚರಣೆ ನಡೆಸುತ್ತಿದೆ. ಇದಕ್ಕೆ ಅಲ್ಲಿನ ಪೊಲೀಸರ ಸಹಕಾರ ಪಡೆದಿದ್ದೇವೆ ಇದರಲ್ಲಿ ನಾವು ಯಶಸ್ಸು ಸಾಧಿಸುತ್ತೇವೆ ಎಂದು ಮಲ್ಲಿಕಾರ್ಜುನ ಬಾಲದಂಡಿ ವಿಶ್ವಾಸ ವ್ಯಕ್ತಪಡಿಸಿದರು.

ಅಜ್ಞಾತರಾಗಿರುವ ಉಳಿದ ಆರೋಪಿಗಳು

ದರೋಡೆ ಪ್ರಕರಣದಲ್ಲಿ ಮಾಸ್ಟರ್ ಮೈಂಡ್ ಸೇರಿದಂತೆ ಇಬ್ಬರು ಆರೋಪಿಗಳು ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಪೊಲೀಸರಿಗೆ ಸಿಕ್ಕಿ ಬೀಳಬಾರದೆಂದು ಉಳಿದ ಆಪಾದಿತರು ಪ್ರತ್ಯೇಕಗೊಂಡಿದ್ದಾರೆ.

ಈಗಾಗಲೇ ಬಂಧಿತರಾಗಿರುವ ಗ್ಯಾಂಗ್ ಲೀಡರ್ ಪಂಕಜ್ ಕುಮಾರ್ ನಮ್ಮ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿರುತ್ತಾನೆ. ಅದರ ಆಧಾರದ ಮೇಲೆ ಪೊಲೀಸರು ಕಾರ್ಯಾಚರಣೆ ಗಿಳಿಯುವ ಮಾಹಿತಿ ಅವರಿಗಾಗಲೇ ತಲುಪಿದೆ. ಹಾಗಾಗಿ ಒಟ್ಟಿಗೆ ಇದ್ದರೆ ಎಲ್ಲರೂ ಸಿಕ್ಕಿ ಬೀಳುತ್ತೇವೆ ಎಂದು ಬೇರೆ ಬೇರೆ ಕಡೆ ತಲೆ ಮರೆಸಿಕೊಂಡಿದ್ದಾರೆ.

ಆದರೆ, ಆರೋಪಿಗಳ ಬಗ್ಗೆ ಮೈಸೂರು ಪೊಲೀಸರಿಗೆ ಸಾಕಷ್ಟು ಸುಳಿವು ಸಿಕ್ಕಿದ್ದು, ಅವರಿಗೆಲ್ಲಾ ಕೋಳ ತೊಡಿಸುವುದಂತೂ ಗ್ಯಾರಂಟಿ.

ಸುದೀರ್ಘ ವೃತ್ತಿಜೀವನಕ್ಕೆ ಒಲಿಂಪಿಕ್ಸ್ ಪದಕ ವಿಜೇತೆ ಸೈನಾ ನೆಹ್ವಾಲ್ ವಿದಾಯ

ನವದೆಹಲಿ: ಭಾರತೀಯ ಬ್ಯಾಡ್ಮಿಂಟನ್ ಧ್ರುವತಾರೆ, ಮಹಿಳಾ ಬ್ಯಾಡ್ಮಿಂಟನ್‌ನ ಮುಖವನ್ನೇ ಬದಲಾಯಿಸಿದ



ಒಲಿಂಪಿಕ್ಸ್ ಪದಕ ವಿಜೇತೆ ಸೈನಾ ನೆಹ್ವಾಲ್ ತಮ್ಮ ಸುದೀರ್ಘ ಅಂತರ ರಾಷ್ಟ್ರೀಯ ವೃತ್ತಿಜೀವನವನ್ನು ಕೊನೆಗೊಳಿಸಿದ್ದಾರೆ. ಅವರು ಕೆಲವು ತಿಂಗಳುಗಳಿಂದ ಗಾಯಗಳಿಂದ ಬಳಲುತ್ತಿದ್ದರು. ಇದೀಗ ತಾವೂ ಇನ್ನು ಮುಂದೆ ವೃತ್ತಿಪರ ಬ್ಯಾಡ್ಮಿಂಟನ್ ಆಡುವುದಿಲ್ಲ ಎಂದು ಅಧಿಕೃತವಾಗಿ ಘೋಷಿಸಿದ್ದಾರೆ. 2012 ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಮೊದಲ ಒಲಿಂಪಿಕ್ ಪದಕ ಗೆದ್ದಿದ್ದ ಸೈನಾ ದೇಶಕ್ಕೆ ಕೀರ್ತಿ ತಂದಿದ್ದರು. ಅವರ ನಿರ್ಧಾರವು ಭಾರತೀಯ ಬ್ಯಾಡ್ಮಿಂಟನ್‌ನಲ್ಲಿ ಅದ್ಭುತವಾದ ಯುಗವನ್ನು ಅಂತ್ಯಗೊಳಿಸಿದಂತಾಗಿದೆ.

ನಿವೃತ್ತಿಗೆ ಕಾರಣವೇನು: ಕಳೆದ ಎರಡು ವರ್ಷಗಳಿಂದ ಅವರು ತೀವ್ರ ಮೊಣಕಾಲು ನೋವಿನಿಂದ ಬಳಲುತ್ತಿದ್ದಾರೆ. ವೈದ್ಯಕೀಯ ಪರೀಕ್ಷೆಗಳಲ್ಲಿ ಅವರಿಗೆ ಸಂಧಿವಾತ ಇರುವುದು ಪತ್ತೆಯಾಗಿದೆ. ಅವರ ಮೊಣಕಾಲಿನ ಕಾರ್ಟಿಲೇಜ್ ಸಂಪೂರ್ಣವಾಗಿ ಹಾನಿಗೊಳಗಾಗಿದ್ದು, ಕನಿಷ್ಠ ತರಬೇತಿ ಪಡೆಯಲು ಸಹ ಅವರಿಗೆ ಕಷ್ಟವಾಗುತ್ತಿದೆ. ದಿನಕ್ಕೆ ಎಂಟು ಗಂಟೆಗಳ ಕಾಲ ಕಷ್ಟಪಟ್ಟು ಕೆಲಸ ಮಾಡುತ್ತಿದ್ದ ಸೈನಾ, ಈಗ ಒಂದು ಗಂಟೆ ಅಭ್ಯಾಸ ಮಾಡಿದರೆ ಮೊಣಕಾಲುಗಳಲ್ಲಿ ಊತದಿಂದ ಬಳಲುತ್ತಿರುವುದರಿಂದ ನಿವೃತ್ತಿ ನಿರ್ಧಾರ ತೆಗೆದುಕೊಂಡಿದ್ದಾಗಿ ತಿಳಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ಸುಧಾರಣೆ, ಅಭಿವೃದ್ಧಿ ಪರ ಬಜೆಟ್‌ಗೆ ಮನವಿ

ಮೈಸೂರು, ಜ.20– ಮೈಸೂರು ಮಹಾನಗರ ಪಾಲಿಕೆ ಆಡಳಿತ ಸುಧಾರಣೆ ಹಾಗೂ ನಗರದ ಸರ್ವತೋಮುಖ ಅಭಿವೃದ್ಧಿ ನಿಟ್ಟಿನಲ್ಲಿ ಈ ಬಾರಿಯ ಬಜೆಟ್ ರೂಪಿಸಬೇಕು ಎಂದು ಭವಿಷ್ಯದರ್ಶಿ ಮಹಾ ಮೈಸೂರು ಸಂಘಟನೆಯ ಮುಖ್ಯ ಪ್ರವರ್ತಕ, ಖ್ಯಾತ ನರರೋಗ ತಜ್ಞ ಹಾಗೂ ಬಿಜೆಪಿ ಮುಖಂಡ ಡಾ.ಸುಶ್ರುತ ಗೌಡ ನೇತೃತ್ವದ ನಾಗರಿಕ ಸಮಿತಿಯು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಅವರಿಗೆ ಸಲಹೆಗಳನ್ನೊಳಗೊಂಡ ಮನವಿ ಪತ್ರ ಸಲ್ಲಿಸಿತು.

ಮಹಾನಗರ ಪಾಲಿಕೆಯ 2026–27ನೇ ಸಾಲಿನ ಪಾಲಿಕೆ ಬಜೆಟ್‌ನಲ್ಲಿ ಆಡಳಿತದಲ್ಲಿ ಕೃತಕ ಬುದ್ಧಿಮತ್ತೆ ಬಳಕೆಯಂತಹ ಹೊಸ ವಿಧಾನಗಳ ಅನುಷ್ಠಾನ, ಪಾರಂಪರಿಕ ರಕ್ಷಣೆಗೆ ಸಮರ್ಪಕ ಅನುದಾನ ಮೀಸಲು, ಸುಸ್ಥಿರ ತಂತ್ರಜ್ಞಾನ ಅಭಿವೃದ್ಧಿಗೆ ಆದ್ಯತೆ, ತ್ಯಾಜ್ಯ ಹಾಗೂ ಮಾಲಿನ್ಯ ಮುಕ್ತ ನಗರ ನಿರ್ಮಾಣಕ್ಕೆ ವಿಶೇಷ ಅನುದಾನ, ನಮ್ಮ ಮೈಸೂರು ಪ್ರಶಸ್ತಿ ಮೂಲಕ ಪ್ರೋತ್ಸಾಹ, ನಮ್ಮ ವಾರ್ಡ್–ನಮ್ಮ ಪಾರ್ಕ್ ಯೋಜನೆ, ರಸ್ತೆ ಹಾಗೂ ಪಾದಚಾರಿ ಮಾರ್ಗ ನಿರ್ವಹಣೆಗೆ ಅತ್ಯಾಧುನಿಕ ತಂತ್ರಜ್ಞಾನ ಬಳಕೆ ಸೇರಿದಂತೆ ಹಲವು ಮಹತ್ವದ ಸಲಹೆಗಳನ್ನು ಪಾಲಿಕೆ ಆಯುಕ್ತರ ಮುಂದಿಟ್ಟು, ಇವುಗಳನ್ನು ಪರಿಗಣಿಸುವಂತೆ ಆಗ್ರಹಿಸಲಾಯಿತು.

ಮೈಸೂರು ಮಹಾರಾಜರುಗಳು ಕಟ್ಟಿ ಬೆಳೆಸಿದ ಅತ್ಯಂತ ಯೋಜಿತ ನಗರ. ಆದರೆ ಆಧುನಿಕತೆ ಭರದಲ್ಲಿ ಸಮಸ್ಯೆಗಳ ಆಗರವೇ ಸೃಷ್ಟಿಯಾಗಿದೆ. ಅಭಿವೃದ್ಧಿ ನಿಟ್ಟಿನಲ್ಲೂ ಹಲವು ಸವಾಲುಗಳು ಎದುರಿಗಿವೆ.



ಖ್ಯಾತ ನರರೋಗ ತಜ್ಞರೂ ಆದ ಬಿಜೆಪಿ ಮುಖಂಡ ಡಾ.ಸುಶ್ರುತ್ ಗೌಡ ನೇತೃತ್ವದ ನಾಗರಿಕ ಸಮಿತಿಯೊಂದು ನಗರ ಪಾಲಿಕೆ ಆಯುಕ್ತರಿಗೆ ಬಜೆಟ್ ಸಂಬಂಧಿತ ಸಲಹೆಗಳನ್ನು ಒಪ್ಪಿಸಿದರು.

ಹಾಗೆಯೇ ತಂತ್ರಜ್ಞಾನದ ಮೂಲಕ ಪರಿಹಾರ ಉಪಕ್ರಮಗಳನ್ನು ಆವಿಷ್ಕರಿಸಬಲ್ಲ ಪ್ರತಿಭೆಗಳಿಗೂ ಕೊರತೆ ಇಲ್ಲ. ಆದರೆ ಅವರಿಗೆ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಲು ಪ್ರೇರಣೆ ಹಾಗೂ ಅಗತ್ಯ ಅನುದಾನ ಕಲ್ಪಿಸಿಕೊಡಬೇಕು. ಜ್ವಲಂತ ಸಮಸ್ಯೆಗಳಾದ ತ್ಯಾಜ್ಯ ವಿಲೇವಾರಿ, ಸಮರ್ಪಕ ಕುಡಿಯುವ ನೀರು ಸರಬರಾಜು, ಪೋಲಾಗದಂತೆ ತಡೆ, ಪಾರದರ್ಶಕ ಆಡಳಿತ ಸೇರಿದಂತೆ ಕ್ರಾಂತಿಕಾರಿ ಬದಲಾವಣೆಗೆ ನೆರವಾಗುವಂತಹ ಬಜೆಟ್ ರೂಪಿಸುವಂತೆ ಇದೇ ವೇಳೆ ಡಾ.ಸುಶ್ರುತ್ ಗೌಡ, ಆಯುಕ್ತರಿಗೆ ಮನವಿ ಮಾಡಿದರು.

ಇಂದಿನಿಂದ ಡಿಜಿಟಲ್ ಇ–ಸ್ಟ್ಯಾಂಪ್ 2ನೇ ಸುತ್ತಿನ ತರಬೇತಿ

ಮೈಸೂರು, ಜ.20– ನೊಂದಣಿ ಮತ್ತು ಮುದ್ರಾಂಕ ಇಲಾಖೆ ವತಿಯಿಂದ ನಾಳೆ(ಜ.21) ಯಿಂದ ಡಿಜಿಟಲ್ ಇ–ಸ್ಟ್ಯಾಂಪ್ ತರಬೇತಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ನೋಂದಣಾಧಿಕಾರಿಗಳು ತಿಳಿಸಿದ್ದಾರೆ. ತರಬೇತಿಯಲ್ಲಿ ದಸ್ತಾವೇಜು ಬರಹಗಾರರು, ವಕೀಲರು, ಇ–ಸ್ಟ್ಯಾಂಪ್ ಮಾರಾಟಗಾರರು, ಕರ್ನಾಟಕ ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳ ಸಿಬ್ಬಂದಿ, ಎಸ್‌ಹೆಚ್‌ಸಿಐಎಲ್ ಅವರಿಂದ ನೇಮಕ ಕೊಂಡಿರುವ ಎಸಿಸಿ ಇ-ಡಿಜಿಟಲ್, ಇ–ಸ್ಟ್ಯಾಂಪ್ ವ್ಯವಸ್ಥೆಯಲ್ಲಿ ಆಸಕ್ತರು ಆಯಾ ಉಪ ನೋಂದಣಿ ಕಚೇರಿಗಳಲ್ಲಿ ನಡೆಯುವ ತರಬೇತಿಯಲ್ಲಿ ಪಾಲ್ಗೊಳ್ಳಬಹುದು.

ಇ–ಖಾತಾ ಸಮಸ್ಯೆ ಸರಿಪಡಿಸಲು ಮೈಸೂರು ಜಿಲ್ಲಾಡಳಿತಕ್ಕೆ ಒತ್ತಾಯ



ಇ–ಖಾತಾ ಗೊಂದಲ ನಿವಾರಣೆಗೆ ಜಿಲ್ಲಾಧಿಕಾರಿ ಕಚೇರಿಗೆ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ವತಿಯಿಂದ ಮನವಿ ಸಲ್ಲಿಸಲಾಯಿತು.

ಮೈಸೂರು,ಜ.20–ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ವತಿಯಿಂದ ನಗರದ ಸಿದ್ದಾರ್ಥ ಲೇಔಟ್‌ನಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ಭೇಟಿ ನೀಡಿ ಇ–ಖಾತಾ ಸಮಸ್ಯೆ ಸರಿಪಡಿಸುವಂತೆ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಉಪಾಧ್ಯಕ್ಷ ವಿಕ್ರಮ ಅಯ್ಯಂಗಾರ್, ಮೈಸೂರು ನಗರ ವ್ಯಾಪ್ತಿಯಲ್ಲಿ ಇ–ಖಾತಾ ಪಡೆಯಲು ಇನ್ನೂ ಸಹ ಗ್ರಾಹಕರು ಹರಸಾಹಸ ಪಡುವಂತಾಗಿದೆ. ರಾಜ್ಯ ಸರ್ಕಾರವು ಅವೈಜ್ಞಾನಿಕವಾಗಿ ಆಸ್ತಿ ನೋಂದಣಿಗೆ ಇ–ಖಾತಾ ಕಡ್ಡಾಯ ಮಾಡಿದ ದಿನ ದಿಂದಲೂ ನಗರ ವ್ಯಾಪ್ತಿಯಲ್ಲಿ ಅವ್ಯವಸ್ಥೆ ಉಂಟಾಗಿದೆ. ದೂರದ ಊರುಗಳಲ್ಲಿ, ವಿದೇಶಗಳಲ್ಲಿ ನೆಲೆಸಿರುವ ಖರೀದಿದಾರರು, ಮಾರಾಟಗಾರರು ಇಲ್ಲಿಗೆ ಬಂದು ಹಲವು ದಿನಗಳ ನಂತರವೂ ತಮ್ಮ ಕೆಲಸವಾಗದೆ ಬರಿಗೈಯಲ್ಲಿ ಮರಳುತ್ತಿದ್ದಾರೆ, ಆದುದರಿಂದ ಇ–ಖಾತಾ ಸಮಸ್ಯೆಯನ್ನು ಈ ಕೂಡಲೇ ಬಗೆಹರಿಸಬೇಕೆಂದು ಮನವಿ.

ಕಂದಾಯ ಸಚಿವರು ವಿಧಾನಸಭಾ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದರೂ ಫಲಿತಾಂಶ ಮಾತ್ರ ಶೂನ್ಯ. ಯಾವುದೇ ತಾಂತ್ರಿಕ ದೋಷಗಳಿದ್ದರೂ ಅದನ್ನು ಬೇಗ ಬಗೆಹರಿಸಲಿ, ಜನಸಾಮಾನ್ಯರನ್ನು ಸರಕಾರಿ ಕಚೇರಿಗಳಿಗೆ ಅಲೆದಾಡಿಸುವುದು ಸರಿಯಲ್ಲ, ಜನರು ಬೀದಿಗಿಳಿಯುವ ಮುನ್ನ ಇ–ಖಾತಾ ಸಮಸ್ಯೆಯನ್ನು ಈ ಕೂಡಲೇ ಬಗೆಹರಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಆನಂದ, ಕಡಕೊಳ ಜಗದೀಶ್, ದೂರ ರಾಜಣ್ಣ, ಎಸ್.ಎನ್.ರಾಜೇಶ್, ದುರ್ಗಾ ಪ್ರಸಾದ್, ಗುರುರಾಜ್, ಶ್ರೀಕಾಂತ್ ಕಶ್ಯಪ್ ಹಾಗೂ ಇನ್ನಿತರರು ಹಾಜರಿದ್ದರು.

ಕಬಿನಿ, ನಾಗರಹೊಳೆ, ಬಂಡೀಪುರ ಅರಣ್ಯ ಪ್ರದೇಶ ವ್ಯಾಪ್ತಿ ರೆಸಾರ್ಟ್, ಬಾರ್, ರೆಸ್ಟೋರೆಂಟ್ ತೆರವಿಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು, ಜ.20(ಎಂಕೆ)– ಕಬಿನಿ, ನಾಗರಹೊಳೆ ಮತ್ತು ಬಂಡೀಪುರ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಅಕ್ರಮವಾಗಿ ನಿರ್ಮಾಣ ಮಾಡಲಾಗಿರುವ ರೆಸಾರ್ಟ್, ಬಾರ್ ಮತ್ತು ಹೋಟೆಲ್‌ಗಳ ತೆರವಿಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಮತ್ತು ಕಬಿನಿ ರೈತ ಹಿತ ರಕ್ಷಣಾ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಜಮಾವಣೆಗೊಂಡ ಪ್ರತಿಭಟನಾಕಾರರು, ವನ್ಯಜೀವಿ ಸಂರಕ್ಷಣಾ ಕಾಯ್ದೆ ಹಾಗೂ ನೀರಾವರಿ ನಿಯಮಗಳನ್ನು ಉಲ್ಲಂಘಿಸಿ ಕಬಿನಿ ಹಿನ್ನೀರು ಪ್ರದೇಶ, ನಾಗರಹೊಳೆ, ಬಂಡೀಪುರ ಅರಣ್ಯ ಪ್ರದೇಶದಲ್ಲಿ ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ರೆಸಾರ್ಟ್ ಹಾಗೂ ವಾಣಿಜ್ಯ ಕಟ್ಟಡಗಳು ನಿರ್ಮಾಣಗೊಂಡಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ತೆರವುಗೊಳಿಸಬೇಕು ಒತ್ತಾಯಿಸಿದರು.



ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ ಮತ್ತು ಕಬಿನಿ ರೈತ ಹಿತ ರಕ್ಷಣಾ ಸಮಿತಿ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಅಕ್ರಮ ಕಟ್ಟಡಗಳ ನಿರ್ಮಾಣದಿಂದ ವನ್ಯಜೀವಿ ಸಂಕುಲಕ್ಕೆ ಹಾನಿಯಾಗುತ್ತಿದ್ದು, ಆಹಾರಕ್ಕಾಗಿ ಕಾಡು ಪ್ರಾಣಿಗಳು ಜನವಸತಿ ಪ್ರದೇಶದತ್ತ ಬರುತ್ತಿವೆ. ಇದರಿಂದ ಕಾಡಂಚಿನಲ್ಲಿ ನೆಲೆಸಿರುವ ಕೃಷಿಕರು, ಕೂಲಿ ಕಾರ್ಮಿಕರು ಭಯದಲ್ಲೇ ಬದುಕುವಂತಾಗಿದೆ. ಬೇಸಾಯ ನಡೆಸಲು ಸಾಧ್ಯವಾಗುತ್ತಿಲ್ಲ. ಆತಂಕದಲ್ಲೇ ದಿನದೂಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹುಲಿಗಳ ದಾಳಿಗೆ ರೈತರು ಬಲಿಯಾಗುತ್ತಿದ್ದಾರೆ. ಆದ್ದರಿಂದ ಕೂಡಲೇ ಜನಪ್ರತಿನಿಧಿಗಳು, ಕಂದಾಯ ಮತ್ತು ಪ್ರವಾಸೋದ್ಯಮ ಸಚಿವರು ಉನ್ನತ ಅಧಿಕಾರಿಗಳ ಸಭೆ ನಡೆಸಿ ನ್ಯಾಯಾಧೀಶ ನೇತೃತ್ವದಲ್ಲಿ ಸಮಿತಿಯೊಂದನ್ನು ರಚನೆ ಮಾಡಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಬಳಿಕ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರಿಗೆ ಕಬಿನಿ ರೈತ ಹಿತ ರಕ್ಷಣಾ ಸಮಿತಿ ಅಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮನವಿ ಸಲ್ಲಿಸಿದರು.

ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಖಜಾಂಚಿ ಕೆರೆಹುಂಡಿ ರಾಜಣ್ಣ, ಸಂಚಾಲಕ ಡಾ.ಹನುಮಯ್ಯ, ಜಿಲ್ಲಾಧ್ಯಕ್ಷ ವಳಗೆರೆ ಗಣೇಶ್, ಕಾರ್ಯದರ್ಶಿ ಮಲಿಯೂರು ಮಹೇಂದ್ರ, ಉಪಾಧ್ಯಕ್ಷ ದೇವನೂರು ನಾಗೇಂದ್ರ, ಮುದ್ದಳ್ಳಿ ಮಧುಸೂದನ್, ಹೆಚ್.ಗುಂಡ್ಲಾ ಚಿದಂಬರ, ಪಿ.ಮರಳಿ ಶಿವಣ್ಣ, ಅಂಡುವಿನಹಳ್ಳಿ ಮಹೇಶ್, ದೇವಿರಮ್ಮನಹಳ್ಳಿ ಸಿದ್ದಬಸಪ್ಪ, ಪ್ರಭುಸ್ವಾಮಿ, ಪುಟ್ಟಸ್ವಾಮಿ, ಗುರುವಿನಪುರ ಚಂದ್ರ ಮೋಹನ್, ಊರ್ಗಳ್ಳಿ ರಾಮಣ್ಣ, ಸಾನಂಡಳ್ಳಿ ಬಸವರಾಜು, ನಾಗರಾಜಪ್ಪ, ದೇವಿರಮ್ಮನಹಳ್ಳಿ ಹುಂಡಿ ಕೆಂಪನವೀನ್, ಮುಕಡಹಳ್ಳಿ ರಾಜು, ಕಿಲಿಪುರ ಶ್ರೀಕಂತ, ಮರಿಯಾಲ ಮಾದಪ್ಪ ಮತ್ತಿತರರಿದ್ದರು.

ಮೈಸೂರು ನಗರ ಪೊಲೀಸರಿಂದ ದೃಶ್ಯ ಮಾಧ್ಯಮ ಪತ್ರಕರ್ತರಿಗೆ ಹೆಲ್ಮೆಟ್ ವಿತರಣೆ...



ಮೈಸೂರು ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಆಯೋಜಿಸಿದ್ದ 37ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ ಅರಿವು ಕಾರ್ಯಕ್ರಮದಡಿ ಮೈಸೂರು ನಗರ ಪೊಲೀಸರಿಂದ ವಿಶ್ಯುಯಲ್ ದೃಶ್ಯ ಮಾಧ್ಯಮದ ಪತ್ರಕರ್ತರಿಗೆ ಹೆಲ್ಮೆಟ್ ವಿತರಿಸಲಾಯಿತು. ಈ ಸಂದರ್ಭದಲ್ಲಿ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, 'ಲಾ ಗೈಡ್' ಗೌರವ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್, ಡಿಸಿಪಿ ಸುಂದರರಾಜ್, ಸೈಬರ್ ಕ್ರೈಂ ತಡೆ ವಿಭಾಗದ ಡಿವೈಎಸ್‌ಪಿ ಕೆ.ಎನ್.ಯಶವಂತಕುಮಾರ್, ಪತ್ರಕರ್ತರಾದ ಕೆ.ಪಿ.ನಾಗರಾಜ್, ರಾಮ್, ಜಯಂತ್ ಇನ್ನಿತರರು ಹಾಜರಿದ್ದರು.

ಡಾ.ಪುರುಷೋತ್ತಮ ಬಿಳಿಮಲೆ ಜಿಲ್ಲಾ ಪ್ರವಾಸ



ಮೈಸೂರು: ಕನ್ನಡ ಪ್ರಾಧಿಕಾರ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು ಜ.23ರಂದು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದಾರೆ. ಅಂದು ಮಧ್ಯಾಹ್ನ 3:30ಕ್ಕೆ ಬೆಂಗಳೂರಿನಿಂದ ಮೈಸೂರಿಗೆ ಆಗಮಿಸಲಿದ್ದಾರೆ. ಸಂಜೆ 4 ಗಂಟೆಗೆ ಮೈಸೂರಿನ ವಿಜಯನಗರದ ಜೆಸಿಎಸಿ ಸಂಸ್ಥೆಯು ಹಮ್ಮಿಕೊಂಡಿರುವ ಉತ್ತರಾಯಣ–ಸಾಂಸ್ಕೃತಿಕ ಹಬ್ಬದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

ಮಾಜಿ ಶಾಸಕ ಎಲ್.ನಾಗೇಂದ್ರರಿಗೆ ಅಭಿನಂದನೆ



ಮಾಜಿ ಶಾಸಕ ಎಲ್.ನಾಗೇಂದ್ರ ಅವರು ಮೈಸೂರು ನಗರ ಬಿಜೆಪಿ ಅಧ್ಯಕ್ಷರಾಗಿ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ನಗರ ಮಂಡಲದಿಂದ ಅಭಿನಂದಿಸಲಾಯಿತು. ನಗರ ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮಂಡಲದ ಅಧ್ಯಕ್ಷ ರಾಕೇಶ್ ಭಟ್, ಪ್ರಧಾನ ಕಾರ್ಯದರ್ಶಿ ಆರ್. ಸೋಮಶೇಖರ್, ಈರೇಗೌಡ, ಉಪಾಧ್ಯಕ್ಷ ಬಿ.ಸಿ.ಶಶಿಕಾಂತ್, ಶಿವು ಪಟೇಲ್, ಹೆಚ್.ಎಸ್. ಹಿರಿಯಣ್ಣ, ಮುಖಂಡರಾದ ತ್ಯಾಗರಾಜ್, ಪ್ರತಾಪ್, ಎಸ್.ಮಹೇಶ್‌ಕುಮಾರ್, ಎ.ರಾಘವೇಂದ್ರ, ಚಂದನ್ ಗೌಡ, ಶುಭಶ್ರೀ, ಪುಟ್ಟಮ್ಮಣ್ಣಿ, ವಸುಮತಿ, ಪಿ.ಸೋಮಣ್ಣ, ನಾಗೇಶ್ ನಾಯಕ್, ರಂಗೇಶ್, ದೇವರಾಜ್, ಸಾಗರ್ ಸಿಂಗ್, ಲೋಕೇಶ್ ರೆಡ್ಡಿ ಇನ್ನಿತರರು ಹಾಜರಿದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜ.20–ವಿ.ವಿ.ಮೊಹಲ್ಲಾ ಉಪವಿಭಾಗ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸದ ನಿಮಿತ್ತ ಜ.22ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ಗಂಟೆಯವರೆಗೆ ವಿ.ವಿ. ಮೊಹಲ್ಲಾ 2ನೇ ಮುಖ್ಯರಸ್ತೆ, 3ನೇ ಮುಖ್ಯರಸ್ತೆ, ಥಾಟ್ ಫೋಕಸ್, ಡಿ.ಆರ್.ಎಂ ಆಸ್ಪತ್ರೆ, ವಾಲ್ಮಿಕಿ ರಸ್ತೆ, ಟೆಂಪಲ್ ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳು. ಒಂಟಿಕೊಪ್ಪಲು 11 ಕೆ.ವಿ. ವಿದ್ಯುತ್ ಮಾರ್ಗದ ವ್ಯಾಪ್ತಿಯಲ್ಲಿ ಬರುವ ಗೋಕುಲಂ 3ನೇ ಹಂತದ 8ನೇ ಕ್ರಾಸ್, 9ನೇ ಕ್ರಾಸ್ ಮತ್ತು ಕಾಂಟೂರು ರಸ್ತೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಬಾಲ್ಯ ವಿವಾಹ ಮುಕ್ತ ಗ್ರಾಮ ಪಂಚಾಯಿತಿ ಪ್ರಶಸ್ತಿಗೆ ಅರ್ಜಿ

ಮೈಸೂರು: ಬಾಲ್ಯವಿವಾಹ ಶೂನ್ಯ ಸಹಿಷ್ಣುತೆ ಹೊಂದಿರುವ ಬಾಲ್ಯವಿವಾಹ ಮುಕ್ತ ಗ್ರಾಮ ಪಂಚಾಯಿತಿಗೆ ಅರ್ಜಿ ಆಹ್ವಾನಿಸಿದ್ದು, ಆಯಾ ಜಿಲ್ಲೆಯ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳನ್ನೊಳಗೊಂಡ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯು ಗ್ರಾಮ ಪಂಚಾಯಿತಿಗೆ ಬಾಲ್ಯವಿವಾಹ ಮುಕ್ತ ಗ್ರಾಮ ಎಂದು ಘೋಷಿಸಿ ಸದರಿ ಗ್ರಾಪಂಗೆ ಪ್ರಶಸ್ತಿ ಹಾಗೂ 25,000 ರೂ. ಪ್ರೋತ್ಸಾಹಧನ ನೀಡಲು ಅರ್ಜಿ ಅಹ್ವಾನಿಸಿದ್ದು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ನಂ.ಸಿಎ: 15–17, ಮೊದಲನೇ ಮಹಡಿ, ಅಂಜನಾದ್ರಿ ಮುಖ್ಯ ರಸ್ತೆ, 2ನೇ ಘಟ್ಟ, 4ನೇ ಹಂತ, ವಿಜಯನಗರ, ಇಲ್ಲಿ ಅರ್ಜಿ ಪಡೆದು, ಜನವರಿ 30ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 0821–2543003 ಸಂಪರ್ಕಿಸುವುದು.

ಡಾ.ಮೈಸೂರು ಮಂಜುನಾಥರಿಗೆ 'ಧನುರ್ವೈಣಿಕ ಬ್ರಹ್ಮ' ಪ್ರಶಸ್ತಿ ಪ್ರದಾನ

ಮೈಸೂರು, ಜ.20(ಎಸ್‌ಪಿಎನ್)– ಪಿಟೀಲು ಮೈಸೂರು ಟಿ.ಚೌಡಯ್ಯ ಸ್ಮರಣಾರ್ಥ ಹಿರಿಯ ಪಿಟೀಲುವಾದಕ ಡಾ.ಮೈಸೂರು ಎಂ.ಮಂಜುನಾಥ ಅವರಿಗೆ 'ಧನುರ್ವೈಣಿಕ ಬ್ರಹ್ಮ' ಪ್ರಶಸ್ತಿಯನ್ನು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಪ್ರದಾನ ಮಾಡಿದರು.

ಮೈಸೂರು ನಾದಬ್ರಹ್ಮ ಸಭಾಂಗಣದಲ್ಲಿ ಪಿಟೀಲು ಮೈಸೂರು ಟಿ.ಚೌಡಯ್ಯ ಸಂಸ್ಮರಣ ವೇದಿಕೆ ಮತ್ತು ಶ್ರೀ ನಾದಬ್ರಹ್ಮ ಸಂಗೀತ ಸಭಾ ಸಹಯೋಗದೊಂದಿಗೆ ಪಿಟೀಲು ಮೈಸೂರು ಟಿ.ಚೌಡಯ್ಯ ಸ್ಮರಣಾರ್ಥ ಏರ್ಪಡಿಸಿದ್ದ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಪಿಟೀಲು ವಾದಕ ಡಾ.ಮೈಸೂರು ಎಂ.ಮಂಜುನಾಥ ಅವರಿಗೆ 'ಧನುರ್ವೈಣಿಕ ಬ್ರಹ್ಮ' ಪ್ರಶಸ್ತಿಯನ್ನು ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ನಾಥ ಸ್ವಾಮೀಜಿ ಪ್ರದಾನ ಮಾಡಿದರು.

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, ಸರಳತೆ, ವಿನಯತೆ ಹಾಗೂ ಸಹೋದರತ್ವ ಮೈಗೂಡಿಸಿಕೊಂಡರೆ ಅವರನ್ನು ಜಗತ್ತು ಗೌರವಿಸುತ್ತದೆ. ಈ ಗುಣಗಳನ್ನು ಅಳವಡಿಸಿಕೊಂಡಿರುವ 'ಧನುರ್ವೈಣಿಕ ಬ್ರಹ್ಮ' ಪ್ರಶಸ್ತಿ ಪುರಸ್ಕೃತ ಡಾ.ಮೈಸೂರು ಎಂ.ಮಂಜುನಾಥ್ ಅವರ ಸರಳತೆಯನ್ನು ಮೆಚ್ಚಿ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಈ ಕಾರ್ಯಕ್ರಮಕ್ಕೆ ಬಂದಿದ್ದೇನೆ ಎಂದರು.

ಈ ಹಿಂದೆ ಮೈಸೂರು–ಬೆಂಗಳೂರಿನ ನಡುವಿನ ರಾಮನಗರದಲ್ಲಿ 25 ಎಕರೆ ಪ್ರದೇಶದಲ್ಲಿರುವ ಅಂಗವಿಕಲರ ಶಾಲೆಗೆ, ನನ್ನನ್ನು ಹಿರಿಯ ಶ್ರೀಗಳು, ನೇಮಿಸಿದ್ದರು. ಒಮ್ಮೆ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಹಿರಿಯ ಶ್ರೀಗಳು ಜೊತೆಗೂಡಿ ಮೈಸೂರಿಗೆ ಹೋಗುವ ಮಾರ್ಗ ಮಧ್ಯೆ ಅಂಗವಿಕಲರ ಶಾಲೆಗೆ ಭೇಟಿ ನೀಡಿ, ಕಾರ್ಯಕ್ರಮದಲ್ಲಿ ನೀಡಿದ್ದ ಹಣ್ಣಿನ ಬುಟ್ಟಿಗಳನ್ನು ಕೊಟ್ಟು ಈ ಮಕ್ಕಳಿಗೆ ಹಂಚುವಂತೆ ನನಗೆ ಸೂಚಿಸಿ, ತೆರಳಿದ್ದ ಪ್ರಸಂಗವನ್ನು ವಿವರಿಸಿದರು.

ಮತ್ತೆ ಮರುದಿನ ನನಗೆ ದೂರವಾಣಿ ಕರೆ ಮಾಡಿ, ಬೆಂಗಳೂರಿನ ಕಾರ್ಯಕ್ರಮವೊಂದರಲ್ಲಿ ನೀಡಿದ್ದ ಹಣ್ಣುಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿದ್ದೀಯಾ ಎಂದು ಕೇಳಿದರು. ಬಳಿಕ ಇಲ್ಲಿನ ಚಟುವಟಿಕೆಗಳ ಬಗ್ಗೆ ವಿಚಾರಿಸಿದರಲ್ಲದೆ, ಬೆಳಗ್ಗೆ ಪ್ರಾರ್ಥನಾ ಸಮಯದಲ್ಲಿ ಅಂಗವಿಕಲ ವಿದ್ಯಾರ್ಥಿಗಳೊಂದಿಗೆ ಸಂಗೀತಾಭ್ಯಾಸ ಮಾಡುವುದರ ಕುರಿತು ಸಲಹೆ ನೀಡಿದ್ದನ್ನು ಸ್ಮರಿಸಿದರು.

ರಾಮನಗರದ ಬಿಜಿಎಸ್ ಅಂಗವಿಕಲರ ವಿದ್ಯಾಸಂಸ್ಥೆಯಲ್ಲಿ ನನ್ನ ಕೆಲಸಕ್ಕೆ ನಿಯೋಜಿಸಿದ್ದ ವೇಳೆ, ನಾನಿನ್ನು ಸನ್ಯಾಸತ್ವ ಸ್ವೀಕರಿಸಿರಲಿಲ್ಲ. ಆಗ ಹಿರಿಯ ಶ್ರೀಗಳು, ಈ ಮಕ್ಕಳೊಂದಿಗೆ ಸಮಯ ಮೀಸಲಿಡಲು ಆದೇಶಿಸಿದ್ದರು. ಬಳಿಕ ಶ್ರೀಗಳ ಆದೇಶದಂತೆ ಅಂಗವಿಕಲ ಮಕ್ಕಳೊಂದಿಗೆ ಬೆರೆತು, ಕೆಲಸ ಮಾಡಿದ್ದ ಕೆಲ ಪ್ರಸಂಗಗಳನ್ನು ನೆನೆದರಲ್ಲದೆ, ಸಂಗೀತ ಕ್ಷೇತ್ರದಲ್ಲಿನ ಪಂಡಿತ್ ಭೀಮ್‌ಸೇನ್ ಜೋಶಿ ಅವರ ಸಾಧನೆಯನ್ನು ಕೊಂಡಾಡಿದರು. ಈ ವೇಳೆ ಡಾ.ಮೈಸೂರು ಎಂ.ಮಂಜುನಾಥ್ ಮತ್ತು ವಿದ್ವಾನ್ ಸಮಂತ್ ಮಂಜುನಾಥ್ ಅವರ ದ್ವಂದ್ವ ಪಿಟೀಲು ವಾದನ ಜನರ ಗಮನ ಸೆಳೆಯಿತು. ಇವರಿಗೆ ವಿ.ಕೆ.ಯು ಜಯಚಂದ್ರರಾವ್ (ಮೃದಂಗ), ವಿ.ಜಿ.ಗುರುಪ್ರಸನ್ನ(ಖಂಜೀರಾ) ನುಡಿಸಿದರು.

ನಾದಬ್ರಹ್ಮ ಸಂಗೀತ ಸಭಾದ ಕಾರ್ಯದರ್ಶಿ ಕೆ.ಎಸ್.ಎನ್.ಪ್ರಸಾದ್, ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ.ಆರ್.ಹರೀಶ್, ಉಪಾಧ್ಯಕ್ಷ ಎಸ್.ಕೆ.ಲಕ್ಷ್ಮೀನಾರಾಯಣ, ಖಜಾಂಚಿ ಸಿ.ಕೆ.ಸಂಜಯ್‌ಕುಮಾರ್, ಆರ್.ಅನಂತರಾಮು, ಎ.ಕೆ.ಚೇರ್, ಕೇಶವ್ ಸರಲಯ, ನಾಗರಾಜಶ್ರೀನಿವಾಸ, ರವೀಂದ್ರ ಗುಂಡರಾವ್, ಡಾ.ಪದ್ಮಾವತಿ ನರಸಿಂಹನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪ.ಮಲ್ಲೇಶ್‌ರ 3ನೇ ವರ್ಷದ ಪುಣ್ಯಸ್ಮರಣೆ



ನೃಪತುಂಗ ಕನ್ನಡ ಶಾಲೆಯಲ್ಲಿ ದಿವಂಗತ ಪ. ಮಲ್ಲೇಶ್ ಅವರ ಮೂರನೇ ವರ್ಷದ ಪುಣ್ಯಸ್ಮರಣೆ ಆಚರಿಸಲಾಯಿತು.

ಮೈಸೂರು,ಜ.20–ಮೈಸೂರಿನ ರಾಮಕೃಷ್ಣನಗರದಲ್ಲಿರುವ ನೃಪತುಂಗ ಕನ್ನಡ ಶಾಲೆಯಲ್ಲಿ ದಿವಂಗತ ಪ ಮಲ್ಲೇಶ್ ಅವರ ಮೂರನೇ ವರ್ಷದ ಪುಣ್ಯ ಸ್ಮರಣಾರ್ಥ 2ನೇ ವರ್ಷದ 'ಸಂಸ್ಥಾಪಕರ ದಿನಾಚರಣೆ'ಯನ್ನು ಆಚರಿಸಲಾಯಿತು.


ಸಂಸ್ಥೆಯ ಕಾರ್ಯದರ್ಶಿ ಪ್ರೊ.ಹೆಚ್.ಜಿ.ಕೃಷ್ಣಪ್ಪ, ಸಂಸ್ಥೆಯ ಪ್ರಥಮ ಅಧ್ಯಕ್ಷರಾದ ದಿ. ಎಚ್.ತಿಪ್ಪೇರುದ್ರಸ್ವಾಮಿ, ದೀರ್ಘಕಾಲ ಅಧ್ಯಕ್ಷರಾಗಿದ್ದ ದಿ ಪ.ಮಲ್ಲೇಶ್ ಹಾಗೂ ಕಾರ್ಯದರ್ಶಿ ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ ದಿ. ಸ.ರ. ಸುದರ್ಶನ ಭಾವಚಿತ್ರಗಳಿಗೆ ಪುಷ್ಪಾರ್ಚನೆ ಮಾಡಿ, ದಿವಂಗತ ಪ.ಮಲ್ಲೇಶ್ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದರು. ಗೋಕಾಕ್ ಚಳುವಳಿ ಮತ್ತು ವಿದ್ಯಾವರ್ಧಕ ಸಂಘದ ಬಗ್ಗೆ ಮಕ್ಕಳಿಗೆ ತಿಳಿಸಿ, ಆ ಹಿನ್ನೆಲೆಯಲ್ಲಿ ಆರಂಭವಾದ ನೃಪತುಂಗ ಕನ್ನಡ ಶಾಲೆಯ ಬಗ್ಗೆ ಪರಿಚಯಿಸಿದರು.

ಸಂಸ್ಥೆಯ ಧರ್ಮದರ್ಶಿ ನಾ ನಾಗಚಂದ್ರ ಮಾತನಾಡಿ, ಪ ಮಲ್ಲೇಶ್ ಮತ್ತು ಸ.ರ.ಸುದರ್ಶನ ಇಬ್ಬರು ಸಂಸ್ಥೆಯ ಎರಡು ಕಣ್ಣುಗಳಾಗಿದ್ದರು. ಈ ಸಂಸ್ಥೆಗಾಗಿ ಹಲವಾರು ಪ್ರಮುಖರು ದುಡಿದಿದ್ದಾರೆ. ಈ ಸಂಸ್ಥೆ ಯಾರೊಬ್ಬರ ಆಸ್ತಿಯಲ್ಲ. ಎಲ್ಲರ ಶ್ರಮದಿಂದಾಗಿ 36 ವರ್ಷಗಳಿಂದ ಇಷ್ಟು ಎತ್ತರಕ್ಕೆ ಬೆಳೆದಿದೆ. ಹಾಗೆ ಮುಂದೆಯೂ ಬೆಳೆಯಬೇಕು ಎಂದು ಹಾರೈಸಿದರು.

ಧರ್ಮದರ್ಶಿಗಳಾದ ಹೆಚ್.ಟಿ. ಶೈಲಜಾ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಾದ ಶ್ರೀಮತಿ ಶೀಲಾ, ಸಂಸ್ಥೆಯ ಕಾರ್ಯದರ್ಶಿ ಸವಿತಾ ಪ.ಮಲ್ಲೇಶ್, ಧರ್ಮದರ್ಶಿಗಳಾದ ಪ.ಮಲ್ಲೇಶ್ ಅವರ ಪುತ್ರ ಶಿವರಾಜು ಪ.ಮಲ್ಲೇಶ್, ಶಿಕ್ಷಕ–ಶಿಕ್ಷಕೇತರ ವರ್ಗದವರು ಹಾಗೂ ಮಕ್ಕಳು ಉಪಸ್ಥಿತರಿದ್ದರು.

ದೇಶ – ವಿದೇಶ

ಭಾರತೀಯರಿಗೆ ವೀಸಾ ಮುಕ್ತ ಪ್ರವೇಶ ರದ್ದು



ನವದೆಹಲಿ: ಇತ್ತೀಚಿನ ರಾಜತಾಂತ್ರಿಕ ಬೆಳವಣಿಗೆಗಳು ಮತ್ತು ಭದ್ರತಾ ಕಾರಣಗಳಿಂದಾಗಿ ಸೆರ್ಬಿಯಾ ಹಾಗೂ ಇರಾನ್ ದೇಶಗಳು ಭಾರತೀಯ ಪ್ರವಾಸಿಗರಿಗೆ ನೀಡಿದ್ದ 'ವೀಸಾ ಮುಕ್ತ'(Visa-Free) ಪ್ರವೇಶ ಸೌಲಭ್ಯವನ್ನು ರದ್ದುಗೊಳಿಸಿವೆ. ಇನ್ನು ಮುಂದೆ ಈ ದೇಶಗಳಿಗೆ ಭೇಟಿ ನೀಡುವ ಭಾರತೀಯರು ಕಡ್ಡಾಯವಾಗಿ ವೀಸಾ ಪಡೆಯುವುದು ಅನಿವಾರ್ಯವಾಗಿದೆ.

ಯುರೋಪ್ ರಾಷ್ಟ್ರವಾದ ಸೆರ್ಬಿಯಾ ಈ ಹಿಂದೆ ಭಾರತೀಯರಿಗೆ 30 ದಿನಗಳ ಕಾಲ ವೀಸಾ ಮುಕ್ತ ಪ್ರವೇಶ ನೀಡಿತ್ತು. ಆದರೆ, ಇತ್ತೀಚಿನ ಯುರೋಪಿಯನ್ ಯೂನಿಯನ್(EU) ವೀಸಾ ನೀತಿಗಳ ಬದಲಾವಣೆ ಮತ್ತು ಅಕ್ರಮ ವಲಸೆ ತಡೆಗಟ್ಟುವ ಉದ್ದೇಶದಿಂದ ಈ ಸೌಲಭ್ಯವನ್ನು ಹಿಂತೆಗೆದುಕೊಂಡಿದೆ. ಇತ್ತೀಚೆಗೆ ಇರಾನ್ ಕೂಡ ಭಾರತೀಯರಿಗೆ ವೀಸಾ ಮುಕ್ತ ಪ್ರವೇಶ ಘೋಷಿಸಿತ್ತಾದರೂ, ಅದಕ್ಕೆ ಕೆಲವು ಕಠಿಣ ಷರತ್ತುಗಳನ್ನು ವಿಧಿಸಿದೆ. ಪ್ರವಾಸೋದ್ಯಮ ಉದ್ದೇಶಕ್ಕಾಗಿ ವಿಮಾನದ ಮೂಲಕ ಬರುವವರಿಗೆ ಮಾತ್ರ ವಿನಾಯಿತಿ ಇದ್ದು, ವ್ಯಾಪಾರ ಅಥವಾ ಶಿಕ್ಷಣಕ್ಕಾಗಿ ಹೋಗುವವರು ಮತ್ತು ರಸ್ತೆ ಮಾರ್ಗವಾಗಿ ತೆರಳುವ ಎಲ್ಲರೂ ಕಡ್ಡಾಯವಾಗಿ ವೀಸಾ ಪಡೆಯಬೇಕು. ಅದೂ ಪ್ರತಿ 6 ತಿಂಗಳಿಗೆ ಕೇವಲ ಒಂದು ಬಾರಿ ಮಾತ್ರ ಈ ಸೌಲಭ್ಯ ಬಳಸಿಕೊಳ್ಳಬಹುದು ಎಂಬ ನಿಯಮ ವಿಧಿಸಲಾಗಿದೆ. ಮಾಹಿತಿಗೆ ಪ್ರಯಾಣಿಸುವ ಮುನ್ನ ಆಯಾ ದೇಶಗಳ ಅಧಿಕೃತ ರಾಯಭಾರ ಕಚೇರಿಯ ವೆಬ್‌ಸೈಟ್ ಪರೀಕ್ಷಿಸುವುದು ಉತ್ತಮ.

ಲಂಡನ್‌ನಲ್ಲಿ ತಿಲಕವಿಟ್ಟ ಬಾಲಕನಿಗೆ ನಿಂದನೆ



ಲಂಡನ್: ಲಂಡನ್‌ನ ಶಾಲೆಯೊಂದರಲ್ಲಿ 8 ವರ್ಷದ ಹಿಂದೂ ವಿದ್ಯಾರ್ಥಿಯೊಬ್ಬ ತಿಲಕ ಧರಿಸಿದ್ದಕ್ಕಾಗಿ ತಾರತಮ್ಯ ಎದುರಿಸಿ, ಶಾಲೆಯನ್ನೇ ಬಿಟ್ಟ ಘಟನೆ ನಡೆದಿದೆ. ಬಾಲಕ ಬಿಡುವಿನ ಸಮಯದಲ್ಲಿ ಆಟವಾಡುವಾಗ ಶಾಲೆಯ ಮುಖ್ಯೋಪಾಧ್ಯಾಯರು ಆತನ ಬೆನ್ನುಬಿದ್ದು, ನಿರಂತರವಾಗಿ ಆತನನ್ನು ಮುಜುಗರಕ್ಕೊಳಗಾಗುವಂತೆ ಮೇಲ್ವಿಚಾರಣೆ ಮಾಡಿದ್ದಾರೆ. ಇದರಿಂದ ಆತ ಗೆಳೆಯರೊಂದಿಗೆ ಆಟವಾಡಲಾಗದೆ ಒಂಟಿಯಾಗಿ ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿ, ಕೊನೆಗೆ ಶಾಲೆಯನ್ನೇ ಬಿಟ್ಟು ಬೇರೆ ಶಾಲೆಗೆ ಸೇರಿದ್ದಾನೆ. ಈ ಬಗ್ಗೆ ಬ್ರಿಟಿಷ್ ಹಿಂದೂ ಮತ್ತು ಭಾರತೀಯ ಸಮುದಾಯವನ್ನು ಪ್ರತಿನಿಧಿಸುವ ಸಾಮಾಜಿಕ ಚಳುವಳಿ ಮತ್ತು ವಕಾಲತ್ತು ಸಂಸ್ಥೆಯಾದ ಇನ್ಸೈಟ್ ಯುಕೆ ಆಕ್ರೋಶ ವ್ಯಕ್ತಪಡಿಸಿದೆ. ಇದು ಅಪ್ರಾಪ್ತನ ವಿರುದ್ಧ ನಡೆದಿರುವ ಅನುಚಿತ ವರ್ತನೆ ಎಂದು ಕರೆದಿದ್ದಾರೆ.

ಯಾವುದೇ ಮಗುವು ತಮ್ಮ ನಂಬಿಕೆಯ ಕಾರಣದಿಂದ ತಾರತಮ್ಯ ಅನುಭವಿಸಬಾರದು. ಇಂತಹ ಅನುಭವಗಳು ಶಾಶ್ವತ ಭಾವನಾತ್ಮಕ ಪರಿಣಾಮಗಳನ್ನು ಬೀರಬಹುದು ಎಂದು ಆತಂಕ ವ್ಯಕ್ತಪಡಿಸಿದೆ.

ನಾಲ್ಕು ವರ್ಷಗಳಲ್ಲಿ ಭಾರತ ಮೇಲ್ಮಧ್ಯಮ ಆದಾಯದ ದೇಶ



ನವದೆಹಲಿ: ಸಾರ್ವಜನಿಕರ ತಲಾದಾಯ ಹೆಚ್ಚಳದೊಂದಿಗೆ ಭಾರತವು 2030ರ ವೇಳೆಗೆ 'ಮೇಲ್ಮಧ್ಯಮ ಆದಾಯದ ದೇಶ'ವಾಗುವ ಸಾಧ್ಯತೆಯಿದೆ.

ಪ್ರಸ್ತುತ ಇರುವ ತಲಾ ಆದಾಯ ಸುಮಾರು $ 3,000ರಿಂದ $ 4,000 ಕ್ಕೆ ಏರುವುದರೊಂದಿಗೆ ದೇಶ ಆರ್ಥಿಕವಾಗಿ ಪ್ರಗತಿಯಾಗಲಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸಂಶೋಧನಾ ವರದಿಯಲ್ಲಿ ತಿಳಿಸಿದೆ. ವಿಶ್ವ ಬ್ಯಾಂಕ್‌ನ ವರ್ಗೀಕರಣದ ಪ್ರಕಾರ ಭಾರತ 2007ರಲ್ಲಿ 'ಕಡಿಮೆ–ಆದಾಯದ ದೇಶ'ದ ಪಟ್ಟಿಯಿಂದ 'ಕಡಿಮೆ–ಮಧ್ಯಮ ಆದಾಯ' ರಾಷ್ಟ್ರವಾಗಿ ಹೊರಹೊಮ್ಮಿತು. 1962ರಲ್ಲಿದ್ದ ದೇಶದ ತಲಾ ಒಟ್ಟು ರಾಷ್ಟ್ರೀಯ ಆದಾಯ 2007ರ ವೇಳೆಗೆ ಹತ್ತು ಪಟ್ಟು ಹೆಚ್ಚಾಗಿತ್ತು. ಸದ್ಯ ಎಸ್‌ಬಿಐ ಸಂಶೋಧನಾ ವರದಿ ಪ್ರಕಾರ ಮುಂದಿನ ನಾಲ್ಕು ವರ್ಷಗಳಲ್ಲಿ ಭಾರತ ಮತ್ತೊಂದು ಹಂತ ಏರಲಿದೆ. ತಲಾ ಆದಾಯದಲ್ಲಿ $ 1,000ದಷ್ಟು ಹೆಚ್ಚಾಗಿ 'ಮೇಲ್ಮಧ್ಯಮ ಆದಾಯದ ದೇಶ'ವಾಗುವ ಸಾಧ್ಯತೆ ಇದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ ಸೌಮ್ಯ ಕಾಂತಿ ಘೋಷ್ ತಂಡ ಬರೆದಿರುವ ವರದಿಯಲ್ಲಿ ತಿಳಿಸಲಾಗಿದೆ. ವಿಶ್ವಬ್ಯಾಂಕ್‌ನಿಂದ ಮಿತಿ ಮಟ್ಟವನ್ನು ಪರಿಷ್ಕರಿಸದಿದ್ದಲ್ಲಿ ತಲಾ ಆದಾಯದಲ್ಲಿ ವಾರ್ಷಿಕ ಸರಾಸರಿ ಶೇ.7.5ರಷ್ಟು ಬೆಳವಣಿಗೆಯೊಂದಿಗೆ 2047ರ ವೇಳೆಗೆ ಭಾರತವು ಹೆಚ್ಚಿನ ಆದಾಯದ ರಾಷ್ಟ್ರದ ಸ್ಥಾನಮಾನ ಸಾಧಿಸಬಹುದು ಎಂದು ಹೇಳಲಾಗಿದೆ.

'ಗ್ರೀನ್‌ಲ್ಯಾಂಡ್ ಅಮೆರಿಕ ಪ್ರಾಂತ್ಯ' ಎಂದು ಟ್ರಂಪ್ ಪೋಸ್ಟ್



ಅಮೆರಿಕ: 'ಗ್ರೀನ್‌ಲ್ಯಾಂಡ್ ಅಮೆರಿಕ ಪ್ರಾಂತ್ಯ' ಎಂದು ಟ್ರಂಪ್ ಪೋಸ್ಟ್ 2026ರಲ್ಲಿ ಅಸ್ತಿತ್ವಕ್ಕೆ ಬಂದಿದೆ ಎಂಬ ಪೋಸ್ಟ್ ಅನ್ನು ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ಟ್ರೂತ್ ಸೋಶಿಯಲ್ ಪ್ಲಾಟ್‌ಫಾರ್ಮ್‌ನಲ್ಲಿ ಮಂಗಳವಾರ ಹಂಚಿಕೊಂಡಿದ್ದಾರೆ.

ಗ್ರೀನ್‌ಲ್ಯಾಂಡ್ ಮತ್ತು ವೆನೆಜುವೆಲಾವನ್ನು ಅಮೆರಿಕದ ಭಾಗವಾಗಿ ಚಿತ್ರಿಸುವ ಧ್ವಜದೊಂದಿಗೆ ಟ್ರಂಪ್, ಇತರ ಯುರೋಪಿಯನ್ ನಾಯಕರೊಂದಿಗೆ ತಮ್ಮ ಹಳೆಯ ಛಾಯಾಚಿತ್ರವನ್ನು ತೋರಿಸುವ ಪೋಸ್ಟ್ ಹಂಚಿಕೊಳ್ಳುವ ಮೂಲಕ ಗ್ರೀನ್‌ಲ್ಯಾಂಡ್ ಪಡೆದೇ ತೀರುತ್ತೇವೆಂಬ ಸಂದೇಶ ರವಾನಿಸಿದ್ದಾರೆ. ಟ್ರಂಪ್ ಪಕ್ಕದಲ್ಲಿ ಅದರ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಮತ್ತು ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಗ್ರೀನ್‌ಲ್ಯಾಂಡ್‌ನಲ್ಲಿ ಯುಎಸ್ ಧ್ವಜವನ್ನು ಹಾರಿಸುತ್ತಿರುವುದು ಹಾಗೂ ಅದರ ಮೇಲೆ 'ಗ್ರೀನ್‌ಲ್ಯಾಂಡ್ ಯುಎಸ್ ಟೆರಿಟರಿ, ಸ್ಥಾಪನೆ 2026' ಎಂದು ಬರೆಯಲಾದ ಮೈಲಿಗಲ್ಲು ಇದೆ. ಮತ್ತೊಂದು ಪೋಸ್ಟ್‌ನಲ್ಲಿ ಟ್ರಂಪ್ ಜೊತೆ ಓವಲ್ ಕಚೇರಿಯೊಳಗೆ ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರೋನ್, ಇಟಲಿಯ ಜಾರ್ಜಿಯಾ ಮೆಲೋನಿ, ಯುಕೆ ಪ್ರಧಾನಿ ಕೀರ್ ಸ್ಟಾರ್ಮರ್ ಸೇರಿದಂತೆ ನ್ಯಾಟೋ ನಾಯಕರು ಯುರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಇತರರು ಇದ್ದಾರೆ. ಟ್ರಂಪ್ ಆಡಳಿತ ವೆನೆಜುವೆಲಾದ ಮಧ್ಯಂತರ ಅಧಿಕಾರಿಗಳೊಂದಿಗೆ ನಿಕಟ ಪತ್ರ ವ್ಯವಹಾರದಲ್ಲಿದ್ದಾರೆ.

ಒಂದೇ ಕುಟುಂಬದ ಐವರು ಅನುಮಾನಾಸ್ಪದ ಸಾವು

ಉತ್ತರ ಪ್ರದೇಶ: ಇಲ್ಲಿನ ಸಹರಾನ್‌ಪುರದಲ್ಲಿ ಒಂದೇ ಕುಟುಂಬದ ಐವರು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ನಡೆದಿದೆ.



ಭೂ ಸರ್ವೇಯರ್ ಅಶೋಕ್ (40), ಅವರ ಪತ್ನಿ ಅಂಜಿತಾ (37), ಅವರ ತಾಯಿ ವಿದ್ಯಾವತಿ(70) ಮತ್ತು ಪುತ್ರರಾದ ಕಾರ್ತಿಕ್ (16) ಮತ್ತು ದೇವ್(13) ಕೊಠಡಿಯೊಂದರಲ್ಲಿ ಮೃತಪಟ್ಟಿರುವುದು ಪತ್ತೆಯಾಗಿದೆ. ಪ್ರಾಥಮಿಕ ತನಿಖೆಯಲ್ಲಿ ಅಶೋಕ್ ಅವರ ಎದೆಗೆ ಹಾಗೂ ಮಕ್ಕಳ ಹಣೆಗೆ ಗುಂಡೇಟಿನ ಗಾಯಗಳಿರುವುದು ತಿಳಿದುಬಂದಿದೆ. ಶವಗಳ ಸಮೀಪದಲ್ಲಿ ಮೂರು ಪಿಸ್ತೂಲ್‌ಗಳು ಪತ್ತೆಯಾಗಿವೆ. ಪೊಲೀಸ್ ಅಧಿಕಾರಿಗಳು ಮತ್ತು ವಿಧಿವಿಜ್ಞಾನ ತಂಡ ತನಿಖೆ ಮುಂದುವರೆಸಿದೆ.

ತಂದೆಯ ಮರಣದ ನಂತರ ಅಶೋಕ್ ಅವರನ್ನು ನಕುರ್ ತಹಸಿಲ್‌ನಲ್ಲಿ ಕಂದಾಯ ಅಧಿಕಾರಿ(ಭೂ ಸರ್ವೇಯರ್) ಆಗಿ ನೇಮಿಸಲಾಗಿತ್ತು. ಅವರ ಮಗ ದೇವ್ ನಗರದ ಎಂಟಿಎಸ್ ಪಬ್ಲಿಕ್ ಶಾಲೆಯಲ್ಲಿ 9ನೇ ತರಗತಿ ಹಾಗೂ ಕಾರ್ತಿಕ್ ನಕುಡ್‌ನ ಮಧ್ಯಂತರ ಕಾಲೇಜಿನಲ್ಲಿ 10ನೇ ತರಗತಿ ಓದುತ್ತಿದ್ದ. ದಂಪತಿ ಶವಗಳು ನೆಲದ ಮೇಲೆ ಬಿದ್ದಿದ್ದರೆ, ಉಳಿದ ಮೂವರ ಶವ ಹಾಸಿಗೆ ಮೇಲಿದ್ದವು. ಅಶೋಕ್ ಸಹೋದರ ಎಷ್ಟು ಬಾರಿ ಕರೆ ಮಾಡಿದರೂ ಸ್ವೀಕರಿಸದ ಕಾರಣ ಮನೆಗೆ ಬಂದು ನೋಡಿದಾಗ ಘಟನೆ ಬೆಳಕಿಗೆ ಬಂದಿದೆ. ತನಿಖೆ ಮುಂದುವರೆದಿದೆ.

ಮೈಸೂರು ಮಿತ್ರ ಬುಧವಾರ 21 ಜನವರಿ 2026

ಮನರೇಗಾ ಹೆಸರು ಬದಲಿಸಿ ಕೇಂದ್ರ ಸರ್ವಾಧಿಕಾರಿ ಧೋರಣೆ

ಮಡಿಕೇರಿ,ಜ.20–ಪ್ರಜಾತಂತ್ರದ ಒಕ್ಕೂಟ ವ್ಯವಸ್ಥೆಯಡಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳ ಅಭಿಪ್ರಾಯವನ್ನು ಪಡೆಯದೆ 'ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ' ಯೋಜನೆಯನ್ನು ಕಾನೂನು ತಿದ್ದುಪಡಿಯ ಮೂಲಕ 'ವಿಬಿ ರಾಮ್ ಜಿ' ಯೋಜನೆಯನ್ನಾಗಿ ಪರಿವರ್ತಿಸುವ ಮೂಲಕ ಸರ್ವಾಧಿಕಾರಿಯಂತೆ ವರ್ತಿಸಿ ಗ್ರಾಪಂ ಅಧಿಕಾರವನ್ನು ಕಸಿದುಕೊಂಡಿದೆ ಎಂದು ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಆರೋಪಿಸಿದ್ದಾರೆ.



ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡವರ್ಗದ ಮಂದಿಯ ಕೈಗೆ ಕೆಲಸವನ್ನು ಒದಗಿಸುತ್ತಿದ್ದ ನರೇಗಾ ಯೋಜನೆ ರಾಷ್ಟ್ರವ್ಯಾಪಿ ಕೋಟ್ಯಾಂತರ ಬಡ ಜನರ ಬದುಕಿಗೆ ಆಧಾರವಾಗಿತ್ತು. ಇಂತಹ ಯೋಜನೆಯನ್ನು ಯಾವುದೇ ಸಂಘ–ಸಂಸ್ಥೆ, ಜನಪ್ರತಿನಿಧಿಗಳು, ರಾಜ್ಯ ಸರ್ಕಾರಗಳೊಂದಿಗೆ ಚರ್ಚಿಸದೆ ಕೇವಲ 72 ಗಂಟೆಗಳಲ್ಲಿ ತರಾತುರಿಯಿಂದ ಬದಲಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಜಾರಿಗೆ ತಂದಿರುವ ವಿಬಿ ರಾಮ್ ಜಿ ಯೋಜನೆಯನ್ನು ಹಿಂಪಡೆಯುವವರೆಗೂ ಅದರ ವಿರುದ್ಧ ಜನಜಾಗೃತಿಯನ್ನು ಮೂಡಿಸುವುದರೊಂದಿಗೆ ಹೋರಾಟಗಳನ್ನು ರಾಷ್ಟ್ರವ್ಯಾಪಿ ಕಾಂಗ್ರೆಸ್ ನಡೆಸಲಿದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲು ರಾಜ್ಯ ಸರ್ಕಾರ 7 ದಿನಗಳ ವಿಶೇಷ ಅಧಿವೇಶನವನನ್ನು ಕರೆದಿದೆ ಎಂದರು. ಹಿಂದಿನ ನರೇಗಾ ಯೋಜನೆಯಲ್ಲಿ ಕಾಮಗಾರಿಗಳನ್ನು ನಡೆಸಲು ಗ್ರಾ.ಪಂ.ಗಳಿಗೆ ನೀಡಲಾಗಿದ್ದ ಅಧಿಕಾರವನ್ನು ಹಿಂದಕ್ಕೆ ಪಡೆಯಲಾಗಿದೆ. ನೂತನ ವಿಬಿ ರಾಮ್ ಜಿ ಯೋಜನೆಯಲ್ಲಿ ಕೇಂದ್ರವೆ ಗ್ರಾಪಂಗಳನ್ನು ಆಯ್ಕೆ ಮಾಡಿ ಕಾಮಗಾರಿಗಳನ್ನು ನಿರ್ಧರಿಸಲಿದೆ. ಆ ಮೂಲಕ ಗ್ರಾ.ಪಂ.ಗಳು ಕ್ರಿಯಾಯೋಜನೆ ಮಾಡುವ ಹಕ್ಕನ್ನು ಕಸಿದುಕೊಂಡಿದೆ ಎಂದು ಗಂಭೀರವಾಗಿ ಆರೋಪಿಸಿದರು.

ಪ್ರಜಾಪ್ರಭುತ್ವ ವಿರೋಧಿಗಳು: ಒಕ್ಕೂಟ ವ್ಯವಸ್ಥೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವಕ್ಕೆ ವಿರುದ್ಧವಾಗಿ ವಿಬಿ ರಾಮ್ ಜಿ ಯೋಜನೆಯಡಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳಿಗೆ ಶೇ.40ರ ಆರ್ಥಿಕ ಹೊರೆಯನ್ನು ಹೊರಿಸಿರುವುದು ನಿಯಮಗಳಿಗೆ ವಿರುದ್ಧವಾಗಿದೆ ಎಂದು ಶಾಸಕ ಪೊನ್ನಣ್ಣ ಸ್ಪಷ್ಟಪಡಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಧರ್ಮಜ ಉತ್ತಪ್ಪ, ಪಕ್ಷದ ಪ್ರಮುಖರಾದ ಕೆ.ಬಿ. ಶಾಂತಪ್ಪ, ತೆನ್ನಿರ ಮೈನ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಅಪ್ರಬುದ್ಧ ಹೇಳಿಕೆ ನೀಡಲು ಬಿಜೆಪಿ ಮುಖಂಡರಿಗೆ ನಾಚಿಕೆ ಆಗಲ್ವೆ?

ಮಡಿಕೇರಿ, ಜ.20– ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಮುಖಂಡರಾದ ಬಿ.ವೈ.ವಿಜಯೇಂದ್ರ ಮತ್ತು ಆರ್.ಅಶೋಕ್ ಅವರು ಅಪ್ರಬುದ್ಧ ಹೇಳಿಕೆಗಳನ್ನು ನೀಡು ತ್ತಲೆ ಬರುತ್ತಿದ್ದು, ಇವರಿಗೆ ನಾಚಿಕೆ ಇಲ್ಲವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಬೆಳಗ್ಗಿನಿಂದ ಸಂಜೆಯವರೆಗೆ ಕಾಂಗ್ರೆಸ್ ಕುರಿತು ತಪ್ಪು ಸಂದೇಶ ಸಾರುವ, ಜನರನ್ನು ಹಾದಿ ತಪ್ಪಿಸುವ ಹೇಳಿಕೆಗಳನ್ನು ಬೊಗಳುತ್ತಲೆ ಇರುತ್ತಾರೆ ಎಂದು ಆಕ್ರೋಷ ವ್ಯಕ್ತಪಡಿಸಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರ ಜನರಿಗೆ ಕೊಟ್ಟ ಭರವಸೆಗಳಲ್ಲಿ ಶೇ.92ರಷ್ಟನ್ನು ಪಾಲಿಸಿದೆ. ಇಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬೊಗಳುವವರು, ರಾಜ್ಯದ ಜನತೆಗೆ ಕೇಂದ್ರದಿಂದ ತೊಂದರೆಯಾಗುತ್ತಿದೆ ಎನ್ನುವ ಹಂತದಲ್ಲಿ ಬಾಯಿ ತೆರೆಯುವುದಿಲ್ಲ ಎಂದು ವ್ಯಂಗ್ಯವಾಡಿದರು. ಇವರಿಗೆ ಕಾಂಗ್ರೆಸ್ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ ಇಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜಿಲ್ಲೆಗೆ ಕೀರ್ತಿ ತಂದ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟ



ಮಹಿಳೆಯರ ಮುಕ್ತ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ತಂಡ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿತು.

ನಾಪೋಕ್ಲು, ಜ.20(ದುಗ್ಗಳ)–ಸಂಕ್ರಾಂತಿ ಸಂಭ್ರಮದ ಮಹಿಳೆಯರ ಮುಕ್ತ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ತಂಡ ದ್ವಿತೀಯ ಸ್ಥಾನ ತನ್ನದಾಗಿಸಿಕೊಂಡಿದೆ.

ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳ ಹಾಗೂ ಕಲ್ಲಪಳ್ಳಿ ಗ್ರಾಮ ಒಳಗೊಂಡ ಪುರುಷರ ಗ್ರಾಮವಾರು ಕಬ್ಬಡಿ ಪಂದ್ಯಾಟ ಮತ್ತು ಮಹಿಳೆಯರ ಮುಕ್ತ ಹಗ್ಗ ಜಗ್ಗಾಟ ಸಂಕ್ರಾಂತಿ ಸಂಭ್ರಮ ಪೆರಾಜೆ ಕುಂಬಳಚೇರಿ ಸರ್ಕಾರಿ ಮಾಧ್ಯಮಿಕ ಶಾಲಾ ಮೈದಾನದಲ್ಲಿ ಜರುಗಿತು.

ಕ್ರೀಡಾಕೂಟದಲ್ಲಿ ಮಹಿಳೆಯರ ಮುಕ್ತ ಹಗ್ಗ ಜಗ್ಗಾಟ ಸ್ಪರ್ಧೆಯಲ್ಲಿ ನಾಗಬ್ರಹ್ಮ ಕೊಡಿಯಾಲ್ ತಂಡ ಪ್ರಥಮ ಸ್ಥಾನ ಪಡೆದುಕೊಂಡರು. ಚೇರಂಬಾಣೆ ಗೌಡ ಮಹಿಳಾ ಒಕ್ಕೂಟದ ತಂಡ ದ್ವಿತೀಯ ಸ್ಥಾನ ಪಡೆದುಕೊಂಡು ನಗದು ಹಾಗೂ ಟ್ರೋಫಿಯನ್ನು ತನ್ನದಾಗಿಸಿಕೊಂಡು ಜಿಲ್ಲೆಗೆ ಕೀರ್ತಿಯನ್ನು ತಂದಿದ್ದಾರೆ.

ಸಹಕಾರ ಸಂಘಗಳು ಭ್ರಷ್ಟಾಚಾರ ಮುಕ್ತವಾದಾಗ ಮಾತ್ರ ಸಹಕಾರಿ ಕ್ಷೇತ್ರದ ಬೆಳವಣಿಗೆ ಸಾಧ್ಯ

ಮಡಿಕೇರಿ, ಜ.20–ಜನಪ್ರತಿನಿಧಿಗಳು ಹಾಗೂ ಗ್ರಾಹಕರ ನಡುವಿನ ಸೇತುವೆಯಂತೆ ಕಾರ್ಯನಿರ್ವಹಿತ್ತಿರುವ ಸಹಕಾರ ಸಂಘಗಳು ಭ್ರಷ್ಟಾಚಾರ ಮುಕ್ತವಾಗಿದ್ದಾಗ ಮಾತ್ರ ಸಹಕಾರಿ ಕ್ಷೇತ್ರದ ಬೆಳವಣಿಗೆ ಸಾಧ್ಯ ಎಂದು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷ ಕೆ.ಪಿ.ಗಣಪತಿ ಅಭಿಪ್ರಾಯಪಟ್ಟಿದ್ದಾರೆ.



ಸಹಕಾರ ಸಂಘಗಳ ಕಾರ್ಯನಿರ್ವಾಹಕರ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು

ರಾಜ್ಯ ಸಹಕಾರ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್‌ನ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಫ್ಯಾಕ್ಸ್, ಪಿಕಾರ್ಡ್ ಬ್ಯಾಂಕ್, ಎಪಿಸಿಎಂಎಸ್ ಹಾಗೂ ಜೇನು ಸಹಕಾರ ಸಂಘಗಳ ಕಾರ್ಯನಿರ್ವಾಹಕರುಗಳಿಗೆ ಇತ್ತೀಚಿನ ಸಹಕಾರ ಕಾಯ್ದೆ, ಕಾನೂನು ತಿದ್ದುಪಡಿ ಮತ್ತು ಜಿ.ಎಸ್.ಟಿ, ಆದಾಯ ತೆರಿಗೆ ಕುರಿತು ಶಿಕ್ಷಣ ಕಾರ್ಯಕ್ರಮವನ್ನು ಉದ್ಘಾಟಿಸಿ, ಹಿಂದೆ ಸಹಕಾರಿ ಕ್ಷೇತ್ರದಲ್ಲಿ ಕೊಡಗು ಇತರರಿಗೆ ಮಾದರಿಯಾಗಿತ್ತು, ಆದರೆ ಇಂದು ಅವ್ಯವಹಾರ ನುಸುಳಿದೆ. ಈ ಬಗ್ಗೆ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಹಕಾರಿ ಕ್ಷೇತ್ರವನ್ನು ಭ್ರಷ್ಟಾಚಾರ ಮುಕ್ತಗೊಳಿಸಬೇಕು ಮತ್ತು ಸಹಕಾರ ಸಂಘಗಳ ಬೆಳವಣಿಗೆಗೆ ಶ್ರಮಿಸಬೇಕು ಎಂದು ತಿಳಿಸಿದರು. ಅಧಿಕಾರಿಗಳು ಹಾಗೂ ಸಿಬ್ಬಂದಿ ಶಿಸ್ತು ಮತ್ತು ಸಮಯ ಪಾಲನೆ ಮಾಡುವುದು, ಸಹಕಾರ ಕ್ಷೇತ್ರದ ಕಾನೂನು ಕಾಯ್ದೆ ಅರಿತು ಕೊಳ್ಳುವುದು ಅತಿ ಮುಖ್ಯ. ಆಡಳಿತ ಮಂಡಳಿ ಹಾಗೂ ಅಧಿಕಾರಿಗಳು ಕಾಯ್ದೆಯ ಪುಸ್ತಕಗಳನ್ನು ಮನವರಿಕೆ ಮಾಡಿಕೊಳ್ಳಬೇಕು. ಸಹಕಾರ ಸಂಘಗಳು ಆಯೋಜನೆ ಮಾಡುವ ಕಾರ್ಯಕ್ರಮಗಳಿಗೆ ಸಮಯಕ್ಕೆ ಸರಿಯಾಗಿ ತೆರಳಬೇಕು. ಶಿಕ್ಷಣ ಕಾರ್ಯಕ್ರಮಗಳನ್ನು ಸದುಪಯೋಗಪಡಿಸಿಕೊಂಡು ದೈನಂದಿನ ಚಟುವಟಿಕೆಯಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾ ಸಹಕಾರ ಯೂನಿಯನ್‌ನ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ, ಸಹಕಾರ ಸಂಘಗಳಿಗೆ ಕೇಂದ್ರ ಸರಕಾರ ಸಹಕಾರ ಮಂತ್ರಾಲಯವನ್ನು ಸ್ಥಾಪಿಸಿದೆ. ಇದು ದೇಶದಲ್ಲಿ ಸಹಕಾರ ಚಳುವಳಿಯನ್ನು ಬಲಪಡಿಸಲು ಮತ್ತು ಸಹಕಾರ ಸಂಘಗಳಿಗೆ ಸೂಕ್ತ ನೀತಿ, ಕಾನೂನು ಚೌಕಟ್ಟು ನೀಡಲು ಸಹಕಾರಿಯಾಗಿದೆ. ಸಚಿವಾಲಯವು ಸಹಕಾರ ಸಂಘಗಳ ಅಭಿವೃದ್ಧಿಗಾಗಿ ನೀತಿಗಳನ್ನು ರೂಪಿಸಿ ಬೆಂಬಲ ನೀಡುತ್ತದೆ ಎಂದರು

ಕೊಮಾರಪ್ಪ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಕೆ.ಟಿ.ಪರಮೇಶ್, ಬಲ್ಲಾರಂಡ ಮಣಿ ಉತ್ತಪ್ಪ, ಎ.ಸಿ.ಕುಶಾಲಪ್ಪ, ಎಂ.ಟಿ. ಸುಬ್ಬಯ್ಯ, ವಿ.ಸಿ.ಅಮೃತ್, ಎಂ.ಎಂ. ಶ್ಯಾಮಲಾ, ಎಸ್.ಆರ್. ಸುನಿಲ್‌ರಾವ್ ಇದ್ದರು.

ಜ.27, ಸಿದ್ದಾಪುರದಲ್ಲಿ ಜನಾಕ್ರೋಶ ಸಭೆ

ಮಡಿಕೇರಿ: ಜಿಲ್ಲಾ ವ್ಯಾಪ್ತಿಯಲ್ಲಿ ಲವ್ ಜಿಹಾದ್ ಮತ್ತು ಮತಾಂತರ ವ್ಯಾಪಕವಾಗಿ ನಡೆಯುತ್ತಿರುವುದರ ವಿರುದ್ಧ ಹಿಂದೂ ಸುರಕ್ಷಾ ಸಮಿತಿ ಜ.27ರಂದು ಸಿದ್ದಾಪುರದಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಜನಾಕ್ರೋಶ ಸಭೆ ನಡೆಸಲಿದೆ. ಬೆಳಿಗ್ಗೆ 10.30ಕ್ಕೆ ಸಿದ್ದಾಪುರದ ಶ್ರೀ ಅಯ್ಯಪ್ಪ ದೇವಾಲಯದ ಆವರಣದಿಂದ ಬಸ್ ನಿಲ್ದಾಣದವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಲಿದೆ.

ವಿಶೇಷ ಚೇತನರಿಗೆ ಉಚಿತ ನೇತ್ರ ತಪಾಸಣಾ ಶಿಬಿರ

ಮಡಿಕೇರಿ, ಜ.20–ಸುಂಟಿಕೊಪ್ಪದಲ್ಲಿ ವಿಶೇಷ ಚೇತನರು ಮತ್ತು ಅವರ ಆರೈಕೆದಾರರಿಗೆ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು.

ಸ್ವಸ್ಥ ವಿಶೇಷ ಶಿಕ್ಷಣ ಮತ್ತು ಪುನರ್ವಸತಿ ಕೇಂದ್ರದಲ್ಲಿ ಸಂಸ್ಥೆಯ ಸಮುದಾಯ ಆಧಾರಿತ ಪುನರ್ವಸತಿ ಯೋಜನೆ ಮತ್ತು ಬೆಂಗಳೂರಿನ ಶ್ರೀ ಕೇಶವ ಟ್ರಸ್ಟ್ ಸಹಯೋಗದೊಂದಿಗೆ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್‌ನ ಕೊಡಗು ವಿಭಾಗದ ಅಧ್ಯಕ್ಷ ಡಾ.ಶ್ಯಾಮ್ ಅಪ್ಪಣ್ಣ ಶಿಬಿರದಲ್ಲಿ ಪಾಲ್ಗೊಂಡು ಖಾಯಿಲೆಗಳನ್ನು ಮುಂಚಿತವಾಗಿ ನಿರ್ಣಯ ಮಾಡುವ ಪ್ರಾಮುಖ್ಯತೆಯ ಬಗ್ಗೆ ಮಾಹಿತಿ ನೀಡಿದರು.

ಬೆಂಗಳೂರಿನ ನೇತ್ರತಜ್ಞ ಡಾ. ಪ್ರವೀಣ್ ಆರ್.ಮೂರ್ತಿ ಮಾತನಾಡಿ, ದೃಷ್ಟಿ ಸಮಸ್ಯೆಗಳಿಗೆ ಇರುವ ಥೆರಪಿಗಳ ಬಗ್ಗೆ ವಿವರಿಸಿ, ಚಿಕಿತ್ಸೆ ಮತ್ತು ಥೆರಪಿಗಳ ವಿಧಾನಗಳು ಮತ್ತು ರೋಗಿಗಳ ಪಾಲಕರಿಗೆ ತರಬೇತಿಯ ಬಗ್ಗೆ ಮಾಹಿತಿ ನೀಡಿದರು. ಫಲಾನುಭವಿಗಳಿಗೆ ಉಚಿತ ಕನ್ನಡಕದ ವ್ಯವಸ್ಥೆ ಮತ್ತು 5 ಫಲಾನುಭವಿಗಳಿಗೆ ಶಸ್ತ್ರ ಚಿಕಿತ್ಸೆಯ ವ್ಯವಸ್ಥೆಗೆ ನಿರ್ಧರಿಸಲಾಯಿತು.

ಬೆಂಗಳೂರಿನ ಆಪ್ಟೋಮೆಟ್ರಿ ಕಾಲೇಜಿನ ವಿಭಾಗ ಮುಖ್ಯಸ್ಥ ಪ್ರೊ.ದಿವಾಕರ್ ಅವರು ನೇತ್ರ ರೋಗ ನಿರ್ಣಯ ಮಾಡುವ ಸೌಲಭ್ಯದ ಕುರಿತು ಮಾಹಿತಿ ಒದಗಿಸಿದರು. ಸ್ವಸ್ಥ ಸಂಸ್ಥೆಯ ನಿರ್ದೇಶಕಿ ಆರತಿ ಸೋಮಯ್ಯ, ದ ಕೂರ್ಗ್ ಫೌಂಡೇಶನ್ ಟ್ರಸ್ಟಿ ಗಂಗಾ ಚೆಂಗಪ್ಪ ಸ್ವಸ್ಥ ಪಾಲಿಬೆಟ್ಟ ಕೇಂದ್ರದ ಮುಖ್ಯಸ್ಥೆ ಐಶ್ವರ್ಯ ಬೋಪಯ್ಯ ಉಪಸ್ಥಿತರಿದ್ದರು.

ಮೊಬೈಲ್ ದೂರಮಾಡಿ ವಚನ ಗಾಯನಗಳನ್ನು ಕಲಿಯಿರಿ

ವಿರಾಜಪೇಟೆ, ಜ.20–ಯುವ ಜನಾಂಗ ಮೊಬೈಲ್ ಫೋನ್‌ಗಳನ್ನು ದೂರಮಾಡಿ ಸಾದು ಸಂತರು ನುಡಿದ ವಚನ ಗಾಯನಗಳು ಮತ್ತು ದೇವರ ನಾಮಗಳನ್ನು ಕಲಿಯಲು ಆಸಕ್ತಿ ತೋರಿಸಬೇಕು ಎಂದು ಬಾಳೆಲೆ ಕಾವೇರಿ ಕಲಾ ಸಮಿತಿ ಸಂಗೀತ ಶಿಕ್ಷಕಿ ವತ್ಸಲಾ ನಾರಾಯಣ್ ಹೇಳಿದ್ದಾರೆ



ಹೊಂಬೆಳಕು ಕಿರಣ ತತ್ತ್ವಚಿಂತನಾಗೋಷ್ಠಿ ಅರಮೇರಿ ಕಳಂಚೇರಿ ಮಠದಲ್ಲಿ ನಡೆಯಿತು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಕಿರಣ 239 ನೇ ಮಾಸಿಕ ತತ್ತ್ವಚಿಂತನಾಗೋಷ್ಠಿ ಕಾರ್ಯಕ್ರಮದಲ್ಲಿ ವಚನ ಗಾಯನ ಮತ್ತು ದೇವರನಾಮ ಸ್ಮರಣೆ ಬಗ್ಗೆ ಮಾತನಾಡಿ ಪುರಂದರ ದಾಸರ ಕೀರ್ತನೆ, ಸಾಹಿತ್ಯ ಸಂಸ್ಕೃತದಲ್ಲಿತ್ತು. ಸಾಮಾನ್ಯ ಜನರಿಗೆ ತಲುಪಲು ಕರ್ನಾಟಕ ಸಂಗೀತ ಸಾಹಿತ್ಯ ಬಹಳ ವಿಸ್ತಾರವಾದುದು ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಅಧ್ಯಕ್ಷ ಎನ್.ಪಿ. ಕೇಶವಕಾಮತ್ ಮಾತನಾಡಿ, ಕಾವೇರಿ ಕಲಾ ಸಮಿತಿ 25 ವರ್ಷಗಳಿಗೂ ಹೆಚ್ಚು ಕಾಲ ಸಾಹಿತ್ಯ ಮತ್ತು ನಾಡು ನುಡಿಗಳ ಉಳಿವಿಗಾಗಿ ಕಾರ್ಯಕ್ರಮ ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ ವಚನ ಗಾಯನ ಮತ್ತು ದೇವರನಾಮಗಳು ಜನರಿಗೆ ಹೆಚ್ಚು ತಲುಪುವಂತಾಗಬೇಕು ಎಂದು ಹೇಳಿದರು.

ಅರಮೇರಿ ಕಳಂಚೇರಿ ಶ್ರೀ ಮಠದ ಪೀಠಾಧಿಪತಿ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, ದೇಶದಲ್ಲಿ ಹೆಚ್ಚು ಸಾಧು ಸಂತರು ಬದುಕಿನ ಮಜಲುಗಳನ್ನು ಕೊಟ್ಟು ಹೋಗಿದ್ದಾರೆ ಎಂದು ನುಡಿದರು. ವಚನ ಗಾಯನ ಮತ್ತು ದೇವರನಾಮ ಕಾರ್ಯಕ್ರಮವನ್ನು ಬಾಳೆಲೆ ಕಾವೇರಿ ಕಲಾ ಸಮಿತಿಯ 10 ಮಂದಿ ಸದಸ್ಯರು ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ಯಾರ್ಥಿಗಳಾದ ಹೆಚ್.ಕೆ.ವರ್ಷಿಣಿ ಸ್ವಾಗತಿಸಿದರು, ಕೆ.ಬಿ.ಇಂಪನ ಕಾರ್ಯಕ್ರಮ ನಿರೂಪಿಸಿದರು. ಸೋನಾ ವಂದಿಸಿದರು.

ಗಂಗಮ್ಮ ನಿಧನ



ನಾಪೋಕ್ಲು, ಜ.20–ಇಲ್ಲಿಗೆ ಸಮೀಪದ ಬಲ್ಲಮಾವಟಿ ಗ್ರಾಮದ ನಿವಾಸಿ ಹೊಸೊಕ್ಲು ದಿವಂಗತ ಸೋಮಯ್ಯ ಅವರ ಪತ್ನಿ ಗಂಗಮ್ಮ (93) ಮಂಗಳವಾರ ನಿಧನರಾದರು. ಮೃತರು ಪುತ್ರ ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಕ್ಕೇರ ಮಾಹಿನ್ ಹಾಜಿ ನಿಧನ



ನಾಪೋಕ್ಲು: ಸಮೀಪದ ಎಮ್ಮೆಮಾಡು ಗ್ರಾಮದ ನಿವಾಸಿ ಚಕ್ಕೇರ ಮಾಹಿನ್ ಹಾಜಿ (74) ಮಂಗಳವಾರ ನಿಧನರಾದರು. ಮೃತರು ಪತ್ನಿ, ಐವರು ಪುತ್ರರು, ಮೂವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸಂಜೆ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಾರಾಗೃಹ ಅಧೀಕ್ಷಕರ ವಿರುದ್ಧ ಸಿಎಂಗೆ ದೂರು ಸಲ್ಲಿಸಲು ವಕೀಲರ ನಿರ್ಧಾರ

ಚಾಮರಾಜನಗರ, ಜ.20–ಕಕ್ಷಿದಾರರ ಭೇಟಿಗೆ ಅವಕಾಶ ನಿರಾಕರಿಸಿ ವಕೀಲರೊಂದಿಗೆ ಅನುಚಿತವಾಗಿ ನಡೆದುಕೊಳ್ಳುತ್ತಿರುವ ಜಿಲ್ಲಾ ಕೇಂದ್ರ ಕಾರಾಗೃಹ ಅಧೀಕ್ಷಕ ಶಿವಕುಮಾರ್ ವಿರುದ್ಧ ಮುಖ್ಯಮಂತ್ರಿಗಳಿಗೆ ದೂರು ಸಲ್ಲಿಸಲು ವಕೀಲರ ಸಭೆಯಲ್ಲಿ ತೀರ್ಮಾನಿಸಲಾಯಿತು.



ಜಿಲ್ಲಾ ಕೇಂದ್ರ ಕಾರಾಗೃಹ ಅಧೀಕ್ಷಕರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜಿಲ್ಲಾ ವಕೀಲರು ಮಂಗಳವಾರ ಸಭೆ ನಡೆಸಿದರು.

ನಗರದ ನ್ಯಾಯಾಲಯದ ಸಮೀಪದಲ್ಲಿರುವ ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ನಡೆದ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಜಿಲ್ಲಾ ಅಧ್ಯಕ್ಷ ರಾಮಸಮುದ್ರ ಪುಟ್ಟಸ್ವಾಮಿ ಮಾತನಾಡಿ, ಜಿಲ್ಲಾ ಕೇಂದ್ರ ಕಾರಾಗೃಹದ ಅಧೀಕ್ಷಕ ಶಿವಕುಮಾರ್ ಅವರು, ತಮ್ಮ ಕಕ್ಷಿದಾರರನ್ನು ಭೇಟಿ ಮಾಡಲು ವಕೀಲರಿಗೆ ಅವಕಾಶ ನೀಡದೆ ಅನುಚಿತವಾಗಿ ನಡೆದುಕೊಳ್ಳುತ್ತಿರುವ ಸಂಬಂಧ ಸಂಘಕ್ಕೆ ದೂರು ಬಂದ ಹಿನ್ನೆಲೆಯಲ್ಲಿಕಾರಿಗಳ ಸಭೆ ಕರೆದು, ಜಿಲ್ಲಾ ಕಾರಾಗೃಹ ಅಧೀಕ್ಷಕರ ವಿರುದ್ಧ ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ, ಗೃಹ ಸಚಿವರು, ಮುಖ್ಯ ಮಂತ್ರಿ ಗಳಿಗೆ ದೂರು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ ಎಂದರು.

ವಕೀಲರಿಗೆ ತನ್ನ ಕಕ್ಷಿದಾರರನ್ನು ಭೇಟಿ ಮಾಡಲು ಅವಕಾಶ ಕಲ್ಪಿಸುವುದಿಲ್ಲ ಕೇವಲ ಕಾನೂನು ಸೇವಾ ಪ್ರಾಧಿಕಾರದಿಂದ ನೇಮಕವಾಗಿರುವ ವಕೀಲರನ್ನು ಮಾತ್ರ ಒಳಗೆ ಬಿಡುತ್ತಾರೆ. ಆರೋಪಿ ಪರವಾದ ರಕ್ಷಣಾ ವಕೀಲರು, ಖಾಸಗಿ ವಕೀಲರನ್ನು ಒಳಗಡೆ ಬಿಡದೆ ಸರ್ವೋಚ್ಚ ನ್ಯಾಯಾಲಯದ ಮಾರ್ಗದರ್ಶನಗಳನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಆರೋಪಿಸಿ ವಕೀಲ ಬಿ.ಪ್ರಸನ್ನ ಕುಮಾರ್ ಜಿಲ್ಲಾ ವಕೀಲರ ಸಂಘಕ್ಕೆ ದೂರು ನೀಡಿದ್ದರು. ಸಭೆಯಲ್ಲಿ ಹಲವಾರು ವಕೀಲರು ಕೇಂದ್ರ ಕಾರಾ ಗೃಹ ಅಧೀಕ್ಷಕರಿಂದ ಉಂಟಾಗುತ್ತಿ ರುವ ತಾರತಮ್ಯ, ಕಿರುಕುಳ ಮತ್ತು ವಕೀಲರನ್ನು ಕೀಳಾಗಿ ಕಾಣುತ್ತಿರುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟು, ಅವರ ವಿರುದ್ಧ ಶಿಸ್ತುಕ್ರಮಕ್ಕೆ ಶಿಫಾರಸ್ಸು ಮಾಡುವ ಸಂಬಂಧ ತೀರ್ಮಾನ ತೆಗೆದುಕೊಳ್ಳಲು ಒತ್ತಾಯಿಸಿದರು.

ಸಭೆಯಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಶಿವರಾಮ, ಉಪಾಧ್ಯಕ್ಷ ದೊಡ್ಡ ಮೋಳೆ ರಂಗಸ್ವಾಮಿ, ಹಿರಿಯ ವಕೀಲರಾದ ಶಿವಲಿಂಗೇಗೌಡ, ಚಿನ್ನಸ್ವಾಮಿ, ಪುಟ್ಟಸ್ವಾಮಿ ಭಾಗವಹಿಸಿದ್ದರು.

ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ

ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಪ್ರತಿಭಟನೆ

ಚಾಮರಾಜನಗರ, ಜ.20–ಶಾಲಾ ಮಾನ್ಯತೆ ನವೀಕರಣ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.



ಜಿಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಮಂಗಳವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿದರು

ಒಕ್ಕೂಟದ ಗೌರವ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ ಮಾತನಾಡಿ, ಶಾಲೆಗಳಿಗೆ ಭೂ ಪರಿವರ್ತನೆ ನಿಯಮವನ್ನು ಸಂಪೂರ್ಣವಾಗಿ ಕೈಬಿಡಬೇಕು. ಶಾಲೆಗಳಿಂದ ತೆರಿಗೆ ಸೆಸ್ ಮಾತ್ರ ಪಡೆಯಬೇಕು. ಭೂ ಪರಿವರ್ತನೆ ಶುಲ್ಕ ವಿಧಿಸ ಬಾರದು. ಕೋರ್ಟ್‌ನ ಇತ್ತೀಚಿನ ಆದೇಶದಂತೆ 15 ಮೀಟರ್‌ಗಿಂತ ಕಡಿಮೆ ಎತ್ತರದ ಕಟ್ಟಡಗಳಿಗೆ ಸರಳ ಅಗ್ನಿ ಸುರಕ್ಷತಾ ನಿಯಮಗಳನ್ನು ಅನ್ವಯಿಸಬೇಕು. ಮಾನ್ಯತೆ ನವೀಕರಣ ಪ್ರಕ್ರಿಯೆಯನ್ನು ಏಕಗವಕ್ಷಿ ಯೋಜನೆಯಡಿ ಜಾರಿಗೆ ತರಬೇಕು. ಎಲ್ಲಾ ಶಾಲೆಗಳಿಗೂ ಮಾನ್ಯತೆ ನವೀಕರಣವನ್ನು ಕನಿಷ್ಠ 10 ವರ್ಷಗಳ ಅವಧಿಗೆ ನೀಡಬೇಕು. ಆರ್‌ಟಿಇ ಯೋಜನೆಯಡಿ ಬಾಕಿ ಇರುವ ಸಂಪೂರ್ಣ ಹಣವನ್ನು ತಕ್ಷಣ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು. ನಂತರ ಪ್ರತಿ ಭಟನಾಕಾರರು ಜಿ.ಪಂ. ಸಿಇಒ ಮೋನಾರೋತ್‌ರಿಗೆ ಮನವಿ ಸಲ್ಲಿಸಿದರು.

ಒಕ್ಕೂಟದ ಅಧ್ಯಕ್ಷ ಎಂ.ಎಲ್.ಜಿ ಲಿಂಗರಾಜು, ರುಪ್ಸಾ, ರಾಜ್ಯಾಧ್ಯಕ್ಷ ಆಲನೂರು ಲೇಪಾಕ್ಷಿ, ಗೌರವ ಅಧ್ಯಕ್ಷ ರಾಜೇಂದ್ರ, ಖಜಾಂಚಿ ಮೋಹನ ಕುಮಾರ್, ನಂಜುಂಡಸ್ವಾಮಿ, ಮಂಜುನಾಥ್, ಕಾರ್ಯದರ್ಶಿ ಮಹೇಶ್, ಜ್ಞಾನದೀಪ ಶಾಲೆಯ ಆರ್.ಪಿ. ನಂಜುಂಡ ಸ್ವಾಮಿ, ಆಶಾ ಮೋಹನ್, ಸುನೀಲ್, ಭಾಗವಹಿಸಿದ್ದರು.

ಕೊಳ್ಳೇಗಾಲ ಕ್ಷೇತ್ರದಿಂದಲೇ ಸ್ಪರ್ಧಿಸುವೆ: ಮಹೇಶ್

ಕೊಳ್ಳೇಗಾಲ, ಜ.20.(ಎನ್‌ಎನ್)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೊಳ್ಳೇಗಾಲ ಕ್ಷೇತ್ರದಿಂದಲೇ ನಾನು ಸ್ಪರ್ಧಿಸುವುದು ಖಚಿತ. ಇದರಲ್ಲಿ ಯಾವುದೇ ಗೊಂದಲ, ಅನುಮಾನ ಬೇಡ, ಎಂದು ಮಾಜಿ ಸಚಿವ ಎನ್ ಮಹೇಶ್ ಹೇಳಿದರು



ಕಳೆದ ಬಾರಿ ಶಾಸಕನಾಗಿದ್ದ ವೇಳೆ ಹಲವಾರು ಅಭಿವೃದ್ಧಿ ಪರ ಕೆಲಸಗಳನ್ನು ಮಾಡಿದ್ದೇನೆ, ನಾನಾ ಕಾರಣಗಳಿಗಾಗಿ ನನಗೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲುಂಟಾಯಿತು. ಸೋಲಿಗೆ ಆತ್ಮ ವಿಮರ್ಶೆ ಮಾಡಿಕೊಂಡಿರುವೆ. ಈಗಿನಿಂದಲೇ ಮುಂಬರುವ ಚುನಾವಣೆಗೆ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಲು ತಯಾರಾಗಿದ್ದೇನೆ, ಬಿಜೆಪಿ ಹೈಕಮಾಂಡ್ ಸಹಾ ನನ್ನಪರವಾಗಿ ಟೀಕೆಟ್ ಘೋಷಿಸುವ ವಿಶ್ವಾಸವಿದೆ. ಈ ವಿಚಾರದಲ್ಲಿ ಪಕ್ಷದಲ್ಲಿ ಯಾವುದೇ ಗೊಂದಲಗಳಿಲ್ಲ ಎಂದು ಸುದ್ದಿಗೋಷ್ಠಿಯಲ್ಲಿ ಸ್ಪಷ್ಟಪಡಿಸಿದರು.

ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಜೆಡಿಎಸ್‌ನೊಂದಿಗೆ ಮೈತ್ರಿ ವಿಚಾರವು ಹೈಕಮಾಂಡ್ ನಿಲುವಿಗೆ ಬಿಟ್ಟದ್ದು, ಪಕ್ಷ ಕೈಗೊಳ್ಳುವ ತೀರ್ಮಾನಕ್ಕೆ ನಾವೆಲ್ಲರೂ ಬದ್ಧವಾಗಿರುತ್ತೇವೆ, ಮುಂದಿನ ಚುನಾವಣೆಗೆ ಎಲ್ಲರೂ ಸಂಘಟಿತರಾಗಬೇಕಿದೆ ಎಂದರು.

ರಾಷ್ಟ್ರೀಯ ಅಧ್ಯಕ್ಷರ ಅವಿರೋಧ ಆಯ್ಕೆ:ವಿಜಯೋತ್ಸವ ಆಚರಣೆ



ಚಾಮರಾಜನಗರ, ಜ.20–ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ನಗರದಲ್ಲಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು. ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಹೊನ್ನೂರು ಮಹಾದೇವಸ್ವಾಮಿ ನೇತೃತ್ವದಲ್ಲಿ ಸೇರಿದ ಕಾರ್ಯಕರ್ತರು, ಮುಖಂಡರು ನೂತನ ಅಧ್ಯಕ್ಷ ನಿತಿನ್ ನಬಿನ್ ಪ್ರಧಾನಿ ಮೋದಿ, ರಾಜ್ಯಾಧ್ಯಕ್ಷ ವಿಜಯೇಂದ್ರ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಭೇಂದ್ರಪ್ಪ ಮಾತನಾಡಿದರು. ಚುಡಾ ಮಾಜಿ ಅಧ್ಯಕ್ಷ ಶಾಂತಮೂರ್ತಿ ಕುಲಗಾಣ, ಯುವ ಮೋರ್ಚಾದ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಬುಲೆಟ್ ಚಂದ್ರು, ಕೂಸಣ್ಣ, ಶಿವಣ್ಣ, ರವಿ, ರಂಗಸ್ವಾಮಿ, ದೊರೆಸ್ವಾಮಿ, ಮಾರ್ಕೆಟ್ ಕುಮಾರ್ ಇತರರು ಹಾಜರಿದ್ದರು.

ಮಡಿವಾಳ ಮಾಚಿದೇವರ ಸಂಘದ ಪದಾಧಿಕಾರಿಗಳ ಸಾಮೂಹಿಕ ರಾಜೀನಾಮೆ

ಯಳಂದೂರು, ಜ.20– ತಾಲೂಕು ಶ್ರೀ ಮಡಿವಾಳ ಮಾಚಿದೇವರ ಸಂಘದ ಪದಾಧಿಕಾರಿಗಳು ಮಂಗಳವಾರ ತಮ್ಮ ಸ್ಥಾನಗಳಿಗೆ ಸಾಮೂಹಿಕ ರಾಜೀನಾಮೆ ಸಲ್ಲಿಸಿ ದರು.



ಮಡಿವಾಳ ಮಾಚಿದೇವರ ಸಂಘದ ಪದಾಧಿಕಾರಿಗಳು ಮಂಗಳವಾರ ತಮ್ಮ ಸ್ಥಾನಗಳಿಗೆ ಸಾಮೂಹಿಕ ರಾಜಿನಾಮೆ ಸಲ್ಲಿಸಿದರು.

ಪಟ್ಟಣದ ಸಂತೆಮಾಳ ಹತ್ತಿರ ಶ್ರೀ ಗಣಪತಿ ದೇವಸ್ಥಾನದಲ್ಲಿ ನಡೆದ ಸಭೆಯಲ್ಲಿ ವೈ.ಕೆ.ಮೋಳೆ.ಎನ್. ನಾಗರಾಜು ಮಾತನಾಡಿ ಸಂಘವು ಪ್ರಾರಂಭವಾಗಿ 4–5 ವರ್ಷಗಳಾಗಿದ್ದರೂ ಈವರೆಗೂ ಪದಾಧಿಕಾರಿಗಳ ಬದಲಾವಣೆ ಮಾಡಿರುವುದಿಲ್ಲ. ಸಂಘದಲ್ಲಿ ಇಲ್ಲಿವರೆಗೂ ಯಾವುದೇ ಸಂಘಟನೆ, ಅಭಿವೃದ್ಧಿ, ಕೆಲಸಗಳು ಆಗುತ್ತಿಲ್ಲ. ಎಂದು ಆರೋಪಿಸಿದರು.

ನಾಗರಾಜುರವರ ಆರೋಪಕ್ಕೆ ಪ್ರತಿಯಾಗಿ ಅಧ್ಯಕ್ಷ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಖಜಾಂಚಿ ದೇವರಾಜು, ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ ಅವರುಗಳು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದರು. ಸಂಘಕ್ಕೆ ಹೊಸ ಪದಾಧಿಕಾರಿಗಳನ್ನು ಆಯ್ಕೆ ಮಾಡಲು ಜ.24ರಂದು ಮತ್ತೆ ಸಭೆ ಕರೆಯಲು ನಿರ್ಧರಿಸಲಾಯಿತು. ಸಭೆಯಲ್ಲಿ ರಂಗಸ್ವಾಮಿ, ಬಸವರಾಜು, ಚಂದ್ರು, ಆಟೋ ಮಹೇಶ್, ನಿಂಗರಾಜು, ಮಹಾದೇವಶೆಟ್ಟಿ, ನಿಂಗಶೆಟ್ಟಿ, ಸಿದ್ದಶೆಟ್ಟಿ, ವೀರಭದ್ರಶೆಟ್ಟಿ, ತಮ್ಮಯ್ಯ ಸಿದ್ದರಾಜು, ಅಂಬಳೆ ಮಹಾದೇವ ಸದಸ್ಯರು ಹಾಜರಿದ್ದರು.

ಕರ್ತವ್ಯ ಮುಗಿಸಿ ಮಸಣಕೆ ಸೇರಿದ ಎಎಸ್‌ಐ

ಸಂತೇಮರಹಳ್ಳಿ, ಜ.20–ಇಲ್ಲಿನ ಪೊಲೀಸ್ ಠಾಣೆಯಲ್ಲಿ ಸಹಾಯಕ ಸಬ್‌ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ನಾಗನಾಯಕ (51) ಸೋಮವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮವಾದ ಯರಗಂಬಳ್ಳಿ ಗ್ರಾಮದ ಜಮೀನಿನಲ್ಲಿ ಪೊಲೀಸ್ ಇಲಾಖೆಯ ಗೌರವದೊಂದಿಗೆ ನೆರವೇರಿಸಲಾಯಿತು.



ಭಾನುವಾರ ರಾತ್ರಿ ಪಾಳಿಯಲ್ಲಿ ಕೆಲ್ಲಂಬಳ್ಳಿ ಗ್ರಾಮದ ಭಾಗದಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದರು. ಬೆಳಗ್ಗೆ 6ರ ವೇಳೆಗೆ ಕರ್ತವ್ಯ ಮುಗಿಸಿ ಚಾಮರಾಜನಗರಕ್ಕೆ ವಾಪಸ್ಸಾಗಿದ್ದರು. ಈ ವೇಳೆ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ನಗರದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಚಿಕಿತ್ಸೆ ಫಲಿಸದೆ ಕೊನೆಯುಸಿರೆಳೆ ದರು.

ಮೂಲತಃ ಚಾಮರಾಜನಗರ ತಾಲೂಕಿನ ಯರಗಂಬಳ್ಳಿ ಗ್ರಾಮದ ನಾಗನಾಯಕ ಹಲವು ವರ್ಷಗಳ ಕಾಲ ಎಸ್ಪಿ ಕಚೇರಿಯಲ್ಲಿ ಸೇವೆ ಸಲ್ಲಿಸಿದ್ದರು. ಮೂರು ವರ್ಷಗಳ ಹಿಂದೆ ಕುದೇರು ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವರಿಗೆ ಇತ್ತೀಚೆಗಷ್ಟೇ ಎಎಸ್‌ಐ ಆಗಿ ಬಡ್ತಿ ದೊರಕಿತ್ತು. ತರಬೇತಿಯನ್ನು ಮುಗಿಸಿ ಸಂತೇಮರಹಳ್ಳಿ ಠಾಣೆಗೆ ನಿಯೋಜನೆಗೊಂಡಿದ್ದರು. ಕಸ್ತೂರು ಬಂಡಿ ಜಾತ್ರೆ ಹಿನ್ನೆಲೆಯಲ್ಲಿ ಬಂದೋಬಸ್ತ್‌ಗಾಗಿ ಕೆಲ್ಲಂಬಳ್ಳಿ ಗ್ರಾಮಕ್ಕೆ ರಾತ್ರಿ ನಿಯೋಜಿಸಲಾಗಿತ್ತು.

ಓಬಿಸಿಗೆ ನೇಮಕ



ಬೇಗೂರು: ಜಿಲ್ಲಾ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗ ವಿಭಾಗದ (ಒಬಿಸಿ) ಉಪಾಧ್ಯಕ್ಷರಾಗಿ ಬೇಗೂರು ಗ್ರಾಮದ ಕೆ.ಮಹದೇವಶೆಟ್ಟಿ ನೇಮಕಗೊಂಡಿದ್ದಾರೆ. ಶಾಸಕ ಗಣೇಶ್‌ಪ್ರಸಾದ್ ಅವರ ಶಿಫಾರಸ್ಸು, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶದ ಮೇರೆಗೆ ಜಿಲ್ಲಾಧ್ಯಕ್ಷ ಆರ್.ಚೇತನ್ ಕುಮಾರ್ ಆದೇಶ ಹೊರಡಿಸಿದ್ದಾರೆ.

ಗುಜರಾತಿನಲ್ಲಿ ತರಬೇತಿಗೆ ತೆರಳಿದ ಹಾಲು ಉತ್ಪಾದಕ ಕಾರ್ಯದರ್ಶಿಗಳು

ಗುಂಡ್ಲುಪೇಟೆ,ಜ.20(ಸೋಮ್.ಜಿ)– ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಾಹಕರ ತರಬೇತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಗುಜರಾತಿಗೆ ಬಸ್ಸಿನಲ್ಲಿ ತೆರಳಿದವರಿಗೆ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹೆಚ್.ಎಸ್. ನಂಜುಂಡ ಪ್ರಸಾದ್ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಇಂತಹ ತರಬೇತಿಗಳಿಂದ ಸಂಘಗಳಲ್ಲಿ ಕಾರ್ಯನಿರ್ವಹಿಸುವ ಕಾರ್ಯದರ್ಶಿಗಳು ಉತ್ತಮ ರೀತಿಯಲ್ಲಿ ಹಾಗೂ ವಿವಿಧ ರೀತಿಯ ನವೀನ ತಂತ್ರಜ್ಞಾನಗಳನ್ನು ಬಳಸಿ ಹಾಲು ಶೇಖರಿಸಲು ಹಾಗೂ ಅಲ್ಲಿನ ಮಾದರಿಯ ಬಗ್ಗೆ ತಿಳಿದು ಸಂಘಗಳಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಚಾಮುಲ್ ನಿರ್ದೇಶಕ ಎಂಪಿ ಸುನಿಲ್ ಮಾತನಾಡಿ, ಕಾರ್ಯದರ್ಶಿಗಳಿಗೆ ಆತ್ಮಸ್ಥೈರ್ಯ ನೀಡುವ ಉದ್ದೇಶದಿಂದ ತರಬೇತಿ ಕಾರ್ಯಗಾರಗಳ ಅವಶ್ಯವಿದ್ದು ಇಂತಹ ತರಬೇತಿಯನ್ನು ಅಧಿಕಾರಿಗಳು ಸದುಪಯೋಗಪಡಿಸಿಕೊಳ್ಳಬೇಕೆಂದು ಹೇಳಿದರು.



ಗುಜರಾತಿಗೆ ತೆರಳಿದ ಬಸ್ಸಿಗೆ ಹೆಚ್. ಎಸ್.ನಂಜುಂಡ ಪ್ರಸಾದ್ ಹಸಿರು ನಿಶಾನೆ ತೋರಿದರು.

ಎಂಡಿ ಕೆ.ರಾಜಕುಮಾರ್ ಮಾತನಾಡಿದರು. ವ್ಯವಸ್ಥಾಪಕ ಶರತ್ ಕುಮಾರ್ ತಾಲೂಕು ಮೇಲ್ವಿಚಾರಕ ಎಚ್. ಪ್ರಕಾಶ್ ವಿಸ್ತರಣಾಧಿಕಾರಿಗಳಾದ ಮುದ್ದಪ್ಪ ರಂಜಿತಾ, ಉದಯ್, ಮಂಜೇಶ್ ಹಾಗೂ ಕಾರ್ಯದರ್ಶಿಗಳು ಹಾಜರಿದ್ದರು.

ಜ.23 ರಿಂದ 'ಉತ್ತರಾಯಣ' ಕಲಾ, ಸಾಂಸ್ಕೃತಿಕ ಹಬ್ಬ; ಒಂದೇ ವೇದಿಕೆಯಲ್ಲಿ ಬಹು ಕಲೆ ಪ್ರದರ್ಶನ

ಮೈಸೂರು, ಜ.20(ವಿವಿಹೆಚ್)– ಎಲ್ಲಾ ಕಲೆಗಳನ್ನು ಒಂದೇ ವೇದಿಕೆಗೆ ತಂದು, ಏಕಕಾಲದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಸುವ ಉದ್ದೇಶದಿಂದ ಜೆಸಿಎಸಿ ಮೊದಲ ಬಾರಿಗೆ 'ಉತ್ತರಾಯಣ' ಕಲಾ ಮತ್ತು ಸಾಂಸ್ಕೃತಿಕ ಹಬ್ಬ ಆಯೋಜಿಸಲಾಗುತ್ತಿದೆ ಎಂದು ಕಾರ್ಯಕ್ರಮದ ಮೇಲ್ವಿಚಾರಕ ರಾಮನಾಥ್ ತಿಳಿಸಿದರು.

ಜೆಸಿಎಸಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ವಿಜಯನಗರದ 1ನೇ ಹಂತದಲ್ಲಿರುವ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್(ಜೆಸಿಎಸಿ)ನಲ್ಲಿ ಜ.23 ರಿಂದ 27 ವರೆಗೆ ಜೆಸಿಎಸಿ 'ಉತ್ತರಾಯಣ' ಕಲಾ ಮತ್ತು ಸಾಂಸ್ಕೃತಿಕ ಹಬ್ಬ ಆಯೋಜಿಸಲಾಗಿದೆ. ಜ.23ರ ಸಂಜೆ 4 ಗಂಟೆಗೆ ಭಾರತೀಯ ರಂಗಭೂಮಿ ನಿರ್ದೇಶಕ ಪ್ರಸನ್ನ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಗೌರವ ಅತಿಥಿಗಳಾಗಿ ರಾಜಮನೆತನದ ಪ್ರತಿನಿಧಿ ಭಾಗವಹಿಸಲಿದ್ದಾರೆ. ಮುಖ್ಯ ಭಾಷಣಕಾರರಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ್ ಬಿಳಿಮಲೆ 'ನಮ್ಮ ನುಡಿ ನಮ್ಮ ಸಂಸ್ಕೃತಿ' ಕುರಿತು ಮಾತನಾಡಲಿದ್ದಾರೆ. ನಿವೃತ್ತ ಆರ್&ಎಡಬ್ಲ್ಯೂ ಅಧಿಕಾರಿ ರವಿ ಜೋಷಿ, ಹಿರಿಯ ತಾಳವಾದಕ ವಿದ್ವಾನ್ ಆರ್.ಅನಂತ ಕೃಷ್ಣಶರ್ಮಾ ಪಾಲ್ಗೊಳ್ಳಲಿದ್ದಾರೆ ಎಂದರು.


ಮೈಸೂರಿನ ವಿಜಯನಗರದ ಮೊದಲ ಹಂತದಲ್ಲಿರುವ ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್(ಜೆಸಿಎಸಿ)ನಲ್ಲಿ 'ಉತ್ತರಾಯಣ' ಕಲಾ ಮತ್ತು ಸಾಂಸ್ಕೃತಿಕ ಹಬ್ಬ ಕುರಿತು ಪತ್ರಿಕಾಗೋಷ್ಠಿ ನಡೆಯಿತು.

ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಈಗಾಗಲೇ ನೋಂದಣಿ ಮಾಡಿಕೊಂಡವರಿಗೆ ನೃತ್ಯ ಸಂಗ್ರಹಣ – ಭರತನಾಟ್ಯ ಕುರಿತ ಉಪನ್ಯಾಸ, ಪ್ರದರ್ಶನ ಕಾರ್ಯಾಗಾರ ಆಯೋಜಿಸಲಾಗಿದೆ. ಪ್ರತಿ ದಿನವೂ ಕೇಂದ್ರದ ವಿವಿಧ ಸಭಾಂಗಣದಲ್ಲಿ ಬೆಳಿಗ್ಗೆ 10ರಿಂದ ಸಂಜೆ 4ರವರೆಗೆ ಲಿಟಲ್ ಲೀಡರ್ಸ್, ಅವಳ ಧ್ವನಿ ಅವಳ ವೇದಿಕೆ, ಕಿರು ಚಲನಚಿತ್ರೋತ್ಸವ ಮತ್ತು ಸಿನಿಮಾ ನಿರ್ಮಾಣ ಕಾರ್ಯಗಾರ, ದ ರೆಡ್ ಕಾರ್ಪೆಟ್ ವೈಬ್ ಶೀರ್ಷಿಕೆಯ ಕಾರ್ಯಾಗಾರಗಳು ನಡೆಯಲಿವೆ ಎಂದರು.

ನಗರದಲ್ಲಿ ಕಲೆ ಮತ್ತು ಸಾಹಿತ್ಯ ಚಟುವಟಿಕೆಯನ್ನು ಉತ್ತೇಜಿಸುವುದು ನಮ್ಮ ಉದ್ದೇಶವಾಗಿದ್ದು, ಕರ್ನಾಟಕ ಹಾಗೂ ಹಿಂದೂಸ್ತಾನಿ, ಭರತನಾಟ್ಯ ಸೇರಿದಂತೆ ವಿವಿಧ ಪ್ರಕಾರದ ಸಂಗೀತ, ನೃತ್ಯ ಪ್ರದರ್ಶನ, ಸಾಹಿತ್ಯ ಚಟುವಟಿಕೆಗಳು, ಚರ್ಚೆಗಳು, ಹಾಸ್ಯ ಕವಿಗೋಷ್ಠಿ, ನಾಟಕಗಳು ನಡೆಯಲಿವೆ. ಇದಕ್ಕಾಗಿ 17 ಜನ ವಿವಿಧ ವಿಭಾಗಗಳ ಸಂಪನ್ಮೂಲ ವ್ಯಕ್ತಿಗಳನ್ನು ನೇಮಿಸಲಾಗಿದೆ. ಸಂಜೆ.7 ಗಂಟೆಗೆ ನಡೆಯುವ ಕಾರ್ಯಕ್ರಮಕ್ಕೆ ಪ್ರವೇಶ ದರ ವಿಧಿಸಲಾಗಿದ್ದು, ಉಳಿದೆಲ್ಲವನ್ನೂ ಉಚಿತವಾಗಿ ವೀಕ್ಷಿಸಬಹುದಾಗಿದೆ ಎಂದು ಮಾಹಿತಿ ನೀಡಿದರು.

ಇನ್ನು ಜ.27 ರಂದು ನಡೆಯುವ ಸಮಾರೋಪ ಸಮಾರಂಭದಲ್ಲಿ ಹಿರಿಯ ರಂಗಕರ್ಮಿ ಟಿ.ಎಸ್.ನಾಗಾಭರಣ್, ಪ್ರೊ. ಕೃಷ್ಣೇಗೌಡ ಜೊತೆಯಾಗಲಿದ್ದಾರೆ ಎಂದು ತಿಳಿಸಿದರು. ಜೆಸಿಎಸಿ ನಿರ್ವಾಹಕ ರವಿಕುಮಾರ್, ವಿ.ಮಾನಸ ನಯನ ಸಾಯಿ ಶಿವ್, ರಮಾ ವಿ.ಬೆಣ್ಣೂರ್, ಕೃಪಾ ಫಡ್ಕೆ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಫಲಿತಾಂಶ ಉತ್ತಮಪಡಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಿ

ಶಿಕ್ಷಣ ಇಲಾಖೆ ಸಿಬ್ಬಂದಿಗೆ ಮೈಸೂರು ಜಿಪಂ ಸಿಇಓ ಸೂಚನೆ

ಮೈಸೂರು, ಜ.20– ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ ಉತ್ತಮ ಸಾಧನೆ ದಾಖಲಿಸುವ ನಿಟ್ಟಿನಲ್ಲಿ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾ ಪಂಚಾಯ್ತಿ ಸಿಇಓ ಯುಕೇಶ್ ಕುಮಾರ್, ಜಿಲ್ಲೆಯ ಎಲ್ಲಾ ಬಿಇಓಗಳಿಗೆ ಸೂಚನೆ ನೀಡಿದ್ದಾರೆ.


ಮೈಸೂರು ಜಿಲ್ಲಾ ಪಂಚಾಯ್ತಿ ಸಿಇಓ ಯುಕೇಶ್ ಕುಮಾರ್, ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪೂರ್ವಸಿದ್ಧತಾ ಪರೀಕ್ಷೆಯ ಫಲಿತಾಂಶ ವಿಶ್ಲೇಷಣಾ ಸಭೆ ನಡೆಸಿದರು.

ಜಿಲ್ಲಾ ಪಂಚಾಯ್ತಿ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಮಂಗಳವಾರ ಪೂರ್ವಸಿದ್ಧತಾ ಪರೀಕ್ಷೆಯ ಫಲಿತಾಂಶ ವಿಶ್ಲೇಷಣಾ ಸಭೆ ನಡೆಸಿದ ಅವರು, ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಮೊದಲ ಮೂರು ಸ್ಥಾನಗಳಲ್ಲಿ ಮೈಸೂರು ಜಿಲ್ಲೆ ಹೆಸರಿರಬೇಕು. ಈ ನಿಟ್ಟಿನಲ್ಲಿ ಸಂಘಟಿತವಾಗಿ ಕಾರ್ಯನಿರ್ವಹಿಸಬೇಕು ಎಂದರು.

ಮೊದಲ ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಶೇ.50ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ನಂಜನಗೂಡು ಹಾಗೂ ಮೈಸೂರು ದಕ್ಷಿಣ ಶಿಕ್ಷಣ ಕ್ಷೇತ್ರಗಳ ಕೆಲವು ಶಾಲೆಗಳಿಗೆ ನೋಟೀಸ್ ನೀಡಿ, ಫಲಿತಾಂಶ ಸುಧಾರಣೆಗೆ ಸೂಚನೆ ನೀಡಬೇಕು. ತಂಡಗಳನ್ನು ರಚಿಸಿ, ನಿರಂತರವಾಗಿ ಮೇಲ್ವಿಚಾರಣೆಗೆ ನಿಯೋಜಿಸಬೇಕು ಎಂದು ತಿಳಿಸಿದರು.

ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳಲ್ಲಿನ ಪಠ್ಯ ಬೋಧನೆ, ಶಿಕ್ಷಕರ ಕಾರ್ಯನಿರ್ವಹಣೆ ಬಗ್ಗೆ ನಿಗಾ ವಹಿಸಬೇಕು. ಅಂತಹ ಶಾಲೆಗಳಿಗೆ ಸಂಬಂಧಿಸಿದ ವಿಷಯವಾರು ಹಿಮ್ಮಾಹಿತಿ ಸಲ್ಲಿಸಬೇಕು. ಹಾಗೆಯೇ ದ್ವಿತೀಯ ಪಿಯುಸಿ ಫಲಿತಾಂಶದಲ್ಲೂ ಜಿಲ್ಲೆ ಉತ್ತಮ ಸಾಧನೆ ಮಾಡಬೇಕು. ಈ ನಿಟ್ಟಿನಲ್ಲಿ ಡಿಡಿಪಿಯು ಸೂಕ್ತ ಕ್ರಮ ವಹಿಸಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಪದವಿಪೂರ್ವ ಉಪ ನಿರ್ದೇಶಕರು(ಆಡಳಿತ), ಡಯಟ್ ಪ್ರಾಂಶುಪಾಲರು, ಬಿಇಓಗಳು, ಹಿರಿಯ ಉಪನ್ಯಾಸಕರು, ಪಿಯು ಕಾಲೇಜುಗಳ ನೋಡಲ್ ಪ್ರಾಂಶುಪಾಲರು, ಬಿಆರ್‌ಸಿಗಳು, ಸಹಾಯಕ ನಿರ್ದೇಶಕರು, ಡಿಡಿಪಿಐ ಕಚೇರಿಯ ವಿಷಯ ಪರಿವೀಕ್ಷಕರು ಇನ್ನಿತರ ಅಧಿಕಾರಿಗಳು ಭಾಗವಹಿಸಿದ್ದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅಧಿಕಾರ ಸ್ವೀಕಾರ

ಮೈಸೂರಲ್ಲಿ ಬಿಜೆಪಿ ಸಂಭ್ರಮಾಚರಣೆ



ಬಿಜೆಪಿ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿ ಬಳಿ ಮುಖಂಡರು, ಕಾರ್ಯಕರ್ತರು ಸಂಭ್ರಮಾಚರಿಸಿದರು.

ಮೈಸೂರು, ಜ.20– ಬಿಜೆಪಿ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ನಿತಿನ್ ನಬಿನ್ ಅಧಿಕಾರ ವಹಿಸಿಕೊಂಡ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಕಚೇರಿ ಬಳಿ ಸಂಭ್ರಮಾಚರಿಸಲಾಯಿತು.

ಈ ವೇಳೆ ಪಕ್ಷದ ನಗರಾಧ್ಯಕ್ಷರಾದ ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಅತೀ ಹೆಚ್ಚು ಸದಸ್ಯತ್ವವನ್ನು ಹೊಂದಿರುವ ಬಿಜೆಪಿಗೆ ಈವರೆಗಿನ ಅತೀ ಕಿರಿಯ ಸಾರಥಿಯಾಗಿ ನಿತಿನ್ ನಬಿನ್ ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಬಣ್ಣಿಸಿದರು.

ಇದೇ ವೇಳೆ ಕಾರ್ಯಕರ್ತರಿಗೆ ಸಿಹಿ ವಿತರಿಸಲಾಯಿತು. ಪಕ್ಷದ ಗ್ರಾಮಾಂತರ ಅಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಮುಖಂಡರಾದ ಎನ್.ವಿ.ಫಣೀಶ್, ಎಂ.ಜಿ.ಮಹೇಶ್, ಶಿವಕುಮಾರ್, ಸೋಮಸುಂದರ್, ಎಂ.ಶಿವಕುಮಾರ್, ರುದ್ರಮೂರ್ತಿ, ಬಿ.ಎಂ.ರಘು, ಎಂ.ಚಿಕ್ಕವೆಂಕಟು, ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಸಚಿನ್ ಗೌಡ, ಎಸ್‌ಸಿ ಮೋರ್ಚಾ ಅಧ್ಯಕ್ಷ ವಿ.ಶೈಲೇಂದ್ರ, ಪ್ರಧಾನ ಕಾರ್ಯದರ್ಶಿ ಕಾರ್ತಿಕ್ ಮರಿಯಪ್ಪ, ಕೆ.ಗಿರೀಶ್, ಮೈ.ಪು.ರಾಜೇಶ್, ಗೋಕುಲ್ ಗೋವರ್ಧನ್, ಅರುಣ್ ಕುಮಾರ್ ಗೌಡ, ಮರಿಸ್ವಾಮಿ ನಾಯಕ, ತ್ಯಾಗರಾಜ್, ಎಸ್.ಮಹೇಶ್ ಕುಮಾರ್, ಹಂಚ್ಯಾ ರವಿ, ರಾಕೇಶ್ ಭಟ್, ಸ್ಮಾರ್ಟ್ ಮಂಜು, ರಾಮೇಗೌಡ, ದಾಸಪ್ರಕಾಶ್, ಮಹೇಶ, ಶಿವು, ರಾಘವೇಂದ್ರ, ಪ್ರತಾಪ್, ಹೆಡತಲೆ ಸಿದ್ದರಾಜು ಸೇರಿದಂತೆ ಪದಾಧಿಕಾರಿಗಳು ಮತ್ತು ಪ್ರಮುಖರು ಉಪಸ್ಥಿತರಿದ್ದರು.

ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ಗುತ್ತಿಗೆದಾರ ಕಂಪನಿಗೆ ಎನ್‌ಹೆಚ್‌ಎಐನಿಂದ ಕಾರ್ಯಾದೇಶ

● ಶೀಘ್ರವೇ ಕಾಮಗಾರಿ ಆರಂಭ ● ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಯೋಜನೆ ● ಇದರಿಂದ ಟ್ರಾಫಿಕ್ ಜಾಮ್‌ನಿಂದ ಮುಕ್ತಿ ಸಿಗುವ ನಿರೀಕ್ಷೆ

ಮೈಸೂರು, ಜ.20(ಬಿಎಲ್‌ಯು)– ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣಕ್ಕೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್ ಹೆಚ್‌ಎಐ) ಇಂದು ಗುತ್ತಿಗೆದಾರನಿಗೆ ವರ್ಕ್ ಆರ್ಡರ್ ನೀಡಿದೆ.


ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಮಾಡಲಾಗುತ್ತಿದ್ದು, ದಾರಿವಾಲ್ ಬಿಲ್ಡ್ ಟೆಕ್ ಪ್ರೈವೇಟ್ ಲಿಮಿಟೆಡ್‌ಗೆ ಟೆಂಡರ್ ನೀಡಲಾಗಿದೆ.

ಗುತ್ತಿಗೆದಾರ ಕಂಪನಿಗೆ ವರ್ಕ್ ಆರ್ಡರ್ ನೀಡಿರುವ ಹಿನ್ನೆಲೆಯಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ನಿಶ್ಚಿತವಾಗಿದೆ. ಸದರಿ ಕಂಪನಿ ಎಲ್ಲಾ ತಯಾರಿ ಮಾಡಿಕೊಂಡು ಶೀಘ್ರದಲ್ಲೇ ಕಾಮಗಾರಿ ಆರಂಭಿಸಲಿದೆ.

ಮೈಸೂರು–ಕೊಡಗು ಲೋಕಸಭಾ ಸದಸ್ಯ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಇತ್ತೀಚೆಗೆ ಕೇಂದ್ರ ಭೂ ಹೆದ್ದಾರಿ ಸಚಿವ ನಿತಿನ್ ಗಡ್ಕರ್ ಅವರನ್ನು ಭೇಟಿ ಮಾಡಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಗ್ರೇಡ್ ಸಪರೇಟರ್ ಕಾಮಗಾರಿ ಶೀಘ್ರ ಆರಂಭಿಸುವಂತೆ ಮನವಿ ಸಲ್ಲಿಸಿದ್ದರು.

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಟ್ರಾಫಿಕ್ ಜಾಮ್ ಸಾಮಾನ್ಯವಾಗಿತ್ತು. ಬೆಂಗಳೂರು ಕಡೆಯಿಂದ ಎಕ್ಸ್‌ಪ್ರೆಸ್ ವೇನಲ್ಲಿ ಬರುವ ವಾಹನಗಳು, ಮೈಸೂರಿನಿಂದ ಇತರೆಡೆ ಹೋಗುವ ವಾಹನಗಳು, ಹುಣಸೂರು ಹಾಗೂ ಬನ್ನೂರು–ತಿ.ನರಸೀಪುರ ಮಾರ್ಗದಿಂದ ಬರುವ ವಾಹನಗಳು ಇಲ್ಲೇ ಹಾದು ಹೋಗಬೇಕಿದೆ.

ನಾಲ್ಕು ಭಾಗದಿಂದ ಸಾವಿರಾರು ವಾಹನಗಳು ಈ ಜಂಕ್ಷನ್‌ನಿಂದ ಸಾಗುವುದರಿಂದ ಪ್ರತಿ ನಿತ್ಯ ಇಲ್ಲಿ ಟ್ರಾಫಿಕ್ ಜಾಮ್ ಗೋಳಾಗಿತ್ತು. ಸಿಗ್ನಲ್ ಲೈಟ್ ಅಳವಡಿಸಿದ್ದರೂ ವಾಹನ ದಟ್ಟಣೆ ನಿಯಂತ್ರಣ ಸಾಧ್ಯವಾಗಿರಲಿಲ್ಲ. ಇದರಿಂದ ವಾಹನ ಸವಾರರಿಗೆ ತೀವ್ರ ತೊಂದರೆಯಾಗಿತ್ತು.

ಈ ಹಿನ್ನೆಲೆಯಲ್ಲಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ (ಮೇಲ್ಸೇತುವೆ) ನಿರ್ಮಿಸುವ ಯೋಜನೆ ರೂಪಿಸಲಾಗಿತ್ತು. ಆದರೆ ಯೋಜನೆ ಸಾಕಾರಗೊಳ್ಳದೆ ನೆನೆಗುದಿಗೆ ಬಿದ್ದಿತ್ತು. ಆದರೆ ಈಗ ಗುತ್ತಿಗೆದಾರ ಕಂಪನಿಗೆ ವರ್ಕ್ ಆರ್ಡರ್ ನೀಡಿರುವುದರಿಂದ ಗ್ರೇಡ್ ಸಪರೇಟರ್ ನಿರ್ಮಾಣ ಆಗುವುದು ಖಚಿತವಾಗಿದೆ.

ರೂಮ್ ಬಾಡಿಗೆ ಕೇಳಿದ್ದಕ್ಕೆ ಮಾಲೀಕರ ಮನೆಗೆ ಬೆಂಕಿಯಿಟ್ಟ ಕಿಡಿಗೇಡಿ!

ಮೈಸೂರು,ಜ.20(ಪಿಎಂ)– ರೂಮ್ ಬಾಡಿಗೆ ಕೇಳಿದ್ದಕ್ಕೆ ಕಿಡಿಗೇಡಿ, ಮಾಲೀಕರ ಮನೆಗೆ ಪೆಟ್ರೋಲ್ ಸುರಿದು ಬೆಂಕಿ ಇಟ್ಟು ಪರಾರಿಯಾಗಿರುವ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಯರಗನಹಳ್ಳಿಯ ಜನತಾ ಬಡಾವಣೆಯಲ್ಲಿನ ತಮ್ಮ ಮನೆ ಬಾಗಿಲಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿರುವ ಬಗ್ಗೆ ಎಸ್.ಕುಮಾರ್ ಎಂಬುವವರು ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಿಸಲಾಗಿದೆ. ನಮ್ಮ ನಾಲ್ಕು ಅಂತಸ್ತಿನ ಮನೆಯ ನೆಲ ಮಹಡಿಯಲ್ಲಿ ನಮ್ಮ ಕುಟುಂಬ ವಾಸವಾಗಿದೆ. ಉಳಿದ ಮೂರು ಅಂತಸ್ತನ್ನು ಬೋಗ್ಯಕ್ಕೆ ನೀಡಿದ್ದು, ಮನೆಯ ಕೊನೆಯ ಅಂತಸ್ತಿನ ರೂಮ್ ಒಂದನ್ನು ಎನ್. ಸುಮಿತ್ ಎಂಬಾತನಿಗೆ 6 ತಿಂಗಳ ಹಿಂದೆ ಬಾಡಿಗೆಗೆ ನೀಡಲಾಗಿತ್ತು. ರೂಮಿಗೆ ಸುಮಿತ್‌ನ ಅಣ್ಣ ದರ್ಶನ್ ಆಗಾಗ್ಗೆ ಬಂದು ಹೋಗುತ್ತಿದ್ದರು.

2 ತಿಂಗಳ ಹಿಂದೆ ರೂಮ್ ಅನ್ನು ಖಾಲಿ ಮಾಡಿದ್ದರಾದರೂ ಕೆಲ ಸಾಮಗ್ರಿ ಅಲ್ಲೇ ಬಿಟ್ಟಿದ್ದರು. ಅವುಗಳನ್ನು ಖಾಲಿ ಮಾಡಿ, ಎರಡು ತಿಂಗಳ ಬಾಡಿಗೆ ಪಾವತಿಸಿ, ರೂಂಗೆ ಬಣ್ಣ ಬಳಿಸುವ ಸಂಬಂಧ ಮಾತನಾಡಲು ಸುಮಿತ್ ಸಂಪರ್ಕಕ್ಕೆ ಸಿಗುತ್ತಿರಲಿಲ್ಲ. ಜ.18ರ ರಾತ್ರಿ 9 ಗಂಟೆಯಲ್ಲಿ ಆರ್.ಮಹದೇವಪ್ಪ ವೃತ್ತದಲ್ಲಿ ದರ್ಶನ್ ಕಂಡರು. ರೂಮ್ ಬಾಡಿಗೆ ಸಂಬಂಧ ಅವರಲ್ಲಿ ವಿಷಯ ಪ್ರಸ್ತಾಪಿಸಿದಾಗ, ಆತ ಜಗಳ ಶುರು ಮಾಡಿದ. ಇದಾದ ಬಳಿಕ ರಾತ್ರಿ 10.30ರ ವೇಳೆಯಲ್ಲಿ ಈತ ನಮ್ಮ ಮನೆ ಬಾಗಿಲಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾದ. ಆಗ ಅಕ್ಕಪಕ್ಕದ ಮನೆಯವರು ಬೆಂಕಿ ನಂದಿಸಿ ನಮ್ಮ ಕುಟುಂಬ ರಕ್ಷಿಸಿದರು. ಬಾಗಿಲು ಸಂಪೂರ್ಣ ಸುಟ್ಟಿದ್ದು, ಸುಮಾರು 80 ಸಾವಿರ ರೂ. ನಷ್ಟವಾಗಿದೆ ಎಂದು ಕುಮಾರ್, ತಾವು ನೀಡಿರುವ ದೂರಿನಲ್ಲಿ ಆರೋಪಿಸಿದ್ದಾರೆ.

ಕೇಂದ್ರದ ಪ್ರತಿ ನಿರ್ಧಾರ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿವೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪ

ಬೆಂಗಳೂರು, ಜ.20(ಕೆಎಂಶಿ)–ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ಕೇಂದ್ರ ಸರ್ಕಾರ ಕೈಗೊಳ್ಳುತ್ತಿರುವ ನಿರ್ಣಯಗಳ ಕುರಿತು ಚರ್ಚಿಸಲು ದಕ್ಷಿಣ ಭಾರತ ಮುಖ್ಯಮಂತ್ರಿಗಳ ಸಭೆ ಕರೆಯುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ತಿಳಿಸಿದ್ದಾರೆ.



ದಕ್ಷಿಣ ಭಾರತ ಸಮಾಜವಾದಿಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಒಕ್ಕೂಟ ವ್ಯವಸ್ಥೆ ಹಾಳು ಮಾಡುವ ರೀತಿ ನಡೆದುಕೊಳ್ಳುತ್ತಿದೆ.


ಕೇಂದ್ರದ ಈ ನಡವಳಿಕೆಯಿಂದ ರಾಜ್ಯದ ಪಾಲಿಗೆ ಬರಬೇಕಾದ ಅನುದಾನ ಕಡಿಮೆಯಾಗಿದೆ. ಅದರಲ್ಲೂ, ದಕ್ಷಿಣ ಭಾರತ ರಾಜ್ಯಗಳಿಗೆ ಹೆಚ್ಚು ಅನ್ಯಾಯವಾಗಿದೆ. ಇದನ್ನು ನಾವು ಪ್ರಜಾಸತ್ತಾತ್ಮಕವಾಗಿ ಪ್ರಶ್ನಿಸಬೇಕಾಗಿದೆ ಎಂದರು.

ಕೇಂದ್ರಕ್ಕೆ ಹೆಚ್ಚಿನ ತೆರಿಗೆ ನೀಡುವ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ಆದರೆ, ನಮಗೆ ಕೇಂದ್ರದಿಂದ ಬರುತ್ತಿರುವ ಅನುದಾನ ಪ್ರಮಾಣ ಗಣನೀಯವಾಗಿ ಕಡಿಮೆ ಆಗಿದೆ. ಇದರ ಜೊತೆಗೆ ಮನರೇಗಾ ಯೋಜನೆ ಮೂಲಕ ನೀಡುತ್ತಿದ್ದ ಅನುದಾನದಲ್ಲೂ ಕಡಿಮೆ ಮಾಡಿ ರಾಜ್ಯಗಳ ಮೇಲೆ ಹೊರೆ ಹೇರಲಾಗಿದೆ. ಇದರಿಂದ ದಕ್ಷಿಣ ಭಾರತ ರಾಜ್ಯಗಳ ಆರ್ಥಿಕ ವ್ಯವಸ್ಥೆ ಮೇಲೆ ಭಾರೀ ಪರಿಣಾಮ ಬೀರಲಿದೆ ಎಂದರು.

ಇದೀಗ ಕೇಂದ್ರ ಸರ್ಕಾರ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಮೂಲಕ ದಕ್ಷಿಣ ರಾಜ್ಯಗಳ ವ್ಯಾಪ್ತಿಯ ಕ್ಷೇತ್ರಗಳ ಸಂಖ್ಯೆ ಕಡಿತಗೊಳಿಸಿ, ಉತ್ತರ ಭಾರತದ ಹಿಂದಿ ಭಾಷಾ ಪ್ರಾಬಲ್ಯದ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆ ಹೆಚ್ಚಿಸಲು ಹೊರಟಿದೆ ಎಂದು ದೂರಿದರು.

ಪಂಚ ಗ್ಯಾರಂಟಿ ಯೋಜನೆ ಬಡವರ ಬದುಕು ಬಂಗಾರವಾಗಿಸಿದೆ

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಅಭಿಮತ


ತಿ.ನರಸೀಪುರ ಬಸ್ ನಿಲ್ದಾಣದಲ್ಲಿ ಸರ್ಕಾರಿ ಯೋಜನೆಗಳ ವಸ್ತುಪ್ರದರ್ಶನ ಮಳಿಗೆ ಉದ್ಘಾಟಿಸಿದ ಗಣ್ಯರು, ಮುಖ್ಯಮಂತ್ರಿ ಸಿದ್ದರಾಮಯ್ಯರ ಪ್ರತಿಮೆಯೊಂದಿಗೆ ಪೋಸ್ ನೀಡಿದರು.

ಮೈಸೂರು,ಜ.20– ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಜೊತೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ನೀಡಿರುವ ಕಾರ್ಯಕ್ರಮಗಳು ಬಡವರ ಬದುಕನ್ನು ಬಂಗಾರವಾಗಿಸಿದೆ ಎಂದು ತಿ.ನರಸೀಪುರ ತಾಲೂಕು ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ.ವೈ. ಮಹದೇವ ಪ್ರಭು ಅಭಿಪ್ರಾಯಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ತಿ.ನರಸೀಪುರ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣದಲ್ಲಿ 3 ದಿನಗಳ ಕಾಲ ಆಯೋಜಿಸಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿಗಾಗಿ ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳು ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಕುರಿತ ವಸ್ತುಪ್ರದರ್ಶನದ ಮಳಿಗೆ ಉದ್ಘಾಟಿಸಿ, ಅವರು ಮಾತನಾಡಿದರು.

ಕಾಂಗ್ರೆಸ್ ಸರ್ಕಾರ ಪರಿಶಿಷ್ಟ ಜಾತಿ/ಪಂಗಡ, ಹಿಂದುಳಿದ ಸಮುದಾಯದ ಅಭಿವೃದ್ಧಿ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಗೃಹಲಕ್ಷ್ಮೀ, ಯುವನಿಧಿ ಯೋಜನೆ ಫಲಾನುಭವಿಗಳ ಖಾತೆಗೆ ನೇರವಾಗಿ ಹಣ ಜಮಾ ಆಗುವ ವ್ಯವಸ್ಥೆ ಇರುವುದರಿಂದ ಮಧ್ಯವರ್ತಿಗಳ ಹಾವಳಿ ತಡೆದಂತಾಗಿದೆ. ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಂಡು ಬಡವರು ಹಾಗೂ ಮಹಿಳೆಯರು ಆರ್ಥಿಕವಾಗಿ ಸದೃಢವಾಗಬೇಕು ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ತಿ.ನರಸಿಪುರ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾದ ಡಿ.ಎಂ. ಪರಶಿವಮೂರ್ತಿ, ಎನ್.ಕೋಕಿಲ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕರಾದ ಎಸ್.ಹೆಚ್.ನಿರ್ಮಲ ಉಪಸ್ಥಿತರಿದ್ದರು. ಇದೇ ವೇಳೆ ಮಳಿಗೆ ವೀಕ್ಷಿಸಿದ ಸಾರ್ವಜನಿಕರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರತಿಮೆ ಬಳಿ ನಿಂತು ಫೋಟೋ ತೆಗೆಸಿಕೊಂಡರು.

ಮದರ್ ಆಫ್ ಆಲ್ ಡೀಲ್

ಅಂತಿಮ ಹಂತ ತಲುಪಿದ ಭಾರತ–ಯುರೋಪಿಯನ್ ಒಕ್ಕೂಟದ ಎಫ್‌ಟಿಎ ಮಾತುಕತೆ!

ದಾವೋಸ್: ಭಾರತ ಮತ್ತು ಯುರೋಪಿಯನ್ ಒಕ್ಕೂಟವು ಐತಿಹಾಸಿಕ ಮುಕ್ತ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸುವ ಹಂತಕ್ಕೆ ತಲುಪಿದ್ದು, ಇದು ಸುಮಾರು ಎರಡು ಶತಕೋಟಿ ಜನರ ಮಾರುಕಟ್ಟೆಯನ್ನು ಸೃಷ್ಟಿಸುತ್ತದೆ ಮತ್ತು ಜಾಗತಿಕ ಜಿಡಿಪಿಯ ಸುಮಾರು ಕಾಲು ಭಾಗದಷ್ಟು ಪಾಲನ್ನು ಹೊಂದಿದೆ ಎಂದು ಯುರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರು ಮಂಗಳವಾರ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಶ್ವದ ವಿವಿಧ ದೇಶಗಳ ವಿರುದ್ಧ ಸುಂಕ ಸಮರ ಸಾರಿದ್ದು ಹುಚ್ಚು ದೊರೆಯ ಹುಚ್ಚಾಟಕ್ಕೆ ಭಾರತದಂತ ದೇಶಗಳು ಎಫ್‌ಟಿಎ ಮೂಲಕ ತಿರುಗೇಟು ನೀಡಲು ಸಜ್ಜಾಗಿವೆ.

ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷ ಆಂಟೋನಿಯೊ ಕೋಸ್ಟಾ ಮತ್ತು ವಾನ್ ಡೆರ್ ಲೇಯೆನ್ ಅವರು ಜನವರಿ 25 ರಿಂದ 27 ರವರೆಗೆ ಭಾರತದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಿದ್ದಾರೆ.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯನ್ನು ಉದ್ದೇಶಿಸಿ ಮಾತನಾಡಿದ ಉರ್ಸುಲಾ ವಾನ್ ಡೆರ್ ಲೇಯೆನ್ ಅವರು, ಯುರೋಪಿಯನ್ ಒಕ್ಕೂಟವು ಭಾರತದೊಂದಿಗೆ ಮುಕ್ತ ವ್ಯಾಪಾರ ಒಪ್ಪಂದವನ್ನು ಮುಕ್ತಾಯಗೊಳಿಸುವ ಹಂತದಲ್ಲಿದೆ. ಈ ಡೀಲ್ ಒಪ್ಪಂದಗಳ ಮಹಾತಾಯಿ ಇದ್ದಂತೆ ಎಂದು ಬಣ್ಣಿಸಿದರು.

ಜನವರಿ 27 ರಂದು ನಡೆಯಲಿರುವ ಭಾರತ–ಇಯು ಶೃಂಗಸಭೆಯಲ್ಲಿ ಬಹು ನಿರೀಕ್ಷಿತ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ ಅಂತಿಮವಾಗಲಿದ್ದು, ಇದನ್ನು ಎರಡೂ ಕಡೆಯವರು ಘೋಷಿಸಲಿದ್ದಾರೆ.

ಈಗ ಎಲ್ಲಾ ವಿಚಾರದಲ್ಲೂ ಬೆಂಕಿ ಹಚ್ಚುವ ಕೆಲಸವಾಗುತ್ತಿದೆ

ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕ ಕೆ.ಸಿ.ಶಿವಾರೆಡ್ಡಿ ಬೇಸರ

ಮೈಸೂರು, ಜ.20(ಎಸ್‌ಪಿಎನ್)– ಕಾವ್ಯಕ್ಕೆ ಮಹಾನ್ ಧ್ವನಿ ಶಕ್ತಿಯಿದೆ. ನಾವು ಬೇಂದ್ರೆ ಮತ್ತು ಕುವೆಂಪು ಅವರ ಸಾಹಿತ್ಯವನ್ನು ಸರಿಯಾಗಿ ಓದಿ, ಅರ್ಥೈಸಿಕೊಳ್ಳುತ್ತಿಲ್ಲ ಎಂದು ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕಾವ್ಯಾಧ್ಯಯನ ಪೀಠ ಸಂದರ್ಶಕ ಪ್ರಾಧ್ಯಾಪಕ ಕೆ.ಸಿ ಶಿವಾರೆಡ್ಡಿ ಬೇಸರ ವ್ಯಕ್ತಪಡಿಸಿದರು.



ಬೇಂದ್ರೆ ಸಾಹಿತ್ಯದ ಕುರಿತು ಮೈಸೂರು ವಿಶ್ವವಿದ್ಯಾನಿಲಯ ಕುವೆಂಪು ಕಾವ್ಯಾಧ್ಯಯನ ಪೀಠ ಸಂದರ್ಶಕ ಪ್ರಾಧ್ಯಾಪಕ ಕೆ.ಸಿ ಶಿವಾರೆಡ್ಡಿ ಮಾತನಾಡಿದರು.

ಮೈಸೂರು ಹೊರವಲಯದ ಬೋಗಾದಿ ಎಸ್‌ಬಿಎಂ ಬಡಾವಣೆಯಲ್ಲಿನ ಪುಸ್ತಕ ಲೋಕದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವಿಚಾರ ವೇದಿಕೆ, ಮೈಸೂರು ನಿರ್ಧಿಗಂತ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಹಾಗೂ ದೇಶಿ ಕ್ರಿಯೇಷನ್ಸ್ ಮೈಸೂರು ಸಂಯುಕ್ತಾಶ್ರಯದಲ್ಲಿ ನಡೆದ ಬೇಂದ್ರೆ ಸಾಹಿತ್ಯದ ಕುರಿತು ಮಾತನಾಡಿದರು.

ಕೆಲವರು ಈ ಕಾಲಕ್ಕೆ ಅಗತ್ಯವಲ್ಲದ ವಿಚಾರಗಳನ್ನು ತಲೆಯ ಮೇಲೆ ಹೊತ್ತುಕೊಂಡು ಓಡಾಡುತಿದ್ದಾರೆ. ಹಳೆಯ ಚಿಂತನೆಗಳನ್ನು ತೊಳೆದು ಕಾವ್ಯಕ್ಕೆ ಹೊಸದಾಗಿ ಪ್ರವೇಶ ಮಾಡಲು ಬೇಕಾದ ಪರಿಸ್ಥಿತಿಯನ್ನು ಸಿದ್ಧ ಮಾಡಿಕೊಳ್ಳಬೇಕಿದೆ. ಅಲ್ಲದೆ, ಸಮಾಜದ ಕಣ್ಣಿಗೆ ಜಿಡ್ಡು ಅಂಟಿಕೊಂಡಿದೆ. ಅದನ್ನು ಒರೆಸಿಕೊಳ್ಳದೇ ಹೊಸತನವನ್ನು ಕಾಣಲು ಸಾಧ್ಯವಿಲ್ಲ. ನೋಡುವ ಕ್ರಮ ಸ್ಪಷ್ಟವಾಗಿ ಬದಲಾಗಬೇಕಿದೆ. ಇದನ್ನೇ ಬೇಂದ್ರೆ ಹಾಗೂ ಕುವೆಂಪು ಬರೆದಿರುವುದು ಎಂದು ಅಭಿಪ್ರಾಯಪಟ್ಟರು.

ನಮ್ಮ ಕಾಲಕ್ಕೆ ಬೇಂದ್ರೆ ಮತ್ತು ಕುವೆಂಪು ಅವರಿಬ್ಬರು ಎರಡು ಕಣ್ಣುಗಳಿದ್ದಂತೆ, ಅವರ ನೋಟ ಒಂದೆ. ಅವರನ್ನು ಓದುವ ಹಿಂದಿನ ಕ್ರಮಗಳನ್ನು ಪಕ್ಕಕ್ಕೆ ಸರಿಸಬೇಕಿದೆ. ಕುವೆಂಪು ಮತ್ತು ಬೇಂದ್ರೆ ಅವರ ಆಶಯ ಪ್ರಾರ್ಥನೆ ಎರಡು ಒಂದೆ. ರಾಮ ಹುಟ್ಟಿ ನಮ್ಮ ನಮ್ಮ ಹೃದಯದಲ್ಲಿ. ಈ ರೀತಿಯಲ್ಲಿ ಸಾಹಿತ್ಯ ದಾಟಿಸುವಂತಹ ಪರಂಪರೆಯನ್ನು ಹುಟ್ಟು ಹಾಕುತ್ತವೆ ಎಂದರು.

ಆದರೆ ನಾವು ಸಂಕುಚಿತಗೊಂಡು ಯುವಜನತೆಯನ್ನು ದಾರಿ ತಪ್ಪಿಸುತ್ತಿದ್ದೇವೆ. ತಮ್ಮ ಬೇಳೆ ಬೇಯಿಸಿಕೊಳ್ಳುವ ಕೃತ್ಯ ಮಾಡಲಾಗುತ್ತಿದೆ. ಇವತ್ತು ಸಮಾಜದಲ್ಲಿ ಎಲ್ಲರ ನಡುವೆ ಒಗ್ಗೂಡಿಸುವುದಕ್ಕಿಂತ ಬೆಂಕಿ ಹಚ್ಚುವ ಕೆಲಸಗಳಾಗುತ್ತಿವೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮಾಡುತ್ತಿರುವುದು ಇದನ್ನೇ. ಒಬ್ಬ ಧರ್ಮ ಎಂದರೆ, ಮತ್ತೊಬ್ಬ ಜಾತಿ ಎನ್ನುತ್ತಾನೆ ಎಂದು ಟೀಕಿಸಿದರು.

ಬೇಂದ್ರೆ ಅವರಿಗಿಂತ ಹಸಿವು, ಬಡತನ ಅನುಭವಿಸಿದ ಮತ್ತೊಬ್ಬ ಕವಿ ಇಲ್ಲ. ಬ್ರಿಟಿಷರ ವಿರುದ್ಧ ಬರೆದ ನರಬಲಿ ಕವಿತೆ ಕಾರಣ ಅವರನ್ನು ಜೈಲಿಗೆ ತಳ್ಳಲಾಯಿತು. ಜೈಲಿನಿಂದ ಬಂದ ಬಳಿಕ ಅವರ ಮೇಲೆ ನಜರ್‌ಬಂದಿ ಹಾಕಲಾಯಿತು. ಇವತ್ತು ರಾಜ್ಯ ಸರ್ಕಾರ ಶಾಂತಿಯ ತೋಟ ಎಂದು ದ್ವೇಷ ಭಾಷಣದ ಹೆಸರಿನಲ್ಲಿ ಕಾನೂನು ತಂದು ಅತಿರೇಕದ ಕೆಲಸಕ್ಕೆ ಕೈ ಹಾಕುತ್ತಿದ್ದಾರೆ. ಆದರೆ ತಮ್ಮ ವೈಯಕ್ತಿಕ ದ್ವೇಷಕ್ಕೆ ಕಾನೂನು ತಂದು ನಾಳೆ ಅದರ ಹೆಸರಿನಲ್ಲಿ ಯಾರನ್ನೂ ಬಂಧಿಸುವ ಕೆಲಸವಾಗುತ್ತದೆ ಎಂದು ಎಚ್ಚರಿಸಿದರು.

ವೇದಿಕೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಸದಸ್ಯ ಡಾ.ಜಯಪ್ರಕಾಶ್ ಶೆಟ್ಟಿ, ಚಿಕ್ಕಮಗಳೂರು ಗಣೇಶ್, ಕನ್ನಡ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ಪ್ರೊ.ಎಸ್.ಚಂದ್ರ ಕಿರಣ್ ಕುಳವಾಡಿ, ಬಿಜಿಎಸ್ ಬಿ.ಇಡಿ ಕಾಲೇಜು, ಮೈಸೂರು ಸಹಾಯಕ ಪ್ರಾಧ್ಯಾಪಕ ಡಾ.ಎಚ್.ಬಿ ಬೆಟ್ಟಸ್ವಾಮಿ, ದೇವರಾಜ ಪಿ.ಚಿಕ್ಕಹಳ್ಳಿ, ಡಾ.ಎನ್.ಯೋಗೇಶ್, ಡಾ.ಶಬಾನ ಮೈಸೂರು ಇದ್ದರು.

ಇಂದಿನಿಂದ ಭಾರತ–ನ್ಯೂಜಿಲೆಂಡ್ ಟಿ20 ಸರಣಿ

ಮೈಸೂರು, ಜ.20(ವಿವಿಹೆಚ್)– ಭಾರತ ಮತ್ತು ನ್ಯೂಜಿಲೆಂಡ್ ನಡುವಣ 5 ಪಂದ್ಯಗಳ ಟಿ20 ಸರಣಿಯ ಮೊದಲ ಪಂದ್ಯ ಇಂದಿನಿಂದ (ಜ21) ಆರಂಭವಾಗಲಿದೆ.

ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಜ.21 ರಿಂದ 31 ವರೆಗೆ 5 ಟಿ20 ಪಂದ್ಯಗಳನ್ನು ಆಡಲಿದ್ದು, ಮುಂಬರುವ ವಿಶ್ವಕಪ್ ಪಂದ್ಯಾವಳಿಯ ಉದ್ದೇಶದಿಂದ ಇತ್ತಂಡಗಳಿಗೆ ಇದು ಮಹತ್ವದ ಸರಣಿಯಾಗಿದೆ. ಮತ್ತೊಂದೆಡೆ ತವರಿನಲ್ಲಿ ಕಿವೀಸ್ ವಿರುದ್ಧ ಏಕದಿನ ಸರಣಿ ಸೋತಿರುವ ಭಾರತಕ್ಕೆ ಪ್ರತಿಷ್ಠೆಯ ಕಣವಾಗಿ ಮಾರ್ಪಟ್ಟಿದೆ.

ಟೀಂ ಇಂಡಿಯಾಕ್ಕೆ ಬಲಿಷ್ಠ ಬೌಲಿಂಗ್ ಪಡೆಯಿದ್ದು, ತಂಡವನ್ನು ಬಹುತೇಕ ಗೆಲ್ಲಲ್ಲು ಪ್ರಮುಖ ಅಸ್ತ್ರವಾಗಿರುವುದೇ ಈ ವಿಭಾಗವಾಗಿದೆ. ಇದರಲ್ಲಿ ಬುಮ್ರಾ, ಅರ್ಶದೀಪ್ ಸಿಂಗ್ ಮತ್ತು ವರುಣ್ ಚಕ್ರವರ್ತಿ ಮೋಡಿಯಿದ್ದರೆ, ಆಲ್‌ರೌಂಡರ್ ಆಗಿ ಹಾರ್ದಿಕ್, ಅಕ್ಷರ್ ಪಟೇಲ್ ಮತ್ತು ಶಿವಂ ದುಬೆ ಪ್ರಭಾವ ಬೀರಲಿದ್ದಾರೆ.


ಟೀಂ ಇಂಡಿಯಾ ಆಟಗಾರರು ಅಭ್ಯಾಸದಲ್ಲಿ ನಿರತರಾಗಿರುವುದು

ಇತ್ತ ವಿಕೆಟ್ ಕೀಪಿಂಗ್ ವಿಭಾಗದಲ್ಲಿ ಸಂಜು ಇದ್ದರೆ, ಅಭಿಷೇಕ್ ಶರ್ಮಾ ಮತ್ತು ಶ್ರೇಯಸ್ ಅಯ್ಯರ್, ರಿಂಕು ಸಿಂಗ್ ಬ್ಯಾಟಿಂಗ್‌ಗೆ ಬಲ ತುಂಬಲಿದ್ದಾರೆ. ಅಚ್ಚರಿಯೆಂಬಂತೆ ನಾಯಕ ಸೂರ್ಯಕುಮಾರ್ ಯಾದವ್ ಔಟ್ ಆಫ್ ಫಾರ್ಮ್‌ನಲ್ಲಿದ್ದು, ಅವರ ಪುಟಿದೇಳುವಿಕೆ ಮುಂಬರುವ ವಿಶ್ವಕಪ್‌ಗೆ ಅತ್ಯಗತ್ಯವಾಗಿದೆ.

ಭಾರತ ತಂಡದ ಸಾರಥ್ಯವನ್ನು ಸೂರ್ಯಕುಮಾರ್ ಯಾದವ್ ವಹಿಸಿದ್ದರೆ, ಕಿವೀಸ್‌ಗೆ ನಾಯಕನಾಗಿ ಮಿಚೆಲ್ ಸ್ಯಾಂಟ್ನರ್ ತಂಡವನ್ನು ಮುನ್ನಡೆಸಲಿದ್ದಾರೆ. ಇತ್ತಂಡಗಳು 2023ರಲ್ಲಿ 3 ಟಿ20 ಪಂದ್ಯಗಳ ಸರಣಿ ಆಡಿದ್ದವು. ಇದಕ್ಕೆ ಭಾರತ ಆತಿಥ್ಯ ವಹಿಸಿತ್ತು. ಜೊತೆಗೆ ಈ ಸರಣಿಯನ್ನು 2–1 ಅಂತರದಿಂದ ಭಾರತವೇ ಜಯಿಸಿತ್ತು.

ಇನ್ನು ಟಿ20 ವಿಶ್ವಕಪ್ ವಿಚಾರಕ್ಕೆ ಬಂದರೆ, ಐಸಿಸಿ ಟಿ20 ವಿಶ್ವಕಪ್ ಟೂರ್ನಿಗಳಲ್ಲಿ ಇತ್ತಂಡಗಳು ಈವರೆಗೆ ಕೇವಲ 3 ಬಾರಿ ಮುಖಾಮುಖಿಯಾಗಿದ್ದು, ಎಲ್ಲಾ ಮೂರು ಪಂದ್ಯಗಳಲ್ಲಿಯೂ ನ್ಯೂಜಿಲೆಂಡ್ ಗೆದ್ದು ಬೀಗಿದೆ. ಆದರೆ ಮುಂಬರುವ ಟಿ20 ವಿಶ್ವಕಪ್‌ನಲ್ಲಿ ಭಾರತ ಮತ್ತು ಕಿವೀಸ್ ನಡುವೆ ಯಾವುದೇ ಲೀಗ್ ಪಂದ್ಯಗಳು ಇಲ್ಲ. ಕ್ವಾಲಿಫೈ ಹಂತದಲ್ಲಿ ಮುಖಾಮುಖಿಯಾದಲ್ಲಿ ಭಾರತಕ್ಕೆ ದೊಡ್ಡ ಸವಾಲಾಗಿ ಕಾಡಲಿದೆ. ಇನ್ನು ಐದು ಟಿ20 ಸರಣಿಯನ್ನು ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ವೀಕ್ಷಿಸಬಹುದಾಗಿದೆ ಮತ್ತು ಜಿಯೋ ಸ್ಟಾರ್‌ನಲ್ಲಿ ಲೈವ್ ಸ್ಟ್ರೀಮಿಂಗ್ ಇರಲಿದೆ.

ಸರಣಿ ವೇಳಾಪಟ್ಟಿ

ಜ.21– ಮೊದಲ ಟಿ20: ನಾಗ್ಪುರ (ರಾತ್ರಿ 7ಕ್ಕೆ)
ಜ.23– ಎರಡನೇ ಟಿ20: ರಾಯ್‌ಪುರ್ (ರಾತ್ರಿ 7ಕ್ಕೆ)
ಜ.25– ಮೂರನೇ ಟಿ20: ಗುವಾಹಟಿ (ರಾತ್ರಿ 7ಕ್ಕೆ)
ಜ.28– ನಾಲ್ಕನೇ ಟಿ20: ವಿಶಾಖಪಟ್ಟಣ (ರಾತ್ರಿ 7ಕ್ಕೆ)
ಜ.31– ಐದನೇ ಟಿ20: ತಿರುವನಂತಪುರಂ (ರಾತ್ರಿ 7ಕ್ಕೆ)

ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ಸಮಾರೋಪ ಸಮಾರಂಭ

ಸನಾತನ ಹಿಂದೂ ಧರ್ಮದ ಮೇಲೆ ಗದಾಪ್ರಹಾರ

ಧಾರ್ಮಿಕ ಪೂಜೆಗಳಿಂದ ಸನಾತನ ಧರ್ಮ ಗಟ್ಟಿಯಾಗಿದೆ: ಶಾಸಕ ಟಿ.ಎಸ್.ಶ್ರೀವತ್ಸ

ನಂಜನಗೂಡು, ಜ.20– ಸನಾತನ ಹಿಂದೂ ಧರ್ಮದ ಮೇಲೆ ಆಗಾಗ್ಗೆ ಗದಾಪ್ರಹಾರ ನಡೆಯುತ್ತಿರುತ್ತದೆ. ಆದರೆ ಧಾರ್ಮಿಕ ಶ್ರದ್ಧಾ ಕೇಂದ್ರಗಳು, ಮಠ ಮಾನ್ಯಗಳು ಲೋಕ ಕಲ್ಯಾಣಾರ್ಥ ನಡೆಸುವ ಧಾರ್ಮಿಕ ಮತ್ತು ದೇವರ ಪೂಜೆಯಿಂದಾಗಿ ಸನಾತನ ಹಿಂದೂ ಧರ್ಮ ಗಟ್ಟಿಯಾಗಿ ನೆಲೆಯೂರಲು ಸಾಧ್ಯವಾಗಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸ ಹೇಳಿದರು.

ಸುತ್ತೂರಿನ ಆದಿ ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ನಡೆದ ಸಾಂಸ್ಕೃತಿಕ ಮೇಳ ಮತ್ತು ವಸ್ತು ಪ್ರದರ್ಶನ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸನಾತನ ಹಿಂದೂ ಧರ್ಮದ ಮೇಲೆ ಆಗಾಗ್ಗೆ ಗದಾಪ್ರಹಾರ ನಡೆಯುತ್ತಿರುತ್ತದೆ. ಮೊದಲಿಗೆ ಆಂಧ್ರದ ತಿರುವನಂತಪುರದ ಮೇಲೆ, ನಂತರ ಶಬರಿಮಲೆ ಕ್ಷೇತ್ರದ ಮೇಲೆ, ನಂತರ ಧರ್ಮಸ್ಥಳದ ಮೇಲೆ ಗದಾಪ್ರಹಾರ ನಡೆಸಲಾಯಿತು. ಆದರೆ ಅವರ ಎಲ್ಲಾ ಷಡ್ಯಂತರಗಳು ಸಫಲತೆ ಕಾಣಲು ಸಾಧ್ಯವಾಗಲಿಲ್ಲ. ಮಠಮಾನ್ಯಗಳ ಧಾರ್ಮಿಕ ಮುಖಂಡರು ಸಾಮೂಹಿಕ ಪ್ರಾರ್ಥನೆ, ದೇವರ ಪೂಜೆ, ಲೋಕ ಕಲ್ಯಾಣಾರ್ಥವಾಗಿ ನಡೆಸುವ ಧಾರ್ಮಿಕ ಕೈಂಕರ್ಯಗಳಿಂದಾಗಿ ಹಿಂದೂ ಸನಾತನ ಧರ್ಮ ಗಟ್ಟಿಯಾಗಿ ನೆಲೆಯೂರಲು ಸಾಧ್ಯವಾಗಿದೆ. ಸುತ್ತೂರು ಜಾತ್ರಾ ಮಹೋತ್ಸವ ಮೈಸೂರು ದಸರಾ ಮಾದರಿ ನಾಡಿನ ಕಲೆ, ಸಂಸ್ಕೃತಿ, ಪರಂಪರೆ ಬಿಂಬಿಸುವ ಜಾತ್ರೆಯಾಗಿದ್ದು, ಈ ಭಾಗದ ಗ್ರಾಮೀಣರ ಸೊಗಡಿನ ಸಂಸ್ಕೃತಿ ಉತ್ತೇಜಿಸಿ ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವ ಕಾರ್ಯದಲ್ಲಿ ಶ್ರೀಮಠ ನಿರತವಾಗಿದೆ ಎಂದರು.



ಸಮಾರೋಪ ಸಮಾರಂಭದಲ್ಲಿ ಶಾಸಕ ಶ್ರೀವತ್ಸ ಮಾತನಾಡಿದರು.

ನಿವೃತ್ತ ಕುಲಪತಿ ಹೇಮಂತ್ ಕುಮಾರ್ ಮಾತನಾಡಿ, ಭಾರತದ 140 ಕೋಟಿ ಜನಸಂಖ್ಯೆಯಲ್ಲಿ ಶೇ.40ರಷ್ಟು ಯುವಕರಿದ್ದಾರೆ. ಆದರೆ ಯಾವುದೇ ಸರ್ಕಾರಗಳು ಯುವಕರಿಗೆ ತಕ್ಕ ತರಬೇತಿ, ಉತ್ತೇಜನ ನೀಡುತ್ತಿಲ್ಲ. ಯುವಕರಿಗೆ ಕೇವಲ ವಿದ್ಯಾಭ್ಯಾಸ ನೀಡುವುದು ಸಲ್ಲದು. ಅವರ ಭವಿಷ್ಯ ರೂಪಿಸಿಕೊಳ್ಳಲು ಮಾರ್ಗ ತೋರಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಸಂಸ್ಥೆ 4 ವಿಶ್ವವಿದ್ಯಾನಿಲಯಗಳನ್ನು ತೆರೆದು, ಶಾಲಾ ಕಾಲೇಜುಗಳನ್ನು ತೆರೆದು ಯುವಕರಿಗೆ ತಕ್ಕ ತರಬೇತಿ ಮತ್ತು ಉತ್ತೇಜನ ನೀಡಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ದಾರಿ ತೋರುತ್ತಿದೆ ಎಂದರು.

ಹೆಬ್ಬಾಳು ರುದ್ರೇಶ್ವರ ವಿರಕ್ತ ಮಠದ ಮಹಾಂತ ರುದ್ರೇಶ್ವರ ಸ್ವಾಮೀಜಿ ಮಾತನಾಡಿ, ರಾಜ್ಯದ ಮಠಮಾನ್ಯಗಳು ಸನಾತನ ಸಂಸ್ಕೃತಿ ಸಂರಕ್ಷಿಸುವ ಕೆಲಸ ನಿರ್ವಹಿಸುತ್ತಿವೆ. ಬಡವರ್ಗದ ಜನರಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಸಂಸ್ಕಾರ, ಮಾನವೀಯ ಮೌಲ್ಯ ಮತ್ತು ಸಂಸ್ಕೃತಿ ಕಲಿಸುವಂತಹ ಕೆಲಸವನ್ನು ನಿರಂತರವಾಗಿ ಮಾಡುತ್ತಿರುವ ಕಾರಣ ಸನಾತನ ಸಂಸ್ಕೃತಿ ಜೀವಂತವಾಗಿದೆ ಎಂದರು. ಸಮಾರಂಭದಲ್ಲಿ ಶೈಕ್ಷಣಿಕ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿ ಆಯ್ಕೆಯಾದ ಶಾಲಾ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರದರ್ಶನ ತೋರಿದ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ಸಭೆಗೆ ಮೆರಗು ನೀಡಿತು.

ಸಮಾರಂಭದಲ್ಲಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಾಲೂರು ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಗುರುಬಸವ ಸ್ವಾಮೀಜಿ, ದಿವ್ಯ ಸಾನಿಧ್ಯ ವಹಿಸಿದ್ದರು. ಮಾಜಿ ಸಚಿವ ಎಸ್.ಟಿ.ಸೋಮಶೇಖರ್, ನಳಂದ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್‌ಎಲ್‌ಎನ್ ಶಾಂತಪ್ಪನ್, ಕೆಎಸ್‌ಎಂಸಿ ನಿಗಮದ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ, ಮುಡಾ ಪ್ರಾಧಿಕಾರ ಮಾಜಿ ಅಧ್ಯಕ್ಷ ರಾಜೀವ್, ಮುಖಂಡರಾದ ಬಿ.ಎನ್.ಸದಾನಂದ ಶ್ರೀವರ್ಧನ್ ಉಪಸ್ಥಿತರಿದ್ದರು.

> ಸುತ್ತೂರು ಮಠ ಸಮಾಜಮುಖಿ ಸೇವಾ ಕಾರ್ಯಗಳಿಂದಾಗಿ ರಾಜ್ಯದ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವುದಕ್ಕೆ ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಭಕ್ತರು ಆಗಮಿಸಿ ಜಾತ್ರೆ ಅನುಭವ ಪಡೆದಿರುವುದೇ ಸಾಕ್ಷಿ. ಶ್ರೀಗಳ ಸಲಹೆ ಮೇರೆಗೆ ಈ ಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಗಳ ರಸ್ತೆಗಳು ನಿರ್ಮಾಣಗೊಂಡು ಅಭಿವೃದ್ಧಿ ಹೊಂದಲು ಸಾಧ್ಯವಾಗಿದೆ. ಅಲ್ಲದೇ ಬರ ಪರಿಸ್ಥಿತಿಯಿಂದಾಗಿ ಕಂಗೆಟ್ಟಿದ್ದ ಈ ಭಾಗದ ರೈತರ ಭವಣೆ ತಿಳಿದು ಶ್ರೀಗಳು ಅಂದಿನ ಸಿಎಂ ಯಡಿಯೂರಪ್ಪ ಮತ್ತು ನೀರಾವರಿ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ಈ ಭಾಗದ ಕೆರೆ ಕಟ್ಟೆಗಳನ್ನು ತುಂಬಿಸುವಂತೆ ಸಲಹೆ ನೀಡಿದ್ದರಿಂದಾಗಿ ಈ ಭಾಗದಲ್ಲಿ ಹಸಿರು ಚಿಗುರಿ ರೈತಾಪಿ ವರ್ಗ ಸಮೃದ್ಧಿಯಿಂದ ಬಾಳಲು ಸಾಧ್ಯವಾಗಿದೆ. ಜೊತೆಗೆ ರೈತಾಪಿ ಬಡ ವರ್ಗದ ಜನರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಗ್ರಾಮೀಣ ಭಾಗಗಳಲ್ಲಿ ವಿದ್ಯಾ ಸಂಸ್ಥೆಗಳನ್ನು ತೆರೆದು ಶಿಕ್ಷಣ ಒದಗಿಸಿರುವ ಪರಿಣಾಮ ಲಕ್ಷಾಂತರ ಬಡವರ ಮಕ್ಕಳು ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಜಾತ್ರಾ ಮಹೋತ್ಸವದ ಮೂಲಕ ಎಲ್ಲಾ ಜಾತಿ, ವರ್ಗದ ಜನರನ್ನು ಒಂದಾಗಿ ಕರೆದುಕೊಂಡು ಹೋಗುವ ಮೂಲಕ ಭಾವೈಕ್ಯತೆ ಸಾರುತ್ತಿದ್ದಾರೆ.
>
> – ಎ.ಆರ್.ಕೃಷ್ಣಮೂರ್ತಿ, ಶಾಸಕ.

ನೂತನ ಡೇರಿ ಉದ್ಘಾಟನೆ



ಕೆರೆಯೂರು ಗ್ರಾಮದಲ್ಲಿ ನೂತನ ಡೇರಿಯನ್ನು ಶಾಸಕ ಜಿ.ಡಿ.ಹರೀಶ್‌ಗೌಡ ಉದ್ಘಾಟಿಸಿದರು.

ಹುಣಸೂರು, ಜ.20– ಪ್ರತಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳು ಪ್ರಾರಂಭವಾದರೇ ರೈತರಿಗೆ ಅನುಕೂಲವಾಗಲಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಕೆರೆಯೂರು ಗ್ರಾಮದಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಸ್ವಗ್ರಾಮದಿಂದ ಮತ್ತೊಂದು ಹಳ್ಳಿ ಡೇರಿಗೆ ಹಾಲು ಸರಬರಾಜು ಮಾಡಲು ರೈತರು ನಡೆದುಕೊಂಡು ಹೋಗುವು ದನ್ನು ತಪ್ಪಿಸಲು ಪ್ರತಿ ಹಳ್ಳಿಗಳಲ್ಲೂ ಡೇರಿ ತೆರೆಯಲಾಗುತ್ತಿದೆ ಎಂದರು.

ತಾಲೂಕಿನಲ್ಲಿ 8 ವರ್ಷಗಳ ಹಿಂದೆ 47 ಡೇರಿಗಳು ಇದ್ದವು. ಇದೀಗ 215 ಹಾಲು ಉತ್ಪಾದಕರ ಸಹಕಾರ ಸಂಘಗಳು ಸ್ಥಾಪನೆಯಾಗಿವೆ ಎಂದರು.

ಕೆರೆಯೂರು ಗ್ರಾಮದ ಮುಖ್ಯರಸ್ತೆ ಅಭಿವೃದ್ಧಿ ಕಾಮಗಾರಿಗೆ ಪ್ರಗತಿಪಥ ಯೋಜನೆಯಡಿ 35 ಲಕ್ಷ ರೂ. ಅನುದಾನ ನೀಡಲಾಗಿದೆ. ಜೊತೆಗೆ ಗ್ರಾಮದ ವೆಂಕಟೇಶ್ವರ ದೇವಸ್ಥಾನವನ್ನು ನನ್ನ ವೈಯಕ್ತಿಕ ಅನುದಾನದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದರು.


ಈ ವೇಳೆ ಮೈಮುಲ್ ನಿರ್ದೇಶಕ ಕುಮಾರ್, ಡೈರಿ ಅಧ್ಯಕ್ಷ ಕೆಂಪರಾಜು, ಉಪಾಧ್ಯಕ್ಷ ಬಸವಲಿಂಗಪ್ಪ, ನಿರ್ದೇಶಕರಾದ ಗಿರೀಶ್, ವಸಂತ್, ಕುಮಾರ್, ಬಸವರಾಜು, ಸತೀಶ್, ಮಹದೇವಶೆಟ್ಟಿ, ಪುಟ್ಟರಾಜು, ಶಿಲ್ಪ, ಶ್ವೇತ, ಗ್ರಾಪಂ ಸದಸ್ಯ ಮನೋಹರ, ಟಿಎಪಿಸಿಎಂಎಸ್ ಅಧ್ಯಕ್ಷ ಪ್ರೇಮ್ ಕುಮಾರ್, ಉಪಾಧ್ಯಕ್ಷ ಹೊನ್ನಪ್ಪರಾವ್ ಕಾಳಿಂಗೆ, ನಿರ್ದೇಶಕರಾದ ಬಸವಲಿಂಗಯ್ಯ, ಪಾಪು, ಬಾಬು, ಯಜಮಾನರಾದ ರವೀಶ್, ಚಲುವಯ್ಯ, ದೇವಯ್ಯ, ಶ್ವೇತ, ಜೆಡಿಎಸ್ ಮುಖಂಡರಾದ ಶ್ರೀಧರ್, ಸತೀಶ್, ಪಾಪಣ್ಣ, ಫಜಲುಲ್ಲಾ, ಸುರೇಂದ್ರ, ಶ್ರೀನಿವಾಸ್, ನಾಗರಾಜು, ಹರೀಶ್, ವೀರಶೈವ ಮುಖಂಡ ಪುಟ್ಟಲಿಂಗಪ್ಪ, ಡೈರಿ ವಿಸ್ತರಣಾಧಿಕಾರಿ ಗೌತಮ್, ವಸಂತ, ಸುಮಂತ್ ಇತರರಿದ್ದರು.

ರೈತರ ಆರ್ಥಿಕಾಭಿವೃದ್ಧಿಗೆ ಸಹಕಾರ ಸಂಘ ಸಹಕಾರಿ

ಹೆಡಿಯಾಲ ಪಿಎಸಿಎಸ್ ಅಧ್ಯಕ್ಷ ಎಂ.ದಿನೇಶ್

ಮಲ್ಕುಂಡಿ, ಜ.20– ರೈತರು, ಬಡವರ ಆರ್ಥಿಕಾಭಿವೃದ್ಧಿಗೆ ಸಹಕಾರ ಸಂಘ ಸಹಕಾರಿ ಎಂದು ಹೆಡಿಯಾಲ ಪಿಎಸಿಎಸ್ ಅಧ್ಯಕ್ಷ ಎಂ.ದಿನೇಶ್ ತಿಳಿಸಿದರು.

ಇಲ್ಲಿಗೆ ಸಮೀಪದ ಹೆಡಿಯಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ರೈತರ ಕೃಷಿಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಕಲ್ಪಿಸಬೇಕು. ಆ ಮೂಲಕ ರೈತರನ್ನು ಸ್ವ–ಉದ್ಯೋಗದ ಮೂಲಕ ಸ್ವಾವಲಂಬಿಗಳನ್ನಾಗಿ ಮಾಡುವುದೇ ಸಂಘದ ಧ್ಯೇಯವಾಗಿದೆ. ಹೆಡಿಯಾಲ ಸುತ್ತಮುತ್ತಲ ಗ್ರಾಮಗಳು ಕಾಡಂಚಿನ ಗ್ರಾಮಗಳಾಗಿದ್ದು, ರೈತರು ನೀರಿಕ್ಷಿತ ಆರ್ಥಿಕ ಅಭಿವೃದ್ಧಿ ಕಂಡಿಲ್ಲ. ಈ ಹಿನ್ನೆಲೆಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಸಹಕಾರ ಸಂಘವನ್ನು ಆರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಷೇರುದಾರರ ನೋಂದಣಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡಿಸಲಾಗುವುದು. ರೈತರು ಸಂಘದಲ್ಲಿ ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿಸಿದಾಗ ಮಾತ್ರ ಹೆಚ್ಚಿನ ಅಭಿವೃದ್ಧಿ ಸಾಧ್ಯ ಎಂದರು.



ಹೆಡಿಯಾಲ ಪಿಎಸಿಎಸ್‌ನಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಉಪಾಧ್ಯಕ್ಷ ನಾಗನಾಯಕ, ನಿರ್ದೇಶಕರಾದ ಎಂ.ಮಂಜುನಾಥ್, ಮಹದೇವೆಗೌಡ, ರಾಜೇಶ್, ನಾಗಪ್ಪ, ಅಶ್ರಫ್ ಅಲಿ, ಕೈಲಾಸಗೌಡ, ಶಂಭುಲಿಂಗಪ್ಪ, ರಂಗಸ್ವಾಮಿ, ನಾಗಲಾಂಬಿಕೆ, ಪುಟ್ಟಮ್ಮ, ಸಿಇಓ ಹೆಚ್.ಡಿ. ಶಿವಕುಮಾರ್, ಗುಮಾಸ್ತ ತಾಜುದ್ದೀನ್, ಅಟೆಂಡರ್ ಪಿ.ನಾಗಣ್ಣ ಸೇರಿದಂತೆ ಇತರರಿದ್ದರು.

7 ಮಂದಿ ಜೂಜುಕೋರರ ಬಂಧನ

ಹೆಚ್.ಡಿ.ಕೋಟೆ, ಜ.20– ಅಕ್ರಮವಾಗಿ ಜೂಜಾಡುತ್ತಿದ್ದ 7 ಮಂದಿ ಜೂಜುಕೋರರನ್ನು ಅಂತರಸಂತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಾಲೂಕಿನ ಮಚ್ಚರೆ ಗ್ರಾಮದ ಸಮೀಪದ ಜಮೀನೊಂದರಲ್ಲಿ ಜೂಜಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಅಂತರಸಂತೆ ಠಾಣೆ ಎಸ್‌ಐ ಚಂದ್ರಹಾಸ ಮತ್ತು ಸಿಬ್ಬಂದಿ ಅವರನ್ನು ವಶಕ್ಕೆ ಪಡೆದು, ಜೂಜಾಟಕ್ಕೆ ಪಣವಾಗಿಟ್ಟಿದ್ದ 48 ಸಾವಿರ ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಅಂತರಸಂತೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ನವೀನ್, ಸಣ್ಣಸ್ವಾಮಿ, ಗಂಗೇಶ್, ಪರಶಿವಮೂರ್ತಿ ಇತರರಿದ್ದರು.

ಕನ್ನಾಯಕನಹಳ್ಳಿ ಡೇರಿ ಚುನಾವಣೆ

10 ಸ್ಥಾನ ಗೆದ್ದು ಕುಮಾರ್ ರಾಮೇಗೌಡರ ಬಣ ಮೇಲುಗೈ

ತಿ.ನರಸೀಪುರ, ಜ.20– ತಾಲೂಕಿನ ಕನ್ನಾಯಕನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನಿರ್ದೇಶಕರ ಚುನಾವಣೆಯಲ್ಲಿ ಸುನೀಲ್ ಬೋಸ್ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡರ ಬಣ ಮೇಲುಗೈ ಸಾಧಿಸಿದೆ.

ಒಟ್ಟು 12 ಸದಸ್ಯರ ಬಲದ ಸಹಕಾರ ಸಂಘದಲ್ಲಿ ಎಸ್ಟಿ ಪಂಗಡದವರು ಇಲ್ಲದ ಕಾರಣ 2 ಸ್ಥಾನಗಳು ಖಾಲಿ ಉಳಿದಿದ್ದು, ನಂತರ ಉಳಿದ 10 ಸ್ಥಾನಗಳ ಪೈಕಿ ಒಂದು ನಿರ್ದೇಶಕರ ಸ್ಥಾನಕ್ಕೆ ರಾಮೇಗೌಡರ ಪತ್ನಿ ಪುಟ್ಟಸಿದ್ದಮ್ಮ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಉಳಿದ 9 ನಿರ್ದೇಶಕರ ಆಯ್ಕೆಗಾಗಿ ಸಹಕಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳನ್ನು ಗೆಲ್ಲುವ ಮೂಲಕ ಕುಮಾರ್ ರಾಮೇಗೌಡರ ಬಣ ಮೇಲುಗೈ ಸಾಧಿಸಿತು.

ಹಿಂದುಳಿದ ವರ್ಗ 'ಬಿ' ಕ್ಷೇತ್ರದಿಂದ ಪುಟ್ಟಸಿದ್ದಮ್ಮ ರಾಮೇಗೌಡ ಅವಿರೋಧವಾಗಿ ಆಯ್ಕೆಯಾದರೆ, ಸಾಮಾನ್ಯ ಕ್ಷೇತ್ರದಿಂದ ಯಶೋಧ ಕೆ.ಮಹದೇವಯ್ಯ, ರಾಜಮ್ಮ ನಿಂಗಯ್ಯ, ನಂಜಮ್ಮ ಮಹಾದೇವಯ್ಯ, ಭಾಗ್ಯಮ್ಮ ಬಸವರಾಜು, ರಾಜಮ್ಮ ಬಸವಲಿಂಗಯ್ಯ, ದೇವಮ್ಮ ಸಿದ್ದರಾಜು, ಲಕ್ಷ್ಮಮ್ಮ ಚನ್ನಂಕಯ್ಯ, ಪ.ಜಾತಿ ಕ್ಷೇತ್ರದಿಂದ ಪವಿತ್ರ ಬಸವರಾಜು ಸೇರಿದಂತೆ 10 ಮಂದಿ ಆಯ್ಕೆಯಾದರು.



ನೂತನ ನಿರ್ದೇಶಕರನ್ನು ಸನ್ಮಾನಿಸಲಾಯಿತು.

ಚುನಾವಣಾಧಿಕಾರಿ ಹೆಚ್.ಎನ್.ಸುಮ ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು. ಫಲಿತಾಂಶ ಪ್ರಕಟಗೊಳ್ಳುತ್ತಿದ್ದಂತೆ ಸಂಘದ ಆವರಣದಲ್ಲಿ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಸುನೀಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ ಮಾತನಾಡಿ, ಕನ್ನಾಯಕನಹಳ್ಳಿ ಡೇರಿ ಚುನಾವಣೆಯಲ್ಲಿ ನಮ್ಮ ತಂಡ ಅಭೂತಪೂರ್ವ ಗೆಲುವು ಸಾಧಿಸಿದ್ದು, ಎಲ್ಲಾ ನಿರ್ದೇಶಕರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಜಿದ್ದಾಜಿದ್ದಿನಿಂದ ಕೂಡಿದ್ದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳು ಗೆಲುವು ಸಾಧಿಸಿರುವುದು ವಿಶೇಷ. ನಮ್ಮ ತಂಡ ಸೋಲಿಸಲು ನಡೆಸಿದ ಹಲವು ಪಿತೂರಿಗಳನ್ನು ವಿಫಲಗೊಳಿಸಿ ನಮ್ಮ ತಂಡದ ಸದಸ್ಯರ ಪರ ಮತ ಚಲಾಯಿಸಿದ ಗ್ರಾಮದ ಹಾಲು ಉತ್ಪಾದಕರು ಕಳೆದ 20 ವರ್ಷಗಳಿಂದ ತಾವು ಅನುಭವಿಸಿದ ನೋವು ಹಾಗೂ ದುರಾಡಳಿತದಿಂದ ಬೇಸತ್ತು ಒಂದು ಉತ್ತಮ ಆಡಳಿತ ಮಂಡಳಿ ರಚಿಸಲು ಸರಿಯಾದ ತೀರ್ಪು ನೀಡಿದ್ದಾರೆ. ಹೀಗಾಗಿ ರೈತರಿಗೆ ಉಪಯೋಗವಾಗುವ ಸರ್ಕಾರದ ಸವಲತ್ತುಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸಂಸದ ಸುನೀಲ್ ಬೋಸ್ ನೆರವಿನೊಂದಿಗೆ ಹೆಚ್ಚಿನ ಪ್ರಮಾಣದಲ್ಲಿ ಮುಂದಿನ ದಿನಗಳಲ್ಲಿ ಒದಗಿಸಲಾಗುವುದು ಎಂದರು.

ಈ ವೇಳೆ ಮುಖಂಡರಾದ ನಾಗೇಂದ್ರ, ಪಟೇಲ್ ಶಂಕರೇಗೌಡ, ಎಸ್. ಮಾದಯ್ಯ, ರಂಗೇಗೌಡ, ಪುಟ್ಟಪ್ಪ, ಮಹಾದೇವಯ್ಯ, ರೇವಣ್ಣ ಪುಟ್ಟಸ್ವಾಮಿ, ಅಂದಾನಿ, ಸೋಮಣ್ಣ, ಮಂಜುನಾಥ್, ಬಸಯ್ಯ, ಕೃಷ್ಣಮೂರ್ತಿ, ಚೆಲುವಯ್ಯ, ರಾಚಯ್ಯ, ಯುವ ಮುಖಂಡರಾದ ಮಧು, ನಿಂಗರಾಜು, ಪಟೇಲ್ ನವೀನ್, ಕುಮಾರ್, ವಿಜಯ್, ಚಂದ್ರಶೇಖರ್, ಸಿದ್ದು, ಮನೋಜ್, ನಂದೀಶ್, ಪುಟ್ಟಸ್ವಾಮಿ, ಗಿರೀಶ್, ದಿಲೀಪ ಇನ್ನಿತರಿದ್ದರು.

ಕಳಪೆ ರಸ್ತೆ ಕಾಮಗಾರಿ, ಜತೆಗೆ ಪೂರ್ಣವಾಗದೇ ಬಿಲ್ ಪಾವತಿ ಆರೋಪ

ನಾಗನಹಳ್ಳಿ ಗ್ರಾಮಸ್ಥರಿಂದ ಅಧಿಕಾರಿಗಳ ತರಾಟೆ

ಹೆಚ್.ಡಿ.ಕೋಟೆ, ಜ.20– ತಾಲೂಕಿನ ನಾಗನಹಳ್ಳಿಯಲ್ಲಿ ಕಳಪೆ ರಸ್ತೆ ಕಾಮಗಾರಿ ನಡೆಸಲಾಗಿದೆ. ಅಲ್ಲದೇ ಕಾಮಗಾರಿ ಪೂರ್ಣವಾಗದೇ ಬಿಲ್ ಪಡೆದಿದ್ದಾರೆ ಎಂದು ಆರೋಪಿಸಿ ಕೆಆರ್‌ಐಡಿಎಲ್ ಅಧಿಕಾರಿಗಳನ್ನು ಗ್ರಾಮಸ್ಥರು ತರಾಟೆಗೆ ತೆಗೆದುಕೊಂಡರು.

ಶಾಸಕ ಅನಿಲ್ ಚಿಕ್ಕಮಾದು ಅವರು ಪಟ್ಟಣದ ಮುಸ್ಲಿಂ ಬ್ಲಾಕ್‌ಗೆ 1.85 ಕೋಟಿ ರೂ., ತಾಲೂಕಿನ ನಾಗನಹಳ್ಳಿಗೆ 1.65 ಕೋಟಿ ರೂ., ಚಿನ್ನಪ್ಪನಪಾಳ್ಯ ಗ್ರಾಮಕ್ಕೆ 1.50 ಕೋಟಿ ರೂ. ಸೇರಿದಂತೆ 5 ಕೋಟಿ ಅನುದಾನವನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಮೂಲಕ ಬಿಡುಗಡೆಗೊಳಿಸಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಚಾಲನೆ ನೀಡಿದ್ದರು. ಬೆಂಗಳೂರಿನ ಕೆಆರ್‌ಐಡಿಎಲ್ ಸಂಸ್ಥೆ ಕಾಮಗಾರಿ ಗುತ್ತಿಗೆ ಪಡೆದಿದ್ದರು. ಆದರೆ ಕೆಆರ್‌ಐಡಿಎಲ್ ಸಂಸ್ಥೆ ನಡೆಸಿದ ಕಾಮಗಾರಿ ಕಳಪೆಯಾಗಿದ್ದು, ನಡೆಯದ ಕಾಮಗಾರಿಗೆ 3.75 ಕೋಟಿ ರೂ. ಬಿಲ್ ಅನ್ನು ಸಂಸ್ಥೆ ಹಾಗೂ ಗುತ್ತಿಗೆದಾರು ಪಡೆದುಕೊಂಡಿದ್ದಾರೆ ಎಂಬ ದೂರುಗಳು ಗ್ರಾಮಸ್ಥರಿಂದ ಬಂದ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ಜಿಲ್ಲಾಧಿಕಾರಿಗಳಿಗೆ ಕಾಮಗಾರಿ ಪರಿಶೀಲಿಸುವಂತೆ ಸೂಚಿಸಿದರು. ಅದರಂತೆ ಡಿಸಿ ಆದೇಶದ ಮೇರೆಗೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಅಧಿಕಾರಿ ಶಿಲ್ಪ ಹಾಗೂ ಕೆಆರ್‌ಐಡಿಎಲ್ ಇಇ ಚಂದ್ರಶೇಖರ, ಎಇಇ ನಾಗಯ್ಯ, ನಾಗನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ವೇಳೆ ಗ್ರಾಮಸ್ಥರು ಕಾಮಗಾರಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿ ನೀಡುವಂತೆ ಅಧಿಕಾರಿಗಳಿಗೆ ಒತ್ತಾಯಿಸಿದರು.



ಅಂದಾಜು ಪಟ್ಟಿಯನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಶಿಲ್ಪ ಪರಿಶೀಲಿಸಿದರು.

ಗ್ರಾಮಸ್ಥರ ಒತ್ತಾಯಕ್ಕೆ ತಬ್ಬಿಬಾದ ಕೆಆರ್‌ಐಡಿಎಲ್ ಅಧಿಕಾರಿಗಳು ನೆಪವೊಡ್ಡಿ ಕಾಲಹರಣ ಮಾಡಿ, ಅಂದಾಜು ಪಟ್ಟಿ ತರಿಸಿದರು.

ಈ ವೇಳೆ ಅಂದಾಜು ಪಟ್ಟಿಯನ್ನು ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಶಿಲ್ಪ ಅವರಿಗೆ ಗ್ರಾಮಸ್ಥರು ತೋರಿಸಿ ಅಂದಾಜು ಪಟ್ಟಿಯಂತೆ ಕಾಮಗಾರಿ ನಡೆದಿಲ್ಲ ಎಂದರು.

ಈ ವೇಳೆ ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಶಿಲ್ಪ ಅವರು ಕೆಆರ್‌ಐಡಿಎಲ್ ಅಧಿಕಾರಿ ಚಂದ್ರಶೇಖರ್ ಅವರನ್ನು ತರಾಟೆ ತೆಗೆದುಕೊಂಡು ಕಾಮಗಾರಿ ಗುಣಮಟ್ಟದಿಂದ ನಡೆಸಿಲ್ಲ. ಬದಲಿಗೆ ಕಳಪೆಯಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಬೇರೊಂದು ಇಲಾಖೆಯಿಂದ ಪರಿಶೀಲಿಸಿ, ಗುಣಮಟ್ಟದ ಕಾಮಗಾರಿ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಗ್ರಾಮಸ್ಥರು ಕಾಂಕ್ರೀಟ್ ರಸ್ತೆಯನ್ನು ಅಲ್ಪಸಂಖ್ಯಾತ ಕಲ್ಯಾಣಾಧಿಕಾರಿ ಶಿಲ್ಪ ಹಾಗೂ ಕೆಆರ್‌ಐಡಿಎಲ್ ಅಧಿಕಾರಿಗಳ ಎದುರೇ ಅಗೆದು ಕಾಮಗಾರಿ ಕಳಪೆಯಾಗಿರುವುದನ್ನು ತೋರಿಸಿದರು.

ಈ ವೇಳೆ ಜಿಯಾರ ಸೋಮೇಶ, ನಾಗನಹಳ್ಳಿ ಪ್ರದೀಪ, ಮೊತ್ತ ಶಿವಮಲ್ಲು, ಆನಂದ್ ಕುಮಾರ್, ಲಕ್ಷ್ಮಣ್, ಹೃದಯರಾಜ್, ರಾಜ, ರಾಜೇಂದ್ರ, ಪ್ರಸಾದ್, ಅಂತೋಣಿ ರಾಜ್, ಬಾಬು, ಪೌಲ, ಪ್ರವೀಣ್ ಕುಮಾರ್, ಡ್ಯಾನಿ, ರಾಮಶೆಟ್ಟಿ, ರಾಕೇಶ್, ಪ್ರಶಾಂತ್ ಕುಮಾರ್, ಆನಂದಕುಮಾರ್, ಚಿನ್ನಪ್ಪ, ರಾಯಪ್ಪ, ಕುಮಾರ್, ರಾಕೇಶ್, ಶಾಂತ ಕುಮಾರ್, ಬಾಬು, ಸ್ವಾಮಿ ಇದ್ದರು.

ಗಂಗಾ ಕಲ್ಯಾಣ ಯೋಜನೆಯಡಿ ಬೋರ್‌ವೆಲ್ ಪರಿಕರ ವಿತರಣೆ

ನಂಜನಗೂಡು, ಜ.20– ರೈತರ ಕೃಷಿ ಚಟುವಟಿಕೆಗಳಿಗೆ ನೀರಿನ ಸೌಲಭ್ಯ ಕಲ್ಪಿಸಲು ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ 44,57,000 ವೆಚ್ಚದಲ್ಲಿ 32 ಫಲಾನುಭವಿಗಳಿಗೆ ಬೋರ್‌ವೆಲ್ ಪರಿಕರಗಳನ್ನು ವಿತರಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಶ್ರೀವಾಲ್ಮೀಕಿ ಸಮುದಾಯ ಭವನದಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಆಯ್ಕೆಯಾದ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿ ಮಾತನಾಡಿದ ಅವರು, ರೈತರಿಗೆ ನೀರಿನ ಸೌಲಭ್ಯ ಕಲ್ಪಿಸಿ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಲು ರಾಜ್ಯ ಸರ್ಕಾರ ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ 44.57 ಲಕ್ಷ ರೂ. ವೆಚ್ಚದಲ್ಲಿ ಬೋರ್‌ವೆಲ್ ಪರಿಕರಗಳನ್ನು ವಿತರಿಸಲಾಗುತ್ತಿದೆ. ರೈತರು ಇದನ್ನು ಸದುಪಯೋಗಪಡಿಸಿಕೊಂಡು ಕೃಷಿ ಚಟುವಟಿಕೆಯಲ್ಲಿ ತೊಡಗಿ ಆರ್ಥಿಕವಾಗಿ ಸದೃಢಗೊಳ್ಳಬೇಕು. ನಿಗಮದಿಂದ ವಿತರಿಸಿರುವ ಪರಿಕರಗಳ ಗುಣಮಟ್ಟದಲ್ಲಿ ತೊಂದರೆಯಾದಲ್ಲಿ ನಮ್ಮ ಗಮನಕ್ಕೆ ತರಬೇಕು. ಅಲ್ಲದೇ ಸವಲತ್ತುಗಳು ದುರುಪಯೋಗವಾಗದಂತೆ ರೈತರು ಎಚ್ಚರಿಕೆ ವಹಿಸಬೇಕು ಎಂದರು.



ಫಲಾನುಭವಿಗಳಿಗೆ ಪರಿಕರಗಳನ್ನು ವಿತರಿಸಲಾಯಿತು.

ವಾಲ್ಮೀಕಿ ನಿಗಮದ ಜಿಲ್ಲಾ ವ್ಯವಸ್ಥಾಪಕ ನಿರ್ದೇಶಕ ಶಿವಕುಮಾರ್ ಮಾತನಾಡಿ, ನಿಗಮದಿಂದ ಪ್ರತಿ ರೈತರಿಗೆ ತಲಾ 3,57,000 ವೆಚ್ಚದಲ್ಲಿ ಸವಲತ್ತುಗಳನ್ನು ವಿತರಿಸಲಾಗುತ್ತದೆ. 32 ಫಲಾನುಭವಿಗಳಿಗೆ ಬೋರ್‌ವೆಲ್ ಪರಿಕರಗಳನ್ನು ವಿತರಿಸಲಾಗಿದೆ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ನಾಯಕರ ಸಂಘದ ಅಧ್ಯಕ್ಷ ನಾಗರಾಜ್, ರಾಜ್ಯ ST ಘಟಕದ ಪ್ರಧಾನ ಕಾರ್ಯದರ್ಶಿ ದೊರೆಸ್ವಾಮಿ ನಾಯಕ, ST ಘಟಕದ ಅಧ್ಯಕ್ಷ ಶಿವಕುಮಾರ್, ಕಳಲೆ ಗ್ರಾಪಂ ಅಧ್ಯಕ್ಷ ಮಹೇಶ್, ದೇವಾಲಯ ಅಭಿವೃದ್ಧಿ ಸಮಿತಿ ಸದಸ್ಯ ಗೋವಿಂದರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜೈರಾಮ್, ಮುಖಂಡರಾದ ಹೆಡತಲೆ ಆನಂದ್, ರಾಜು ಮತ್ತು ನಿಗಮದ ಅಧಿಕಾರಿ ನವ್ಯಶ್ರೀ ಸೇರಿದಂತೆ ಫಲಾನುಭವಿಗಳು ಉಪಸ್ಥಿತರಿದ್ದರು.

ಬಾಬೂಜಿ ಪ್ರತಿಮೆ ಉದ್ಘಾಟನೆ



ತಿ.ನರಸೀಪುರ ತಾಲೂಕಿನ ಕುಪ್ಯಾದಲ್ಲಿ ಬಾಬು ಜಗಜೀವನ್ ರಾಮ್ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಎಂಎಲ್‌ಸಿ ಡಾ.ಯತೀಂದ್ರ, ಕುಪ್ಯಾ ಗ್ರಾಪಂ ಮಾಜಿ ಅಧ್ಯಕ್ಷ ರಾಘವೇಂದ್ರ ಇದ್ದರು.

ಸ್ವಾಮಿರಾವ್ ಸಾಳಂಕಿ ನಿಧನ



ಕೆ.ಆರ್.ನಗರ, ಜ.20– ಪಟ್ಟಣದ ಸುಭಾಷ್ ನಗರ ನಿವಾಸಿ ಸ್ವಾಮಿರಾವ್ ಸಾಳಂಕಿ(81) ಮಂಗಳವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಹುಣಸೂರು ತಾಲೂಕಿನ ಚಿಕ್ಕಗಾಡಿಗನಹಳ್ಳಿಯಲ್ಲಿ ರುವ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಸಿ.ಲೋಕೇಶ್



ಕೆ.ಆರ್.ನಗರ, ಜ.20– ಪಟ್ಟಣದ ಲಯನ್ಸ್ ವಿದ್ಯಾಸಂಸ್ಥೆ ಕಾರ್ಯದರ್ಶಿ ಕೆ.ಸಿ.ಲೋಕೇಶ್ (82) ಮಂಗಳವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಬುಧವಾರ ಮಧ್ಯಾಹ್ನ 2 ಗಂಟೆಗೆ ಪಟ್ಟಣದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಕ್ಕಳ ಪ್ರತಿಭೆ ಗುರುತಿಸುವ ಜವಾಬ್ದಾರಿ ಶಿಕ್ಷಕರದು

ಶಾಲಾ ವಾರ್ಷಿಕೋತ್ಸವದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ

ತಿ.ನರಸೀಪುರ, ಜ.20– ಗ್ರಾಮೀಣ ಭಾಗದಲ್ಲಿ ಉತ್ತಮ ಶಿಕ್ಷಣ ಸಿಗುವುದು ಕಷ್ಟಕರ. ಆದರೆ ಎನ್‌ಕೆಎಫ್ ಶಾಲೆ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪೂರಕವಾದ ವಾತಾವರಣ ಸೃಷ್ಟಿಸಿ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ಆಲಗೂಡು ಸಮೀಪದ ಎನ್‌ಕೆಎಫ್ ಪಬ್ಲಿಕ್ ಶಾಲಾವರಣದಲ್ಲಿ ಆಯೋಜಿಸಿದ್ದ 7ನೇ ವರ್ಷದ ಶಾಲಾ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶ ವ್ಯಾಪ್ತಿಯಲ್ಲಿರುವ ಶಾಲೆಯು ಉತ್ತಮ ಶಿಕ್ಷಣ ನೀಡುತ್ತಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಸರ್ವರ ಮಾರ್ಗದರ್ಶನದಲ್ಲಿ ಯಶಸ್ಸು ಸಾಧಿಸಬೇಕು. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರು ಹಾಗೂ ಪಾಲಕರ ಪಾತ್ರ ಮಹತ್ವದ್ದಾಗಿದೆ. ಪ್ರಸ್ತುತ ಪೋಷಕರು ಮಕ್ಕಳ ಫಲಿತಾಂಶ ಬಯಸುತ್ತಾರೆ. ಆ ಮನೋಭಾವ ಬದಲಾಗಬೇಕು. ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯನ್ನು ಗುರ್ತಿಸುವ ಜವಾಬ್ದಾರಿ ಶಿಕ್ಷಕರ ಜೊತೆಗೆ ಪೋಷಕರದ್ದಾಗಿರುತ್ತದೆ ಎಂದರು.



ಕಾರ್ಯಕ್ರಮವನ್ನು ವಾಟಾಳು ಮಠದ ಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ ಉದ್ಘಾಟಿಸಿದರು.

> ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಸಹ ಅತೀ ಅಗತ್ಯ. ಹಾಗಾಗಿ ಶಾಲಾ ವಾರ್ಷಿಕೋತ್ಸವ ಮಕ್ಕಳ ಪ್ರತಿಭೆ ಅನಾವರಣಗೊಳಿಸಲು ಅನುವು ಮಾಡಿಕೊಡುತ್ತದೆ. ಪೋಷಕರು ಮತ್ತು ಶಿಕ್ಷಕರು ಬಾಲ್ಯದಿಂದಲೇ ಮಕ್ಕಳ ಪ್ರತಿಭೆ ಗುರ್ತಿಸಿ ಅದಕ್ಕೆ ತಕ್ಕಂತೆ ಪ್ರೋತ್ಸಾಹ ನೀಡಿದರೆ ದೇಶಕ್ಕೆ ಆಸ್ತಿಯಾಗಲಿದ್ದಾರೆ. ಆರೋಗ್ಯವಂತ ಸಮಾಜ ಕಟ್ಟುವಲ್ಲಿ ಮನೆ ಮತ್ತು ಶಾಲೆಗಳು ಪ್ರಧಾನ ಪಾತ್ರವಹಿಸಲಿವೆ. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬುದನ್ನು ಮರೆಯಬಾರದು.
>
> – ಸಿದ್ಧಲಿಂಗಶಿವಾಚಾರ್ಯ ಸ್ವಾಮೀಜಿ, ವಾಟಾಳು ಶ್ರೀಮಠದ ಪೀಠಾಧ್ಯಕ್ಷ.

ಪೋಷಕರಾದ ನಾವು ಮಕ್ಕಳ ಸಾಮರ್ಥ್ಯಕ್ಕೆ ತಕ್ಕಂತೆ ಅವರ ಬೇಕು–ಬೇಡಗಳನ್ನು ಅರಿತು ಉತ್ತಮ ಶಿಕ್ಷಣದ ಜೊತೆ ಸಂಸ್ಕಾರ ನೀಡಿದರೆ ಉತ್ತಮ ಸಮಾಜ ನಿರ್ಮಾಣ ಮಾಡಬಹುದಾಗಿದೆ. ಇಂದಿನ ಪೋಷಕರ ಮನೋಭಾವ ಹೇಗಿದೆ ಎಂದರೆ ಪಠ್ಯ, ಪುಸ್ತಕ, ಪರೀಕ್ಷೆ ಫಲಿತಾಂಶ, ಪ್ರಮಾಣಪತ್ರ ಇದಕ್ಕಷ್ಟೇ ಸೀಮಿತವಾಗಿದೆ. ಹಾಗಾಗಿ ಒಂದಷ್ಟು ಬದಲಾವಣೆಗಳನ್ನು ಪೋಷಕರು ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಲೆ ಮುಖ್ಯಸ್ಥ ಎನ್.ಕೆ.ಫರೀಧ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯಗಳಷ್ಟೇ ಅಲ್ಲದೆ ಕಲೆ, ಸಂಸ್ಕೃತಿ, ಶಿಸ್ತು ಮತ್ತು ಸಾಮಾಜಿಕ ಮೌಲ್ಯಗಳನ್ನು ಮೈಗೂಡಿಸಿಕೊಂಡು ಪ್ರಗತಿ ಸಾಧಿಸುತ್ತಿದ್ದಾರೆ. ಇದರ ಹಿಂದೆ ಎಲ್ಲಾ ಶಿಕ್ಷಕರ ಶ್ರಮ ಕಾಣಬಹುದಾಗಿದೆ. ಹಾಗೆಯೇ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳಲ್ಲಿ ನಮ್ಮ ಶಾಲಾ ಪ್ರತಿಭೆಗಳು ಉನ್ನತ ಸ್ಥಾನ ಗಳಿಸಿದ್ದಾರೆ. ಒಟ್ಟಾರೆ ನಮ್ಮ ಶಾಲೆ ವಿವಿಧತೆಯಲ್ಲಿ ಏಕತೆ ಮೆರೆಯುತ್ತಿರುವ ವಿಶಿಷ್ಟ ಶಾಲೆಯಾಗಿದ್ದು, ಗ್ರಾಮೀಣ ಮಕ್ಕಳು ಪಟ್ಟಣದ ವಿದ್ಯಾರ್ಥಿಗಳಿಗಿಂತ ನಾವೇನು ಕಡಿಮೆ ಇಲ್ಲ ಎಂಬಂತೆ ಅವರ ಪ್ರತಿಭೆ ನಿರೂಪಿಸಿದ್ದಾರೆ ಎಂದರು.

ನಂತರ ನಡೆದ ವರ್ಣರಂಜಿತ ಕಾರ್ಯಕ್ರಮದಲ್ಲಿ ಮಕ್ಕಳು ಹಲವು ನೃತ್ಯಗಳ ಮೂಲಕ ಮನರಂಜನೆ ನೀಡಿದರು. ಉತ್ತಮ ಪ್ರದರ್ಶನ ನೀಡಿದ ತಂಡಕ್ಕೆ ಹಾಗೂ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಅಲ್ಪ ಸಂಖ್ಯಾತ ವಿಭಾಗದ ಅಧ್ಯಕ್ಷ ಅಬ್ದುಲ್ ಅಜೀಜ್ (ಅಜ್ಜು), ಪುರಸಭೆ ಮಾಜಿ ಸದಸ್ಯ ಅಹಮದ್ ಸೈಯದ್, ಎಲ್. ಮಂಜುನಾಥ್, ಗುತ್ತಿಗೆದಾರ ನೂರುಲ್ಲಾ ಶರೀಫ್, ಮೊಹಮ್ಮದ್ ಆಯುಬ್, ಇನಾಯತ್, ಸಂಸ್ಥೆ ಕಾರ್ಯದರ್ಶಿ ಜಹರಾ ಸುಲ್ತಾನ, ಮುಖ್ಯ ಶಿಕ್ಷಕಿ ಹೇಮಾ, ಶಿಕ್ಷಕಿಯರಾದ ಗೀತಾ, ನೂರ್ ಹಾಜಿರಾ, ರೇಖಾ, ಶಿಲ್ಪಶ್ರೀ, ರೇಖಾ, ರಶ್ಮಿ, ಶಿಲ್ಪಾ, ಅನಿತಾ, ಶೈಲಾ, ಪಲ್ಲವಿ, ಅರ್ಜುನ್ ಭಾನು, ರಕ್ಷಿತ, ನಾಗವೇಣಿ, ಪ್ರಿಯಾಂಕ, ಪದ್ಮ ಪ್ರಿಯ, ರಝಿಯಾ ಹಾಜರಿದ್ದರು.

ಮಾನವ ಅಭಿವೃದ್ಧಿ ವರದಿ ಫೆ.10ರೊಳಗೆ ಸಲ್ಲಿಸಲು ಜಿಪಂ ಸಿಇಒ ಸೂಚನೆ

ಮೈಸೂರು, ಜ.20(ಎಂಟಿವೈ)– ಮುಂಬರುವ ದಿನಗಳಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಪೂರಕವಾಗಿರುವ ಮಾನವ ಅಭಿವೃದ್ಧಿ ವರದಿಯನ್ನು ಸಂಬಂಧಿಸಿದ ಇಲಾಖೆಗಳು ನಿಖರವಾಗಿ ನೀಡಬೇಕು ಎಂದು ಮೈಸೂರು ಜಿಲ್ಲಾ ಪಂಚಾಯಿತಿ ಸಿಇಓ ಎಸ್. ಯುಕೇಶ್ ಕುಮಾರ್ ಸೂಚಿಸಿದ್ದಾರೆ.



ಮೈಸೂರು ಜಿಪಂ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಾನವ ಅಭಿವೃದ್ಧಿ ವರದಿ 2025 ಮತ್ತು ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ 2031'ರ ತರಬೇತಿ ಕಾರ್ಯಾಗಾರದಲ್ಲಿ ಜಿ.ಪಂ ಸಿಇಓ ಎಸ್.ಯುಕೇಶ್ ಕುಮಾರ್ ಮಾತನಾಡಿದರು.

ಮೈಸೂರು ಜಿ.ಪಂ. ಸಭಾಂಗಣದಲ್ಲಿ ನಡೆದ 'ಜಿಲ್ಲಾ ಮಾನವ ಅಭಿವೃದ್ಧಿ ವರದಿ 2025' ಮತ್ತು 'ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ 2031'ರ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲಾ ಮಾನವ ಅಭಿವೃದ್ಧಿ ವರದಿಯನ್ನು ನಿಖರವಾಗಿ ತಯಾರಿಸಬೇಕು. ವರದಿಯಲ್ಲಿನ ಅಂಕಿ ಅಂಶದ ಆಧಾರದ ಮೇಲೆ ಮುಂದಿನ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತದೆ. ಈ ಹಿನ್ನೆಲೆಯಲ್ಲಿ ಫೆ.10ರೊಳಗೆ ವರದಿ ಸಿದ್ಧಪಡಿಸಿ, ಸಲ್ಲಿಸಬೇಕು ಎಂದು ಸಲಹೆ ನೀಡಿದರು.

ಅಭಿವೃದ್ಧಿ ಕಾರ್ಯಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಿಗೆ ಬಿಡುಗಡೆಯಾಗಿರುವ ಅನುದಾನ ವ್ಯರ್ಥವಾಗದಂತೆ ನೋಡಿಕೊಳ್ಳಬೇಕು. ಮಾರ್ಚ್ ವೇಳೆಗೆ ಶೇ.100ರಷ್ಟು ಅನುದಾನ ಸದ್ಬಳಕೆ ಮಾಡಿಕೊಳ್ಳಬೇಕು. ಇದಕ್ಕಾಗಿ ಎಲ್ಲಾ ಇಲಾಖೆಗಳು ಅಗತ್ಯ ಯೋಜನೆ ರೂಪಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಎಸ್ಐಆರ್‌ಡಿ ಸಂಸ್ಥೆಯ ಸಮಾಲೋಚಕರಾದ ಗಣೇಶ್ ಪ್ರಸಾದ್ ಮಾತನಾಡಿ, 'ಜಿಲ್ಲಾ ಮಾನವ ಅಭಿವೃದ್ಧಿ ವರದಿ 2025' ಹಾಗೂ 'ಸಮಗ್ರ ಸುಸ್ಥಿರ ಜಿಲ್ಲಾ ಅಭಿವೃದ್ಧಿ ದೂರದೃಷ್ಟಿ ಯೋಜನೆ 2031'ರ ಕುರಿತು ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು, ಇದು ದೇಶದ ಪ್ರಗತಿಯನ್ನು ತಿಳಿಸುವ ಕನ್ನಡಿಯಾಗಿದೆ. 16ನೇ ಹಣಕಾಸು ಆಯೋಗದ ಅನುದಾನ ಏ.1 ರಿಂದ ಜಾರಿಗೆ ಬರುತ್ತದೆ. ಇದು 2026 ರಿಂದ 2031ರವರೆಗೆ ಇರುತ್ತದೆ. ಮಾನವ ಅಭಿವೃದ್ಧಿ ವರದಿಯ ಆಧಾರದ ಮೇಲೆ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ ಅನುದಾನ ಹಂಚಿಕೆ ಆಗುತ್ತದೆ. ಅಲ್ಲದೆ 2026ರಲ್ಲಿ ಗ್ರಾಮ, ತಾಲೂಕು ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳು ನಡೆಯುತ್ತವೆ ಇದರ ಅವಧಿಯು 2026ರಿಂದ 2031 ರವರೆಗೆ ಇರುತ್ತದೆ ಎಂದು ವಿವರಿಸಿದರು.

ವರದಿ ನಿಖರವಾಗಿ ಬೇಕು: ಜಿಲ್ಲೆಯಲ್ಲಿ ತಾಯಿ ಮತ್ತು ಶಿಶು ಮರಣ, ಶಾಲೆ ಬಿಟ್ಟ ಮಕ್ಕಳ ಸಂಖ್ಯೆ, ಇವುಗಳನ್ನು ನಿಖರವಾಗಿ ದಾಖಲಿಸಬೇಕು. ಗ್ರಾ.ಪಂ ಮಟ್ಟದಲ್ಲಿ 17 ಮಾನದಂಡಗಳನ್ನು ಗುರುತಿಸಿ, ಅದರ ಆಧಾರದ ಮೇಲೆ ವರದಿ ತಯಾರಿಸಬೇಕು. ಜೀವನದ ಗುಣಮಟ್ಟ, ಶಿಕ್ಷಣ ಮತ್ತು ಆರೋಗ್ಯವನ್ನು ಮೂಲ ಮಾನದಂಡವಾಗಿ ಪರಿಗಣಿಸಲಾಗುತ್ತದೆ. ಕರ್ನಾಟಕದಲ್ಲಿ ಶೇ.26ರಷ್ಟು ಬಡತನ ರೇಖೆಗಿಂತ ಕಡಿಮೆ ಇರುವ ಜನರಿದ್ದಾರೆ. ಭಾರತದಲ್ಲಿ 80% ಸಾಕ್ಷರತೆ ಇದೆ. ಆಹಾರ ಉತ್ಪಾದನೆಯಲ್ಲಿ 2ನೇ ಸ್ಥಾನದಲ್ಲಿ ಇದ್ದೇವೆ. ಭಾರತದಲ್ಲಿ ಪ್ರತಿ 10 ವರ್ಷಕ್ಕೊಮ್ಮೆ ಜನಗಣತಿ ನಡೆಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಯಾವುದೇ ಮಾನವ ಅಭಿವೃದ್ಧಿ ವರದಿ ನಿಖರವಾಗಿರಬೇಕು. ಇದರಿಂದ ವಿವಿಧ ಅಭಿವೃದ್ಧಿ ಕಾರ್ಯಕ್ಕೆ ಯೋಜನೆ ರೂಪಿಸಲಾಗುತ್ತದೆ ಎಂದರು.

ಆರೋಗ್ಯ ಸೇವೆ ತೃಪ್ತಿದಾಯಕ: ರೈಲ್ವೆ ಸಾರಿಗೆಯಲ್ಲಿ ಪ್ರಪಂಚದಲ್ಲಿಯೇ ಮೊದಲ ಸ್ಥಾನದಲ್ಲಿ ಇದ್ದೇವೆ. ಆರೋಗ್ಯ ಸೇವೆ ಉತ್ತಮವಾಗಿದೆ. ನಮ್ಮ ದೇಶ ಸಾಕಷ್ಟು ಪ್ರಗತಿ ಸಾಧಿಸಿದ್ದರೂ ಹಲವು ಕೊರತೆಗಳನ್ನು ಸಹ ಎದುರಿಸುತ್ತಿದೆ. ಮಾನವ ಅಭಿವೃದ್ಧಿ ಸೂಚ್ಯಂಕ 0 – 1ರವರೆಗೆ ಮಾಡಲಾಗುತ್ತದೆ. ರಾಜ್ಯಮಟ್ಟದ ಮಾನವ ಅಭಿವೃದ್ಧಿ ವರದಿ 1999ರಲ್ಲಿ ಮೊದಲ ಬಾರಿಗೆ ಮಧ್ಯಪ್ರದೇಶದಲ್ಲಿ ಸಿದ್ಧಪಡಿಸಲಾಯಿತು. ನಂತರ 2005ರಲ್ಲಿ ಕರ್ನಾಟಕ ಮಾನವ ಅಭಿವೃದ್ಧಿ ವರದಿ ಸಿದ್ದಪಡಿಸಲಾಯಿತು. ಈ ಹಿಂದೆ 2015 ರಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಸಿದ್ಧಪಡಿಸಲಾಗಿತ್ತು. ಈಗ 2025 ರಲ್ಲಿ ಸಿದ್ಧಪಡಿಸಲಾಗುತ್ತಿದೆ. ಭಾರತದ ಮಾನವ ಅಭಿವೃದ್ಧಿ ಸೂಚ್ಯಂಕ 0.629 ಇದೆ. ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಂಕ 0.644 ಇದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿ.ಪಂ. ಮುಖ್ಯ ಯೋಜನಾಧಿಕಾರಿ ಕೆ.ಪಿ.ಪ್ರಭುಸ್ವಾಮಿ, ಪ್ರಾಧ್ಯಾಪಕರಾದ ಡಾ. ನವಿತಾ ತಿಮ್ಮಯ್ಯ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತಲೈವಾರ್ ತಂಬಿ ತಲೈಮೈಯಿಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮನ ಶಂಕರ ವರಪ್ರಸಾದಗಾರು (ತೆ)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತೇರಾ ಇಸ್ಕ್ ಮೈನ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಜಾ ಸಾಬ್ (ಕ)	2 ಪ್ರದರ್ಶನಗಳು
ರಾಜಕಮಲ್	
ವಾ ವಾಥಿಯಾರ್ (ತ)	4 ಪ್ರದರ್ಶನಗಳು
ಸಂಗಂ	
ಮಾರ್ಕ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜಾ ಸಾಬ್ (ಹಿಂ)	4 ಪ್ರದರ್ಶನಗಳು

ಮೈಸೂರಿನ ಹೈದರ್ ಅಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಪ್ರಗತಿ

ಫೋರಂ ಮಹಲ್ ಮಾರ್ಗ, ಕೆಪಿಎ ರಸ್ತೆ ಜಂಕ್ಷನ್ ಎತ್ತರ ತಗ್ಗಿಸುವ ಕೆಲಸ ಆರಂಭ



ಮೈಸೂರಿನ ಹೈದರ್ ಅಲಿ ರಸ್ತೆಯ ಫೋರಂ ಮಹಲ್ ಹಾಗೂ ಕೆಪಿಎ ರಸ್ತೆ ಜಂಕ್ಷನ್ ಎತ್ತರ ತಗ್ಗಿಸುವ ಕಾಮಗಾರಿ ಮಂಗಳವಾರ ಆರಂಭಗೊಂಡಿದೆ.

ಮೈಸೂರು, ಜ.20(ಬಿಎಲ್‌ಯು)– ಮೈಸೂರಿನ ಹೈದರ್ ಅಲಿ ರಸ್ತೆ ಅಗಲೀಕರಣದ ಜೊತೆಗೆ ಜೋಡಿ ರಸ್ತೆ ನಿರ್ಮಾಣಕ್ಕೆ ಅನುವಾಗುವಂತೆ ಫೋರಂ ಮಹಲ್ ಹಾಗೂ ಕೆಪಿಎಗೆ ಹೋಗುವ ರಸ್ತೆಯ ಜಂಕ್ಷನ್‌ನ ಎತ್ತರವನ್ನು ತಗ್ಗಿಸುವ ಕಾಮಗಾರಿ ಇಂದಿನಿಂದ ಆರಂಭವಾಗಿದೆ.

ಹೈದರ್ ಅಲಿ ರಸ್ತೆಯನ್ನು ಅಗಲೀಕರಣ ಮಾಡಿ, ಜೋಡಿ ರಸ್ತೆ ಅಭಿವೃದ್ಧಿಗೆ ಅಲ್ಲಿದ್ದ ಮರಗಳನ್ನು ಕಡಿದಾಗ ಪರಿಸರವಾದಿಗಳಿಂದ ತೀವ್ರ ವಿರೋಧ ವ್ಯಕ್ತವಾಗಿತ್ತು. ರಸ್ತೆ ಅಗಲೀಕರಣಕ್ಕಾಗಿ ಮರ ಕಡಿದ ನಗರ ಪಾಲಿಕೆ ವಿರುದ್ಧ ಹಲವು ದಿನ ಪ್ರತಿಭಟನೆ ಕೂಡ ನಡೆಯಿತು.

ಏಪ್ರಿಲ್ 17, 2025ರಂದು ಮರಗಳನ್ನು ಕಡಿಯಲಾಗಿತ್ತು. ತರುವಾಯ ರಸ್ತೆ ನಿರ್ಮಾಣ ಕಾರ್ಯ ಆರಂಭವಾಗಿದ್ದು, ರಸ್ತೆಯ ಅಕ್ಕ ಪಕ್ಕದಲ್ಲಿ ಬಾಕ್ಸ್ ಡ್ರೈನ್‌ಗಳನ್ನು ನಿರ್ಮಾಣ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ.

ಫೋರಂ ಮಾಲ್ ಹಾಗೂ ಕೆಪಿಎ (ಕರ್ನಾಟಕ ಪೊಲೀಸ್ ಅಕಾಡೆಮಿ) ಗೆ ಹೋಗುವ ರಸ್ತೆಯ ಜಂಕ್ಷನ್ ಎತ್ತರವಾಗಿತ್ತು ಉದಯಗಿರಿಯ ಅಜೀಜ್ ಸೇಠ್ ರಸ್ತೆಯಿಂದ ಹೈದರಾಲಿ ರಸ್ತೆಯತ್ತ ಹೋಗುವಾಗ ಎದುರು ಬರುವ ವಾಹನಗಳು ಅಷ್ಟಾಗಿ ಗೋಚರಿಸುತ್ತಿರಲಿಲ್ಲ. ಅಲ್ಲದೆ ಕೆಪಿಎ ಕಡೆ ತಿರುಗುವಾಗ ಅಪಘಾತ ಸಾಧ್ಯತೆ ಇತ್ತು.

ಈ ಹಿನ್ನೆಲೆಯಲ್ಲಿ ಈ ಜಂಕ್ಷನ್ ಎತ್ತರವನ್ನು ಕಡಿಮೆ ಮಾಡಲಾಗುತ್ತಿದೆ. ಈ ಕಾಮಗಾರಿ ಇಂದಿನಿಂದ ಆರಂಭವಾಗಿದ್ದು, ಜೆಸಿಬಿಯಿಂದ ರಸ್ತೆ ಅಗೆಯುವ ಕೆಲಸ ಸಾಗಿದೆ.

ಇನ್ನು ಆರು ತಿಂಗಳಲ್ಲಿ ಹೈದರ್ ಅಲಿ ಜೋಡಿ ರಸ್ತೆಯ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸುವ ಉದ್ದೇಶ ಹೊಂದಲಾಗಿದೆ.

ಪಾಕ್‌ನಲ್ಲಿ ಮತ್ತೊಬ್ಬ ಭಾರತದ ಶತ್ರು ಲಷ್ಕರ್ ಕಮಾಂಡರ್ ಅನುಮಾನಾಸ್ಪದ ಸಾವು



ಲಷ್ಕರ್–ಎ–ತೈಬಾ (LeT) ನ ಉನ್ನತ ಕಮಾಂಡರ್ ಅಬ್ದುಲ್ ಗಫರ್ ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದಾನೆ. ಪಾಕಿಸ್ತಾನದಲ್ಲಿ ಆತನನ್ನು ಕೊಲೆ ಮಾಡಲಾಗಿದೆ ಎಂದು ಶಂಕಿಸಲಾಗಿದೆ. ಅಪರಿಚಿತರು ಗುಂಡಿಕ್ಕಿ ಕೊಂದಿದ್ದಾರೆ ಎಂಬ ವರದಿಗಳಿವೆ. ಇದುವರೆಗೆ ಯಾರೂ ಇದನ್ನು ದೃಢಪಡಿಸಿಲ್ಲ. ಆದರೆ ಅಪಾಯಕಾರಿ ಭಯೋತ್ಪಾದಕ ಸಾವನ್ನಪ್ಪಿದ್ದಾನೆ ಎಂದು ತೋರುತ್ತದೆ. ಇತ್ತೀಚೆಗೆ, ಭಾರತ ವಿರೋಧಿ ಭಯೋತ್ಪಾದಕರನ್ನು ಪಾಕಿಸ್ತಾನದಾದ್ಯಂತ ಅಪರಿಚಿತ ಬಂದೂಕುಧಾರಿಗಳು ಕೊಂದಿದ್ದಾರೆ.

ವರದಿಗಳ ಪ್ರಕಾರ, ಇತ್ತೀಚೆಗೆ ಸಂಬಂಧಿಕರೊಬ್ಬರ ಮದುವೆಯಿಂದ ಹಿಂತಿರುಗುವಾಗ ದಾರಿಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಆತ ಸಾವನ್ನಪ್ಪಿದ್ದಾನೆ. ಸಾವಿಗೆ ಕಾರಣಗಳು ಇನ್ನೂ ತಿಳಿದುಬಂದಿಲ್ಲ. ಸಾವಿಗೆ ಕಾರಣಗಳನ್ನು ಯಾರೂ ಅಧಿಕೃತವಾಗಿ ಬಹಿರಂಗಪಡಿಸಿಲ್ಲ. ಆದಾಗ್ಯೂ, ಈ ಸುದ್ದಿ ಭಾರತೀಯ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ವೈರಲ್ ಆಗುತ್ತಿದೆ.

ಸ್ವಚ್ಛ ಸರ್ವೇಕ್ಷಣೆ ಅಂಗವಾಗಿ ವಿದ್ಯಾರ್ಥಿಗಳು, ಸಾರ್ವಜನಿಕರಿಗೆ ಸ್ಪರ್ಧೆ

ಮೈಸೂರು, ಜ.20(ಎಂಕೆ)– ಸ್ವಚ್ಛ ಸರ್ವೇಕ್ಷಣೆ–2026ರ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಶಾಲಾ–ಕಾಲೇಜು ವಿದ್ಯಾರ್ಥಿಗಳಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸಲು 'ಸ್ವಚ್ಛ ಮೈಸೂರು ರಸಪ್ರಶ್ನೆ' ಹಾಗೂ ಸಾರ್ವಜನಿಕರಿಗಾಗಿ 'ಸ್ವಚ್ಛ ವರ್ಗ ಸ್ಪರ್ಧೆ'ಗಳನ್ನು ಆರಂಭಿಸಲಾಗಿದೆ.



ಸ್ವಚ್ಛ ಸರ್ವೇಕ್ಷಣೆ–2026ರ ಅಂಗವಾಗಿ ನಗರಪಾಲಿಕೆ ವತಿಯಿಂದ ಹಮ್ಮಿಕೊಂಡಿರುವ ಸ್ವಚ್ಛತಾ ಸ್ಪರ್ಧೆಗಳ ಪೋಸ್ಟರ್‌ಗಳನ್ನು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಅವರು ಬಿಡುಗಡೆ ಮಾಡಿದರು.

ಜ.31ರಂದು ಬೆಳಗ್ಗೆ 10.30ಕ್ಕೆ ಕಲಾಮಂದಿರದಲ್ಲಿ ಶಾಲಾ ಶಿಕ್ಷಣ ಇಲಾಖೆ, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ವಿಶ್ವ ವಿದ್ಯಾನಿಲಯ ಹಾಗೂ ಎಕ್ಸೆಲ್ ಪಬ್ಲಿಕ್ ಶಾಲೆ ಸಹಯೋಗದಲ್ಲಿ ಸ್ವಚ್ಛ ಭಾರತ ಮಿಷನ್, ಘನತ್ಯಾಜ್ಯ ನಿರ್ವಹಣೆ, ಪರಿಸರ ಸಂರಕ್ಷಣೆ, ಬಳಕೆಯ ನೀರಿನ ನಿರ್ವಹಣೆ ಹಾಗೂ ವಿವಿಧ ಸ್ವಚ್ಛತಾ ಉಪಕ್ರಮಗಳನ್ನು ಕುರಿತ 'ಸ್ವಚ್ಛ ಮೈಸೂರು ರಸಪ್ರಶ್ನೆ ಸ್ಪರ್ಧೆ' ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಪ್ರತಿ ಶಾಲೆ ಮತ್ತು ಕಾಲೇಜಿನಿಂದ ಇಬ್ಬರು ಸದಸ್ಯರನ್ನೊಳಗೊಂಡ ಒಂದು ತಂಡ ಭಾಗವಹಿಸಲು ಅವಕಾಶ ನೀಡಲಾಗಿದೆ. 7 ರಿಂದ 9ನೇ ತರಗತಿ ವಿದ್ಯಾರ್ಥಿಗಳು ಹಾಗೂ ಪದವಿ ಕಾಲೇಜು ವಿದ್ಯಾರ್ಥಿಗಳ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, ವಿಜೇತರಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ನೀಡಲಾಗುತ್ತದೆ. ಹಾಗೆಯೇ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಮಾಣಪತ್ರ ನೀಡಲಾಗುವುದು.

ಸ್ಪರ್ಧೆಯಲ್ಲಿ ಭಾಗವಹಿಸಲು ವಿದ್ಯಾರ್ಥಿಗಳು ಪಾಲಿಕೆಯ ಸಾಮಾಜಿಕ ಜಾಲತಾಣ (https//forms.gle/z1LWwjJsnbxpcPCf7)ದಲ್ಲಿ ಪ್ರಕಟಿಸಿರುವ ಕ್ಯೂಆರ್ ಕೋಡ್ ಮೂಲಕ ನೊಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಮೊ.ನಂ.9036716494/7760954056/9741593580 ಸಂಪರ್ಕಿಸಬಹುದಾಗಿದೆ.

'ಸ್ವಚ್ಛ ವರ್ಗ ಸ್ಪರ್ಧೆ'ಗಳು: ಮೈಸೂರು ನಾಗರಿಕರ ಸಕ್ರೀಯ ಭಾಗವಹಿಸುವಿಕೆಗಾಗಿ ಸ್ವಚ್ಛತೆ, ಸ್ವಾಸ್ಥ್ಯ ಮತ್ತು ಉತ್ತಮ ತ್ಯಾಜ್ಯ ನಿರ್ವಹಣೆಯನ್ನು ಉತ್ತೇಜಿಸುವ ಉದ್ದೇಶದಿಂದ ಸ್ವಚ್ಛ ವರ್ಗ ಸ್ಪರ್ಧೆಗಳನ್ನು ಆರಂಭಿಸಲಾಗಿದೆ. ಸ್ವಚ್ಛ ಶಾಲೆ, ಸ್ವಚ್ಛ ಮಾರುಕಟ್ಟೆ ಸಂಘ, ಸ್ವಚ್ಛ ಸರ್ಕಾರಿ ಕಚೇರಿ, ಸ್ವಚ್ಛ ಹೋಟೆಲ್, ಸ್ವಚ್ಛ ಬೀದಿ ವ್ಯಾಪಾರ ವಲಯ, ಸ್ವಚ್ಛ ಆಟೋ ಮತ್ತು ಟಾಂಗಾ ನಿಲ್ದಾಣ, ಸ್ವಚ್ಛ ಆಸ್ಪತ್ರೆ ಮತ್ತು ಅಪಾರ್ಟ್‌ಮೆಂಟ್ ಸಂಘ ಹಾಗೂ ಸ್ವಚ್ಛ ಸಾರಿಗೆ ಕೇಂದ್ರ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಸ್ವಚ್ಛ ವರ್ಗ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವ ಸಂಘ–ಸಂಸ್ಥೆಗಳು ಜ.27 ರೊಳಗೆ ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗಿದ್ದು, ಸ್ಪರ್ಧೆಗಳ ಸಮನ್ವಯ ಮತ್ತು ಮೌಲ್ಯಮಾಪನಕ್ಕಾಗಿ ಪರಿಸರ ಇಂಜಿನಿಯರ್ಸ್ ಹಾಗೂ ಆರೋಗ್ಯ ನಿರೀಕ್ಷಕರನ್ನು ನಿಯೋಜಿಸಲಾಗಿದೆ.

ಬಸ್ಸಿನಲ್ಲಿ ಲೈಂಗಿಕ ಕಿರುಕುಳ; ದೀಪಕ್ ದುರಂತ ಸಾವು: ಆರೋಪ ಮಾಡಿದ್ದ ಮಹಿಳೆ ವಿರುದ್ಧ ಕೇಸ್



ಕೋಝಿಕ್ಕೋಡ್, ಜ.20– ತನ್ನ ಕಂಟೆಂಟ್‌ಗಾಗಿ ಬಸ್ ಪ್ರಯಾಣದ ಸಮಯದಲ್ಲಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಸಾಮಾಜಿಕ ಮಾಧ್ಯಮದಲ್ಲಿ ವೀಡಿಯೊ ಪೋಸ್ಟ್ ಮಾಡಿದ್ದ ಮಹಿಳೆಗೆ ಕೇರಳ ಪೊಲೀಸರು ಶಾಕ್ ನೀಡಿದ್ದು, ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದಾರೆ.

ಬಸ್ ಪ್ರಯಾಣದ ವೇಳೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ 42 ವರ್ಷದ ವ್ಯಕ್ತಿಯ ಆತ್ಮಹತ್ಯೆಗೆ ಸಂಬಂಧಿಸಿದಂತೆ ಮಹಿಳೆಯೊಬ್ಬರ ವಿರುದ್ಧ ಸೋಮವಾರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ವಡಕರದ ನಿವಾಸಿ ಶಿಮ್ಜಿತಾ ಮುಸ್ತಫಾ (35) ವಿರುದ್ಧ ಕೋಝಿಕ್ಕೋಡ್ ವೈದ್ಯಕೀಯ ಕಾಲೇಜು ಪೊಲೀಸರು ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾನುವಾರ, ಇಲ್ಲಿನ ಗೋವಿಂದಪುರದಲ್ಲಿ ವಾಸಿಸುತ್ತಿದ್ದ ಮತಿಯಾರ ಮೂಲದ ದೀಪಕ್ ಅವರ ಮೃತದೇಹ ಅವರ ಕೋಣೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಇದಕ್ಕೂ ಮೊದಲು ಜವಳಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ದೀಪಕ್ ತಮ್ಮ ಕೆಲಸದ ನಿಮಿತ್ತ ಶುಕ್ರವಾರ ಸಾರಿಗೆ ಬಸ್‌ನಲ್ಲಿ ಕಣ್ಣೂರಿಗೆ ಪ್ರಯಾಣಿಸಿದ್ದರು.

ಅದೇ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಆರೋಪಿ ಮಹಿಳೆ ಶಿಮ್ಜಿತಾ ಮುಸ್ತಫಾ, ತನ್ನೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿ ವೀಡಿಯೊ ರೆಕಾರ್ಡ್ ಮಾಡಿ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್ಲೋಡ್ ಮಾಡಿದ್ದರು. ಈ ವೀಡಿಯೊ ವ್ಯಾಪಕ ವೈರಲ್ ಆಗಿ ದೀಪಕ್ ವಿರುದ್ಧ ಭಾರಿ ಆಕ್ರೋಶ ವ್ಯಕ್ತವಾಗಿತ್ತು.

ಈ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಪ್ರಸಾರವಾಗಿ ಇದು ದೀಪಕ್ ಅವರ ಗಮನಕ್ಕೂ ಬಂದಿತು. ಇದರಿಂದ ತೀವ್ರ ಅಪಮಾನಕ್ಕೊಳಗಾಗಿದ್ದ ದೀಪಕ್ ಆತ್ಮಹತ್ಯೆಗೆ ಶರಣಾಗಿದ್ದರು. ಪೊಲೀಸರು ಆರಂಭದಲ್ಲಿ ಅಸ್ವಾಭಾವಿಕ ಸಾವಿನ ಪ್ರಕರಣವನ್ನು ದಾಖಲಿಸಿದ್ದರು.

ಆದಾಗ್ಯೂ, ಕುಟುಂಬ ಸದಸ್ಯರು ನೀಡಿದ ದೂರಿನ ಮೇರೆಗೆ, ಆತ್ಮಹತ್ಯೆಗೆ ಪ್ರಚೋದನೆಗಾಗಿ ಭಾರತೀಯ ನ್ಯಾಯ ಸಂಹಿತಾ ಸೆಕ್ಷನ್ 108ರ ಅಡಿಯಲ್ಲಿ ಹೊಸ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತನಿಖೆಗೆ ಆದೇಶ, ವರದಿ ಸಲ್ಲಿಕೆಗೆ ವಾರ ಗಡುವು: ಅಂತೆಯೇ ಕೇರಳ ರಾಜ್ಯ ಮಾನವ ಹಕ್ಕುಗಳ ಆಯೋಗವು ಘಟನೆಯ ಬಗ್ಗೆ ಪೊಲೀಸ್ ತನಿಖೆಗೆ ಆದೇಶಿಸಿದೆ ಮತ್ತು ಉತ್ತರ ವಲಯದ ಪೊಲೀಸ್ ಉಪ ಮಹಾ ನಿರ್ದೇಶಕ (ಡಿಐಜಿ) ಅವರಿಗೆ ಒಂದು ವಾರದೊಳಗೆ ವರದಿ ಸಲ್ಲಿಸುವಂತೆ ನಿರ್ದೇಶಿಸಿದೆ.

ಕೇಂದ್ರ ಬಜೆಟ್‌ನಲ್ಲಿ ರಾಜ್ಯಕ್ಕೆ ನ್ಯಾಯಯುತ ಪಾಲು ನೀಡಲಿ



ಮೈಸೂರು, ಜ.20– ಕೇಂದ್ರದ ಈ ಬಾರಿಯ ಬಜೆಟ್‌ನಲ್ಲಾದರೂ ರಾಜ್ಯಕ್ಕೆ ನ್ಯಾಯಯುತ ಪಾಲು ನೀಡಲಿ. ಈ ನಿಟ್ಟಿನಲ್ಲಿ ಬಿಜೆಪಿ ಸಂಸದರು ಒತ್ತಾಯಿಸಲಿ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಆಗ್ರಹಿಸಿದ್ದಾರೆ.

ಕೇಂದ್ರ ಬಿಜೆಪಿ ಸರ್ಕಾರದಿಂದ ರಾಜ್ಯಕ್ಕೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಮೋದಿ ಅವರು 3ನೇ ಬಾರಿ ಪ್ರಧಾನಿಯಾದರೂ ರಾಜಕೀಯವಾಗಿ ಅನುಕೂಲಕರವಾದ ರಾಜ್ಯಗಳಿಗೆ ಹೆಚ್ಚು ಅನುದಾನ ನೀಡಿ, ಕರ್ನಾಟಕಕ್ಕೆ ತಾರತಮ್ಯ ಮಾಡಿದ್ದಾರೆ ಎಂದರು.

ಎನ್‌ಡಿಎ ಸರ್ಕಾರ ರಚನೆಗೆ ಸಾಥ್ ನೀಡಿದ ಒಂದೇ ಕಾರಣಕ್ಕೆ ಆಂಧ್ರ ಹಾಗೂ ಬಿಹಾರಕ್ಕೆ ತಲಾ 1 ಲಕ್ಷ ಕೋಟಿಗೂ ಅಧಿಕ ಅನುದಾನ ನೀಡಲಾಗಿದೆ. ಆದರೆ ಅತೀ ಹೆಚ್ಚು ತೆರಿಗೆ ಪಾಲು ನೀಡುವ, 17 ಸಂಸದರು, ವಿತ್ತ ಸಚಿವರನ್ನು ಆಯ್ಕೆ ಮಾಡಿರುವ ಕರ್ನಾಟಕಕ್ಕೆ 17 ತಿಂಗಳಲ್ಲಿ 3,432 ಕೋಟಿ ಮೊತ್ತದ 2 ಯೋಜನೆಗಳಿಗಷ್ಟೇ ಅನುಮೋದನೆ ನೀಡಿದೆ. ಮೂರನೇ ಹಂತದ ಮೆಟ್ರೋ ಯೋಜನೆಗೂ ರಾಜ್ಯ ಸರ್ಕಾರವೇ ಬಹುಪಾಲು ಅನುದಾನ ಭರಿಸಿದೆ. ಈ ಮಲತಾಯಿ ಧೋರಣೆ ಬಗ್ಗೆ ಬಿಜೆಪಿ ನಾಯಕರು ಸೊಲ್ಲೆತ್ತದಿರುವುದು ನಾಚಿಗೇಡಿನ ಸಂಗತಿ ಎಂದು ವಾಗ್ದಾಳಿ ನಡೆಸಿದ್ದಾರೆ.

ಮನ್‌ರೇಗಾ ಯೋಜನೆ ಹೆಸರು ಬದಲಿಸುವ ಮೂಲಕ ಮಹಾತ್ಮ ಗಾಂಧಿ ಅವರನ್ನು ಕೇಂದ್ರ ಸರ್ಕಾರ ಅಪಮಾನಿಸಿದೆ. ಯೋಜನೆಯ ಅನುದಾನ ಪ್ರಮಾಣವನ್ನು ಕಡಿತಗೊಳಿಸಿ, ಕೂಲಿ ಕಾರ್ಮಿಕರಿಗೆ ಅನ್ಯಾಯ ಮಾಡಿದೆ. ಬಿಜೆಪಿ ಆಡಳಿತದಲ್ಲಿರುವ ಮಧ್ಯಪ್ರದೇಶ ಆರ್ಥಿಕ ದಿವಾಳಿಯತ್ತ ಸಾಗುತ್ತಿದೆ. ಭಾರತ–ಪಾಕ್ ಕದನ ವಿರಾಮದ ಬಗ್ಗೆ ಚೀನಾ ಹೇಳಿಕೆ ಕೊಟ್ಟರೂ ಮೌನ ವಹಿಸಲಾಗಿದೆ. ಇದೀಗ ಮತ್ತೆ ಮೆಟ್ರೋ ದರ ಏರಿಕೆಗೆ ಮುಂದಾಗಿದೆ. ಕೇಂದ್ರದ ಸಾಲು ಸಾಲು ಅನ್ಯಾಯದ ಬಗ್ಗೆ ತುಟಿ ಬಿಚ್ಚದ ಬಿಜೆಪಿ ನಾಯಕರು, ಕೋಮು ದ್ವೇಷ ಸೃಷ್ಟಿಸಿ ರಾಜ್ಯದ ಶಾಂತಿ ಕದಡುತ್ತಿದ್ದಾರೆ. ಅವರಿಗೆ ಮನಃಸಾಕ್ಷಿ ಇದ್ದರೆ ರಾಜ್ಯಕ್ಕೆ ಆಗುತ್ತಿರುವ ಅನ್ಯಾಯ ಖಂಡಿಸಿ, ಈ ಬಾರಿ ಬಜೆಟ್‌ನಲ್ಲಾದರೂ ರಾಜ್ಯಕ್ಕೆ ನ್ಯಾಯಯುತ ಪಾಲನ್ನೂ ತನ್ನಿ ಎಂದು ಒತ್ತಾಯಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಸೋರಿಕೆ ವಿವಾದ

ಎಸ್‌ಎಸ್‌ಎಲ್‌ಸಿ 2ನೇ ಪೂರ್ವ ಸಿದ್ಧತಾ ಪರೀಕ್ಷೆಗೆ ಹೊಸ ವೇಳಾಪಟ್ಟಿ ಪ್ರಕಟ



ಬೆಂಗಳೂರು: ಕಳೆದ ವಾರ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದರಿಂದ ಇದೀಗ 2ನೇ ಪೂರ್ವ ಸಿದ್ಧತಾ ಪರೀಕ್ಷೆಗೆ ಹೊಸ ವೇಳಾಪಟ್ಟಿ ಪ್ರಕಟಿಸಲಾಗಿದೆ. ಮುಂಬರುವ ಪರೀಕ್ಷೆಗಳಲ್ಲಿ ಈ ರೀತಿಯ ಪ್ರಶ್ನೆ ಪತ್ರಿಕೆ ಸೋರಿಕೆ ತಡೆಯಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಮಾರ್ಗಸೂಚಿಗಳ ಪ್ರಕಾರ, ಜನವರಿ 27 ರಿಂದ ಫೆಬ್ರವರಿ 2 ರವರೆಗೆ ಎರಡನೇ ಪೂರ್ವಸಿದ್ಧತಾ ಪರೀಕ್ಷೆ ನಡೆಯಲಿದೆ. ಬೆಳಿಗ್ಗೆ 10 ಗಂಟೆ ಬದಲಾಗಿ 11 ರಿಂದ ಪರೀಕ್ಷೆಗಳು ಪ್ರಾರಂಭವಾಗುತ್ತವೆ. ಬೆಳಿಗ್ಗೆ 9 ಗಂಟೆಗೆ ಪ್ರಾರಂಭವಾಗುವ ಸಾಮಾನ್ಯ ತರಗತಿಗಳಿಗೆ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿದೆ.

ಆಯಾ ವಿಷಯಗಳ ಪ್ರಶ್ನೆ ಪತ್ರಿಕೆಗಳನ್ನು ಬೆಳಗ್ಗೆ 7ರ ಬದಲು 9.30ಕ್ಕೆ ಡೌನ್‌ಲೋಡ್ ಮಾಡಿಕೊಳ್ಳಬೇಕು. ಅವುಗಳನ್ನು ಬೆಳಗ್ಗೆ 10 ಗಂಟೆಯೊಳಗೆ ಪ್ರಿಂಟ್ ತೆಗೆದುಕೊಂಡು 10.50ಕ್ಕೆ ಪರೀಕ್ಷಾ ಕೊಠಡಿಗೆ ಕಳುಹಿಸಬೇಕು ಎಂದು ಸೂಚಿಸಲಾಗಿದೆ.

ಪ್ರಶ್ನೆ ಪತ್ರಿಕೆ ಸೋರಿಕೆಯಾದರೆ ಆಯಾ ಶಾಲೆಯ ಮುಖ್ಯ ಶಿಕ್ಷಕರು, ನೋಡಲ್ ಶಿಕ್ಷಕರು, ಕ್ಷೇತ್ರ ಶಿಕ್ಷಣಾಧಿಕಾರಿ, ಜಿಲ್ಲಾ ಉಪನಿರ್ದೇಶಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಪ್ರತಿ ಪ್ರಕರಣಕ್ಕೂ ಪ್ರತ್ಯೇಕ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ರಾಮ ಇದ್ದ ಎಂದ ಮೇಲೆ ರಾವಣನೂ ಇದ್ದ ಎಂದು ಒಪ್ಪಿಕೊಳ್ಳಬೇಕಲ್ಲವೆ?

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಕುತೂಹಲಕಾರಿ ಪ್ರಶ್ನೆ!

ಮೈಸೂರು, ಜ.20(ಎಂಟಿವೈ)– ಕನ್ನಡ ಸಾಹಿತ್ಯವು ವಿವೇಕದ ಪರಂಪರೆ ಹೊಂದಿದ್ದು, ಈಗಿನ ಕಾಲಕ್ಕೆ ಪರಂಪರೆಯ ವಿವೇಕ ಶಕ್ತಿಯಾಗಿ ಬೆಳೆಸಬೇಕಾಗಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ನಡೆದ ಕನ್ನಡ ಸಾಹಿತ್ಯ ಪುನರಾವಲೋಕನ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಉದ್ಘಾಟಿಸಿದರು

ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯ ಹಾಗೂ ಧ್ವನಿ ಫೌಂಡೇಷನ್ ಸಹಯೋಗದಲ್ಲಿ ಮಂಗಳವಾರ ನಡೆದ ಕನ್ನಡ ಸಾಹಿತ್ಯ ಪುನರಾವಲೋಕನ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾವ್ಯವನ್ನು ಚರಿತ್ರೆ, ಇತಿಹಾಸ ಎಂದು ಓದಬಾರದು. ಅಲ್ಲದೆ, ಕಾವ್ಯದ ಪಾತ್ರ ನೈಜವೆಂದು ಪರಿಗಣಿಸಬಾರದು. ಕನ್ನಡಿಗರ ಭಾಷೆ ಹುಟ್ಟಿನಲ್ಲಿ ಉದಾರವಾಗಿರುವುದರಿಂದ ಕನ್ನಡ ಸಾಹಿತ್ಯ ಮನುಕುಲಕ್ಕೆ ಸಂಬಂಧಪಟ್ಟ ವಿವೇಕವನ್ನು ಹೇಳುತ್ತಾ ಬಂದಿದೆ. ಕುಮಾರವ್ಯಾಸ, ಕನಕದಾಸರು, ವಚನಕಾರರು ಯಾರನ್ನೇ ಓದಿದರೂ ಅವರಲ್ಲಿ ಒಂದು ವಿವೇಕ ಕಾಣಬಹುದು.

ಮಾನವ ಜಾತಿ ಒಂದೇ ಎಂದು ಪಂಪ ಹೇಳುತ್ತಾನೆ. ವಚನಕಾರರು, ದಾಸರು ಇದೆ ತತ್ವವನ್ನು ಪ್ರತಿಪಾದಿಸುತ್ತಾರೆ. ಪರಂಪರೆಯ ವಿವೇಕ ಈಗಿನ ಕಾಲಕ್ಕೆ ಶಕ್ತಿಯಾಗಬೇಕು. ಇದನ್ನು ಬಿಟ್ಟರೆ ಅವಿವೇಕವಾಗಿ ವರ್ತಿಸಬೇಕಾಗುತ್ತದೆ. ಆ ವಿವೇಕ ವರ್ತಮಾನಕ್ಕೆ ಉಳಿದಿದೆಯಾ? ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅಲ್ಲದೆ, ನಮ್ಮಲ್ಲಿ ದ್ವೇಷ, ಅಸಹನೆ ಹೆಚ್ಚಾಗಿದೆ ಎಂದು ವಿಷಾದಿಸಿದರು.

ಯಾವುದೇ ಕಾವ್ಯಗಳನ್ನು ಓದುವಾಗ ಕಾವ್ಯದ ಪಾತ್ರಗಳನ್ನು ಚರಿತ್ರೆ ಎಂದು ಗ್ರಹಿಸಬಾರದು. ಕಾವ್ಯದಲ್ಲಿನ ಪಾತ್ರಗಳನ್ನು ನಿಜವಾಗಿ ಇದ್ದವರು ಎಂದು ವಾದ ಮಾಡುತ್ತೇವೆ. ಕಾವ್ಯದ ಪಾತ್ರಗಳನ್ನೆ ಮುಂದಿಟ್ಟು ರಾಜಕೀಯ ಮಾಡಲಾಗುತ್ತಿದೆ. ರಾಮನ ಹೆಸರಿನಲ್ಲಿ ದೇವಾಲಯ ನಿರ್ಮಿಸಲಾಗಿದೆ. ರಾಮ ಇದ್ದ ಎಂದು ನೀವು ಒಪ್ಪಿಕೊಂಡರೆ, ಹತ್ತು ತಲೆಯ ರಾವಣನೂ ಇದ್ದ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇತಿಹಾಸದಲ್ಲಿ ಹತ್ತು ತಲೆಯುಳ್ಳವನು ಭೂಮಿ ಮೇಲೆ ಇದ್ದ ಎಂದು ಯಾವ ವಿಜ್ಞಾನಿ, ಇತಿಹಾಸಕಾರರು ಹೇಳಿಲ್ಲ. ಹತ್ತು ತಲೆ ಇದ್ದರೆ ತಲೆ ಬ್ಯಾಲೆನ್ಸ್ ಆಗುವುದಿಲ್ಲ. ಎರಡು ಕಡೆ ಸಮಾನ ಭಾರವಾಗಿದ್ದರೆ ಮಾತ್ರ ಬ್ಯಾಲೆನ್ಸ್ ಆಗಲಿದೆ. ಇಂತಹ ಕುಚೋದ್ಯದ ಪ್ರಶ್ನೆಗಳನ್ನು ಕೇಳಬಾರದು. ಆದರೆ, ಕವಿಗಳು ಪಾತ್ರ ಕಟ್ಟಿರುವುದರಿಂದ ಒಂದು ವಿವೇಕವಿದೆ ಎಂದು ನೋಡಬೇಕು ಎಂದು ಸಲಹೆ ನೀಡಿದರು.


ದೇವರಿಗೆ ಕನ್ನಡ ಕಲಿಸಿದರು!: ಈ ಹಿಂದೆ ನಾವು ಪೂಜಿಸುವ ದೇವರಿಗೆ ಕನ್ನಡ ಬರುತ್ತಿರಲಿಲ್ಲ. ಸಂಸ್ಕೃತದ ಮಂತ್ರ ಹೇಳಿ ದೇವರನ್ನು ಒಲಿಸಿಕೊಳ್ಳಬೇಕಾಗಿತ್ತು. ಇದರಿಂದ ತಳ ಸಮುದಾಯಗಳಿಗೆ ಸಂಸ್ಕೃತ ಬರುತ್ತಿರಲಿಲ್ಲ. ಹಾಗಾಗಿ ಗೊತ್ತಿರದ ಭಾಷೆಯಲ್ಲಿ ದೇವರನ್ನು ಒಲಿಸಿಕೊಳ್ಳಲು ಸಾಧ್ಯವಾಗುತ್ತಿರಲ್ಲಿಲ್ಲ. ಹೀಗಾಗಿ ವಚನಕಾರರು ದೇವರಿಗೆ ಕನ್ನಡ ಕಲಿಸಿದರು. ಕನ್ನಡ ಸಾಹಿತ್ಯದಲ್ಲಿ ಇಂತಹ ಹಲವು ವಿಸ್ಮಯಗಳಿವೆ.

ಕೃಷ್ಣದೇವರಾಯರ ವಿಜಯನಗರ ವೈಭವ ಚರಿತ್ರೆಯ ಬಲೂನಿಗೆ ಹಲವು ಕವಿಗಳು ಪಿನ್ನು ಚುಚ್ಚಿದರು. ವಿಜಯನಗರ ವೈಭವವನ್ನು ಪುರಂದಾಸರು ಆನೆ, ಕುದುರೆ, ಒಂಟೆಯಲ್ಲ ಲೊಳಲೊಟ್ಟೆ ಎಂದು ಟೀಕಿಸಿದ್ದರು. ಈಗ ವೈಭವದಿಂದ ಇದ್ದವನಿಗೆ ಮತ್ತೆರಡು ಪದ ಸೇರಿಸಿ ಹೊಗಳುವುದು ಹೆಚ್ಚಾಗಿದೆ. ಆದರೆ, ರಾಜರ ಆಸ್ಥಾನದಲ್ಲಿದ್ದ ನಮ್ಮ ಕವಿಗಳು ವೈಭವ ಸಾಮ್ರಾಜ್ಯದ ಹುಳುಕುಗಳನ್ನು ತೋರಿಸಿದರು. ಕನ್ನಡ ವಿವೇಕವನ್ನು ಇಂದಿನ ವಿದ್ಯಾರ್ಥಿಗಳು ಹಾಗೂ ಯುವ ಸಮೂಹ ಉಳಿಸಬೇಕು. ಆಗ ಭಾಷೆ, ಸಂಸ್ಕೃತಿ ಉಳಿಯಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ನಯನಕುಮಾರಿ, ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎನ್.ಭಾರತಿ, ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ವಿನೋದ, ಧ್ವನಿ ಫೌಂಡೇಷನ್ ಅಧ್ಯಕ್ಷೆ ಶ್ವೇತಾ ಮಡಪ್ಪಾಡಿ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ವೀರಶೈವ ಲಿಂಗಾಯಿತ ಮಹಾಸಭಾ

ರಾಷ್ಟ್ರೀಯ ಅಧ್ಯಕ್ಷರಾಗಿ ಈಶ್ವರ ಖಂಡ್ರೆ ಆಯ್ಕೆ



ಬೆಂಗಳೂರು: ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಸಭಾದ ರಾಜ್ಯಾಧ್ಯಕ್ಷ ಶಂಕರ ಮಹಾದೇವ ಬಿದರಿ ತಿಳಿಸಿದರು.

ಬೆಂಗಳೂರಿನಲ್ಲಿಂದು ನಡೆದ ಸಭಾದ ಕಾರ್ಯಕಾರಿಣಿ ಸಭೆಯಲ್ಲಿ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಸಭಾದ ಮಹಾ ಪ್ರಧಾನ ಕಾರ್ಯದರ್ಶಿಯಾಗಿರುವ ಈಶ್ವರ ಬಿ. ಖಂಡ್ರೆ ಅವರನ್ನು ಆಯ್ಕೆ ಮಾಡಲು ನಿರ್ಣಯ ಕೈಗೊಳ್ಳಲಾಯಿತು ಎಂದರು.

ಇಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಈಶ್ವರ ಬಿ ಖಂಡ್ರೆ ಅವರನ್ನು ಆಯ್ಕೆ ಮಾಡಲು ಎಲ್ಲ ಸದಸ್ಯರೂ ಒಮ್ಮತ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ನಡೆಯಿತು.

ಕಳೆದ 13 ವರ್ಷಗಳಿಂದ ಮಹಾಸಭಾದ ರಾಷ್ಟ್ರೀಯ ಮಹಾ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿರುವ ಈಶ್ವರ ಬಿ ಖಂಡ್ರೆ ಅವರು ಕಳೆದ ಒಂದು ವರ್ಷದಿಂದ ಹಿರಿಯ ಉಪಾಧ್ಯಕ್ಷರ ಪ್ರಭಾರ ಹೊಣೆಯನ್ನೂ ನಿಭಾಯಿಸಿದ್ದರು.

ತಮ್ಮ ಪೂಜ್ಯ ತಂದೆ ಭೀಮಣ್ಣ ಖಂಡ್ರೆಯವರ ಮಾರ್ಗದಲ್ಲೇ ನಡೆದು, ಸಮುದಾಯದ ಏಳಿಗೆಗಾಗಿ ಶ್ರಮಿಸುತ್ತಿರುವ ಈಶ್ವರ ಬಿ ಖಂಡ್ರೆ ಈಗ ಮಹಾ ಸಭಾದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗುವ ಮೂಲಕ ಸಮಾಜಕ್ಕೆ ಹೊಸ ಭರವಸೆ ಮೂಡಿಸಿದ್ದಾರೆ.

ತಮ್ಮನ್ನು ಮಹಾಸಭಾದ ನೂತನ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕಾಗಿ ಕಾರ್ಯಕಾರಿ ಸಮಿತಿಗೆ ಧನ್ಯವಾದ ಅರ್ಪಿಸಿದ ಅವರು, ವೀರಶೈವ ಮತ್ತು ಲಿಂಗಾಯಿತ ಬೇರೆ ಬೇರೆಯಲ್ಲ. ಹೀಗಾಗಿ ಸಮಾಜದ ಎಲ್ಲ ಒಳ ಪಂಗಡಗಳನ್ನು ಒಗ್ಗೂಡಿಸುವುದು ಅತ್ಯಂತ ಮುಖ್ಯವಾಗಿದ್ದು, ತಾವು ಈ ನಿಟ್ಟಿನಲ್ಲಿ ಶ್ರಮಿಸುವುದಾಗಿ ತಿಳಿಸಿದರು.

ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ನಮ್ಮ ಕಕ್ಷಿದಾರರು ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮುಳ್ಳೂರು ಗ್ರಾಮದಲ್ಲಿ ವಾಸವಾಗಿರುವ ಚಾಮಯ್ಯ ಬಿನ್ ಕೆಂಗಯ್ಯ ಹಾಗೂ ಇವರ ಒಟ್ಟು ಕುಟುಂಬದವರುಗಳು ಕೆಳಕಂಡ ಸ್ವತ್ತನ್ನು ಕ್ರಯ ನೊಂದಣಿ ಮಾಡಿಸಿಕೊಳ್ಳಲು ಸಿದ್ಧರಿದ್ದು, ಈ ಸಂಬಂಧ ಕೆಳಕಂಡ ಸ್ವತ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಅಧಿಕಾರ ಹಕ್ಕು ಹಾಗೂ ತಂಟೆ ತಕರಾರುಗಳು ಇದ್ದ ಪಕ್ಷದಲ್ಲಿ ಸಾರ್ವಜನಿಕ ಪ್ರಕಟಣೆ ಹೊರಡಿಸಿದ 15 ದಿನಗಳ ಒಳಗಾಗಿ ವಕೀಲರ ಕಛೇರಿಗೆ ಭೇಟಿ ಮಾಡಿ ತಕರಾರು ಸಲ್ಲಿಸತಕ್ಕದ್ದು. ಸದರಿ ಸಮಯದಲ್ಲಿ ತಕರಾರು ಸಲ್ಲಿಸದೆ ಇದ್ದ ಪಕ್ಷದಲ್ಲಿ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯ ನೊಂದಣಿ ಮಾಡಿಕೊಳ್ಳಲು ಯಾವುದೇ ತಂಟೆ ತಕರಾರು ಅಧಿಕಾರವಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಕೆಳಕಂಡ ಸ್ವತ್ತನ್ನು ಕ್ರಯ ನೊಂದಣಿ ಮಾಡಿಸಿಕೊಳ್ಳಲು ಸಿದ್ಧರಿರುತ್ತಾರೆ ಎಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮುಳ್ಳೂರು ಗ್ರಾಮದ ಸರ್ವೆ ನಂ.163/3 ರಲ್ಲಿ ವಿಸ್ತೀರ್ಣ 1 ಎಕರೆ 24 ಗುಂಟೆ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಟಿ ಶಿವಪ್ರಕಾಶ ರವರ ಜಮೀನು ; ಪಶ್ಚಿಮಕ್ಕೆ: ದೇವೇಗೌಡ ರವರ ಜಮೀನು ; ಉತ್ತರಕ್ಕೆ: ಆರ್ ವಿಜಯ್ ರವರ ಜಮೀನು ; ದಕ್ಷಿಣಕ್ಕೆ: ಕರಿಯಯ್ಯ ರವರ ಜಮೀನು.

Sd/- S. Dinesh Gowda,
B.A.L., L.L.B., Advocate, No. 8,
Block-13, Somanath Nagar, Water
Tank Road, Dattagalli, Mysuru.
Date: 19-1-2026 Mob: 9886809142

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಬೋಗಾದಿ ಗ್ರಾಮ, ಕಿತ್ತೂರು ರಾಣಿ ಚೆನ್ನಮ್ಮ ರಸ್ತೆ, ನಂ.465/1ರಲ್ಲಿ ವಾಸವಾಗಿರುವ ರಮೇಶ್ ರವರ ಧರ್ಮಪತ್ನಿ ಸುಮಾರು 52 ವರ್ಷ ವಯಸ್ಸುಳ್ಳ ಶ್ರೀಮತಿ ಮೀನಾಕ್ಷಿ ರವರು ಈ ಕೆಳಗೆ ತೋರಿಸಿರುವ ಷೆಡ್ಯೂಲ್ ಸ್ವತ್ತನ್ನು ದಿನಾಂಕ 15.12.2025 ರಂದು ಕ್ರಯದ ಒಪ್ಪಂದದ ಕರಾರು ಪತ್ರವನ್ನು ಶುದ್ಧ ಕ್ರಯಕ್ಕೆ ತೆಗೆದುಕೊಳ್ಳುವ ಸಲುವಾಗಿ ಮಾಡಿಕೊಂಡಿದ್ದು, ಸದರಿ ಶುದ್ಧ ಕ್ರಯದ ಒಪ್ಪಂದದ ಕರಾರು ಪತ್ರವು ಹೆಗ್ಗಡದೇವನಕೋಟೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಲ್ಪಟ್ಟಿರುತ್ತದೆ. ಸದರಿ 1ನೇ ಪುಸ್ತಕದ ದಸ್ತಾವೇಜು ನಂ. ಹೆಚ್‌ಡಿಕೆ–1–05464–2025–26 ಆಗಿರುತ್ತದೆ. ಷೆಡ್ಯೂಲ್ ಸ್ವತ್ತಿನ ವಿವರವಾದ ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಗಂಗಣಹೊಸಹಳ್ಳಿ ಗ್ರಾಮಕ್ಕೆ ಸೇರಿದ ಹಿಸ್ಸಾ ಸರ್ವೆ ನಂ.61/7 ರ ವಿಸ್ತೀರ್ಣ 1 ಎಕರೆ ಜಮೀನಿಗೆ ಚೆಕ್ಕುಬಂಧಿ : ಪೂರ್ವಕ್ಕೆ : ಶಂಕರೇಗೌಡ ರವರ ಜಮೀನು, ಪಶ್ಚಿಮಕ್ಕೆ : ದೇವಮ್ಮ ರವರ ಜಮೀನು, ಉತ್ತರಕ್ಕೆ : ನಾಗರಾಜು ಬಿನ್ ಲೇಟ್ ಪಾಪೇಗೌಡ ರವರ ಜಮೀನು, ದಕ್ಷಿಣಕ್ಕೆ : ಸರ್ಕಾರಿ ರಸ್ತೆ ಈ ಮಧ್ಯೆ ಇರುವ ಸರ್ವೆ ನಂ.61/7ರ ವಿಸ್ತೀರ್ಣ 1 ಎಕರೆ ಸ್ವತ್ತಾಗಿರುತ್ತದೆ. ಸದರಿ ಸ್ವತ್ತನ್ನು ಶ್ರೀಮತಿ ರೇಖಾ ಬಿನ್ ದೇವಮ್ಮ/ಕೋಂ ನರಸಿಂಹಮೂರ್ತಿ, ನರಸಿಂಹಮೂರ್ತಿ ಬಿನ್ ಲೇಟ್ ಉಗ್ರಯ್ಯ, ಶಿವರಾಜ್.ಎನ್ ಬಿನ್ ನರಸಿಂಹಮೂರ್ತಿ ಮತ್ತು ಚಂದ್ರು.ಎನ್ ಬಿನ್ ನರಸಿಂಹಮೂರ್ತಿ ರವರುಗಳಿಂದ ಕ್ರಯಕ್ಕೆ ತೆಗೆದುಕೊಳ್ಳಲು ಕ್ರಯದ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಈ ಸ್ವತ್ತಿಗೆ ಸಂಬಂಧಿಸಿದಂತೆ ಈ ಸ್ವತ್ತಿನ ಮೇಲೆ ಯಾರಿಗಾದರೂ ಹಕ್ಕು, ಅಧಿಕಾರ ಇದ್ದಲ್ಲಿ ಹಾಗೂ ಸ್ವತ್ತಿನ ಮೇಲೆ ಋಣಭಾರ ಇದ್ದಲ್ಲಿ, ಸ್ವತ್ತಿನ ಮೇಲೆ ಭಾಗಾಂಶದ ಹಕ್ಕು ಇದ್ದಲ್ಲಿ ನ್ಯಾಯಾಲಯದಲ್ಲಿ ಪ್ರಕರಣ ಇದ್ದಲ್ಲಿ ನಮ್ಮ ಕಕ್ಷಿದಾರರಿಗಾಗಲೀ ಅಥವಾ ನನ್ನ ಕಛೇರಿಗಾಗಲೀ ಖುದ್ದು ಬಂದು ಈ ಪ್ರಕಟಣೆಯಾದ 7 ದಿನಗಳೊಳಗಾಗಿ ಮಾಹಿತಿ ನೀಡುವುದು. ತಪ್ಪಿದಲ್ಲಿ ಸ್ವತ್ತಿನ ಮೇಲೆ ಯಾರಿಗೂ ಹಕ್ಕು ಅಧಿಕಾರ ಇಲ್ಲವೆಂದು ಹಾಗೂ ಯಾವುದೇ ತಂಟೆ ತಕರಾರು ಇಲ್ಲವೆಂದು ಪರಿಗಣಿಸಿ ಸದರಿ ಸ್ವತ್ತನ್ನು ನಮ್ಮ ಕಕ್ಷಿದಾರರು ಕ್ರಯಕ್ಕೆ ಪಡೆದುಕೊಳ್ಳಲು ಕಾನೂನುಬದ್ಧರಾಗಿರುತ್ತಾರೆ.

ಸಹಿ/– ಮೋಹನ್‌ರಾಜು. ಎಸ್.ಪಿ., ಬಿ.ಎ., ಎಲ್.ಎಲ್.ಬಿ.,
ವಕೀಲರು, KAR-213/05, ನಂ. 2824,
1ನೇ "ಎ" ಮುಖ್ಯ ರಸ್ತೆ, 8ನೇ ಕ್ರಾಸ್, ಜಯನಗರ,
ಮೈಸೂರು–570014, ಮೊ.ನಂ. 9844286155

PUBLIC NOTICE

Notice is hereby issued to the General Public that **(1) Mr. ZAIUL RAHMAN CHADKHAN,** S/o. Mr. Abu Mohammed Chadkhan, Residing at # 16A 1G, Ground Floor, Opp. HIG Hanumantha Nagar Road, Bannimantap, Mysuru-570015 and **(2) Mr. ABID ALI PANGAL**, S/o. Mr. Khaja Moinuddin Pangal, Residing at # 241/B, Chadkhan Garden, Near Jamat Complex, Mavalli, Murdeshwara, Uttara Kannada-581350 have agreed to Sell the Schedule Property to my client/s.


Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along with documentary evidence at # L-50/2A, 1st Floor, Ashoka Road, Mysuru -570 001 within SEVEN (07) days from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claims of whatsoever nature with respect of the schedule property.

SCHEDULE

ALL THAT PIECE AND PARCEL OF COMMERCIAL PROPERTY BEARING NO. 1679/3 NEW NO. D-5/4, E-KHATA BEARING NO. 27-1-510-16, MEASURING EAST TO WEST 10 FEET AND NORTH TO SOUTH 20 FEET, SITUATED AT OLD BANK ROAD, DEVARAJA MOHALLA, MYSURU & HAVING CONSTRUCTED MADRAS TARSI ROOFING RED OXIDE FLOORING BUILDING MEASURING 18.5806 SQ MTS ON GROUND FLOOR, 11.148360 SQ MTS ON FIRST FLOOR & A C SHEET ROOFING RED OXIDE FLOORING MEASURING 11.148360 SQ MTS ON SECOND FLOOR & BOUNDED ON - EAST BY: SHOP BEARING No. 1679/4, NEW NO. 5/3, WEST BY: SHOP BEARING No. 1679/2, NEW NO. 5/5, NORTH BY: ROAD, SOUTH BY: COMMON PASSAGE.

Sd/- **M.SANJAY JAIN,** BBM, LLB, CCL, CMJFS,
ADVOCATE, # L, 50/2A, 1 Floor, Ashoka Road, Mysore-570001
email: msj186@yahoo.co.in
Mobile: 93414-64636
Place: Mysuru Date: 19/01/2026

25ನೇ ವರ್ಷದ ಪುಣ್ಯಸ್ಮರಣೆ



B. ನಾಗರಾಜು, ಕಂಟ್ರಾಕ್ಟರ್



ಚಿಕ್ಕತಾಯಮ್ಮ(ನಿಂಗಮ್ಮ)

ಜನುಮ ಜನುಮಕು ನೀವೇ ನನ್ನ ತಂದೆ ತಾಯಿಯಾಗಿ ಬರಬೇಕೆಂದು
ನಿಮ್ಮ ಆಶೀರ್ವಾದ ಕೋರುವ ನಿಮ್ಮ ಪ್ರೀತಿಯ ಪುತ್ರ
– ಎನ್. ಕುಮಾರ
ದುಃಖತಪ್ತರು: ಕುಟುಂಬವರ್ಗದವರು, ಮೈಸೂರು

46 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

60ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು



ಶ್ರೀಯುತ ಪುಟ್ಟರಾಜು .ಸಿ.

ARSI ಪೊಲೀಸ್ ಇಲಾಖೆ

ಶುಭಕೋರುವವರು:
ಪತ್ನಿ ಯಶೋಧ, ಮಕ್ಕಳು: ಸೌಮ್ಯ, ನೇತ್ರ, ಕರುಣೇಶ್,
ಅಳಿಯಂದಿರು: ಸುಧಾಕರ್, ಪ್ರಶಾಂತ್,
ಮೊಮ್ಮಕ್ಕಳು: ದಿಶ, ವೇದಿಕ, ಪ್ರಹಿತ ಹಾಗೂ ಬಂಧು–ಮಿತ್ರರು



ಹಸಿರು ನಮ್ಮ ಉಸಿರು

ಸಿಎಫ್‌ಟಿಆರ್‌ಐ ಶಾಲೆ, ಮೈಸೂರು

(ಆಂಗ್ಲ ಮಾಧ್ಯಮ)

ಸಿಎಫ್‌ಟಿಆರ್‌ಐ ಆವರಣ, ಯಾದವಗಿರಿ, ಮೈಸೂರು–570020, ದೂ:– 0821–2515381/9740778836

(ಸಿಬಿಎಸ್‌ಇ ಮಾನ್ಯತೆ – ಸಿಬಿಎಸ್‌ಇ, ನ್ಯೂದೆಹಲಿ – ಅಫಿಲಿಯೇಷನ್ ನಂ. 830764)

2026–2027ನೇ ಸಾಲಿನಲ್ಲಿ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಕರೆಯಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ವಿದ್ಯಾರ್ಹತೆ	ಖಾಲಿ ಇರುವ ಹುದ್ದೆಗಳು	ಅನುಭವ
1	ಶೈಕ್ಷಣಿಕ ಸಂಯೋಜಕರು	ಎಂ.ಎ./ಎಂ.ಎಸ್ಸಿ., ಮತ್ತು ಬಿ.ಎಡ್., / ಎಂ.ಎಡ್.	01	ಸಿಬಿಎಸ್‌ಇ ಶಾಲೆಯಲ್ಲಿ ಕನಿಷ್ಠ 10 ವರ್ಷಗಳ ಬೋಧನಾ ಅನುಭವ ಮತ್ತು ಕನಿಷ್ಠ 3 ವರ್ಷಗಳ ಶಾಲಾ ಆಡಳಿತಾತ್ಮಕ ಅನುಭವ ಇರುವವರಿಗೆ ಆದ್ಯತೆ.
2	ಗಣಿತ ಶಿಕ್ಷಕರು	ಬಿ.ಎಸ್ಸಿ.,/ ಎಂ.ಎಸ್ಸಿ.,/ ಜೊತೆಗೆ ಬಿ.ಎಡ್., ಗಣಿತ – ಪ್ರಮುಖ ವಿಷಯವಾಗಿರಬೇಕು	01	ಸಿಬಿಎಸ್‌ಇ ಶಾಲೆಯಲ್ಲಿ 3 ವರ್ಷಗಳ ಬೋಧನಾ ಅನುಭವ ಇರುವವರಿಗೆ ಆದ್ಯತೆ
3	ಇಂಗ್ಲಿಷ್ ಶಿಕ್ಷಕರು	ಬಿ.ಎ.,/ಎಂ.ಎ., ಜೊತೆಗೆ ಬಿಎಡ್., ಇಂಗ್ಲಿಷ್ – ಪ್ರಮುಖ ವಿಷಯವಾಗಿರಬೇಕು	01	ಸಿಬಿಎಸ್‌ಇ ಶಾಲೆಯಲ್ಲಿ 3 ವರ್ಷಗಳ ಬೋಧನಾ ಅನುಭವ ಇರುವವರಿಗೆ ಆದ್ಯತೆ
4	ದೈಹಿಕ ಶಿಕ್ಷಣ ಶಿಕ್ಷಕರು (ಪುರುಷ)	ಯಾವುದೇ ವಿಷಯದಲ್ಲಿ ಪದವಿ ಜೊತೆಗೆ ಬಿ.ಪಿ.ಎಡ್.,/ಎಂ.ಪಿ.ಎಡ್.	01	ಸಿಬಿಎಸ್‌ಇ ಶಾಲೆಯಲ್ಲಿ 3 ವರ್ಷಗಳ ಬೋಧನಾ ಅನುಭವ ಇರುವವರಿಗೆ ಆದ್ಯತೆ
5	ಹಿಂದಿ ಶಿಕ್ಷಕರು	ಬಿ.ಎ.,/ಎಂ.ಎ. ಜೊತೆಗೆ ಬಿ.ಎಡ್., ಹಿಂದಿ – ಪ್ರಮುಖ ವಿಷಯವಾಗಿರಬೇಕು	01	ಸಿಬಿಎಸ್‌ಇ ಶಾಲೆಯಲ್ಲಿ 3 ವರ್ಷಗಳ ಬೋಧನಾ ಅನುಭವ ಇರುವವರಿಗೆ ಆದ್ಯತೆ
6	ನರ್ಸರಿ ಶಿಕ್ಷಕರು (ಮಹಿಳೆ)	ಯಾವುದೇ ಪದವಿ ಜೊತೆಗೆ ಎನ್‌ಟಿಟಿ (ನರ್ಸರಿ ಶಿಕ್ಷಕರ ತರಬೇತಿಯ ಪ್ರಮಾಣ ಪತ್ರ)	01	3 ವರ್ಷಗಳ ಬೋಧನಾ ಅನುಭವ ಇರುವವರಿಗೆ ಆದ್ಯತೆ
7	ಕಛೇರಿ ಸಹಾಯಕರು (ಪುರುಷ)	12ನೇ ತರಗತಿ ಉತ್ತೀರ್ಣ ಆದವರಿಗೆ ಆದ್ಯತೆ	01	ಯಾವುದಾದರು ಶಾಲೆಯಲ್ಲಿ 2 ವರ್ಷಗಳ ಅನುಭವ ಇರುವವರಿಗೆ ಆದ್ಯತೆ
8	ಆಯಾ (ಮಹಿಳೆ)	10ನೇ ತರಗತಿ ಉತ್ತೀರ್ಣ ಆದವರಿಗೆ ಆದ್ಯತೆ	01	ಪೂರ್ವ ಕಿಂಡರ್‌ಗಾರ್ಟನ್ ಮಕ್ಕಳ ಆರೈಕೆಯನ್ನು ಮಾಡುವಲ್ಲಿ 2 ವರ್ಷಗಳ ಅನುಭವ ಇರುವವರಿಗೆ ಆದ್ಯತೆ

ಹೆಚ್ಚಿನ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರುವ ಅಭ್ಯರ್ಥಿಗಳು, ಆಂಗ್ಲ ಭಾಷೆಯಲ್ಲಿ ಸಾಮರ್ಥ್ಯ ಮತ್ತು ವಾಗ್ಮಿತೆ ಇರುವವರಿಗೆ ಆದ್ಯತೆ ನೀಡಲಾಗುವುದು. ಅರ್ಜಿಯ ಜೊತೆಗೆ ಬಯೋಡೇಟಾ (ವೈಯಕ್ತಿಕ ವಿವರ), ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಸಂಬಂಧಿಸಿದ ಸ್ವಯಂ ದೃಢೀಕೃತ ಪ್ರಮಾಣ ಪತ್ರಗಳನ್ನು ಈ ಜಾಹಿರಾತು ಪ್ರಕಟವಾದ ದಿನಾಂಕದಿಂದ ಹತ್ತು ದಿನಗಳ ಒಳಗಾಗಿ, ಗೌ.ಕಾರ್ಯದರ್ಶಿಗಳು, ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ, ಸಿಎಫ್ ಟಿಆರ್‌ಐ ಶಾಲೆ, ಸಿಎಫ್‌ಟಿಆರ್‌ಐ ಆವರಣ, ಚೆಲುವಾಂಬ ಉಧ್ಯಾನವನದ ಎದುರು, ಯಾದವಗಿರಿ, ಮೈಸೂರು–570020 ರವರಿಗೆ ಕಳುಹಿಸುವುದು.

ಸಹಿ/–ಗೌ.ಕಾರ್ಯದರ್ಶಿಗಳು,
ಸಿಎಫ್‌ಟಿಆರ್‌ಐ ವಿದ್ಯಾ ಸಂಸ್ಥೆ(ನೋಂ)
ಯಾದವಗಿರಿ, ಮೈಸೂರು–570020



PUBLIC NOTICE

My client intends to purchase the below mentioned agricultural properties bearing Sy. numbers, 179/2 measuring 1 Acre 21 Guntas, Sy.nos. 180/2 measuring 23 Guntas, Sy.no.198 measuring 4 Acre 36 Guntas, Sy.No. 197/1 measuirng 2 Acre 26 Guntas, Sy.no. 196 measuring 1 Acre 20 Guntas sitauted at Kulagana Village, Harve Hobli, Chamarajanagar Tq from Smt. Damayanthi, W/o Late. Harilal M Patel and her childrens Praveen Kumar H Patel, Heena J Patel, Koushik H Patel residents of No. 99/A, 5th Main, Yadavagiri, Mysore. Originally the Survey number 179/2 measuring 1 Acre 21 Guntas, and 180/2 measuring 00.23 Guntas (Herein after refered to as Schedule A) was purchased by Late. Harilal M Patel from Ummerkoya P V under a registered sale deed dated: 11-12-2019. The above property was belongs to the family of Kashidevaru. Under the family arrangement of the family of Kashidevaru, ie., K Chennabasavadevaru, S/o Kashidevaru, Guruswamy, S/o Kashidevaru. Kashidevaru have divided the properties, Under the partition the Schedule A property was allotted to the share of Guruswamy. Guruswamy died intestate leaving behind his wife Smt. Nagamma @ Sagamma, childrens Thontadaryaswamy, Prabhuswamy and Sarvamangala G as the heirs to succed entire estate owned and possessed by him. On 16-3-2015 the heirs of Late. Guruswamy have sold the Schedule A property infavour of PV Ummer Koya.

The agricultural property bearing Sy.No. 198, measuring 4 Acre 36 Guntas situated at Kulagana village, Harve Hobli, Chamaraja Nagar Tq (Morefully described in Schedule B Property). was purchased by Harilal M Patel from Nasif C P under a registered sale deed dated: 21-1-2020. Originally the Schedule B Property was purchased by K C Nanjappa under a regsitered sale deed dated: 5-7-1984 from Smt. Kanakamma and her childnrens. K C Nanjappa has purchased the property out of the joint family funds, hence the same was put into hotch potch of the joint family of Late. Gowdike Chikkabasappa. On 13-7-2010 the wife and childrens of Gowdike Chikkabasappa ie., Smt. Deveeramma, K C Mahadevappa, K C Nanjappa, K C Shivaraju, K C Lingappa, K C Prabhuswamy, Nagalambika, Basavanna, K C Babu have affected a registered partition of the property, under the partition the Schedule B Property was allotted to the share of K C Shivaraju, S/o Gowdike Chikkabasapa. On 20-3-2015 K C Shivajraju joining his wife and a son have sold the Schedule B Property infavour of Nasif.

The agricultural property bearing Sy.No. 196, measuring 1 Acre 20 Guntas and 197/1 measuring 2 Acre 26 Guntas situated at Kulagana village, Harve Hobli, Chamaraja Nagar Tq (More fully described in Schedule C Property). was purchased by Harilal M Patel from Nasif C P under a registered sale deed dated: 21-1-2020. Originally the Schedule C Property was purchased by K C Nanjappa under a registered sale deed dated: 5-7-1984 from Smt. Kanakamma and her childrens. K C Nanjappa has purchased the property out of the joint family funds, hence the same was put into hotch potch of the joint family of Late. Gowdike Chikkabasappa. On 13-7-2010 the wife and childrens of Gowdike Chikkabasappa ie., Smt. Deveeramma, K C Mahadevappa, K C Nanjappa, K C Shivaraju, K C Lingappa, KC Prabhuswamy, Nagalambika, Basavanna, K C Babu have affected a registered partition of the property, under the partition the Schedule C Property was allotted to the share of K C Nanjappa, S/o Gowdike Chikkabasapa. On 20-3-2015 K C Nanjappa joining his wife and a daughter was sold the Schedule C Property infavour of Nasif.

Hence this notice if any person/s, or the family members of Kanakamma or Gowdike Chikkabasappa or his heirs, or Kashi Devaru and his heirs, and Late.Harilal M Patel children (other than the above mentioned), their family members or heirs, or financial institution or anybody claiming any sort of right, title, interest, charges or mortgagees in possession, or claims or any suit, petition is pending on the above mentioned land or Schedule A TO C property of any kind whatsoever nature over the "Schedule A To C Property" please do notify the same to the under signed within Seven days from the date of this public notice, attaching all the relevant documents substantiating such right and claims. If, no such objections are received within Seven days, my client will proceed to purchase the below mentioned property. After the expiry of the said Seven days notice period, my client shall be at liberty not to entertain any complaint or claims.

Schedule A Property

All that is Dry agricultural property bearing Sy. number 179/2 measuring 1 Acre 21 Guntas and Sy.no. 180/2 mesuring 00.23 Guntas totally measuring 2 Acre 4 Guntas situated at Kulagana village, Harve Hobli, Chamaraja Nagar Tq commonly bounded on East by Government Road, West by Land belongs to Channanaika, North by Land belongs to Kashi Devaru, South by Government Road.

Schedule B Property

All that is Dry agricultural property bearing Sy. number 198 measuring 4 Acre 36 Guntas situated at Kulagana village, Harve Hobli, Chamaraja Nagar Tq commonly bounded on East by Land belongs to Kashidevaru, West by Land belongs to Dasanaika, North by Government Road, South by Land belongs to Gowrishankara Swamy.

Schedule C Property

All that is Dry agricultural property bearing Sy. number 196 measuring 1 Acre 20 Guntas and Sy.no. 197/1 measuring 2 Acre 26 Guntas situated at Kulagana village, Harve Hobli, Chamaraja Nagar Tq commonly bounded on East by Land belongs to Chennabasava Devaru, West by Land belongs to Kashi Devarau, North by Land belongs to Harilal M Patel, South by Land belongs to Rajabuddi.

Sd/- SUBRAMANYA J
Advocate,KAR-1511/1999
No. 890/4, 1st Floor,1st Main,
Lakshmipuram, Mysore -570 004. Ph No: 9844154581
DATE: 20-01-2026 Email : advocate.subramanya@gmail.com